ಹೊಸ ಮನುಷ್ಯ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಜೂನ್-೨೦೧೦ ಸಂಚಿಕೆ-೧೧



ಮೆಕಾಲೆಯ ಪುನರ್‌ಜನ್ಮವಾಗುತ್ತಿದೆ ಜೋಕೆ

ಜನಪದ ವಿಚಾರದಲ್ಲಿ

ಜೂನ್-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್- ೨೦೧೦
ಸಂಪುಟ - ೧೦
ಸಂಚಿಕೆ - ೧೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಯಾವ ಪರಿಣಾಮಕ್ಕಾಗಿ ಕಾಯುತಿದೆ ಬ್ರಹ್ಮಾಂಡ?

ಮಳೆಯ ಹನಿಗಳಿಗಾಗಿ ಕಾಯುವುದು ಚಾತಕ;
ಹೊಂಚಿ ಕಾಯುವುದು ಹುಲಿ ಜಿಂಕೆಗಾಗಿ;
ಪ್ರಿಯೆಯ ಕರೆಯುತ್ತ ಕಾಯುವುದು ಕೋಗಿಲೆ;
ವಿಟ ಪುರುಷನಿಗಾಗಿ ಕಾಯುವಳು ಅಭಿಸಾರಿಕೆ;
ಅಭಿಸಾರಿಕೆಗಾಗಿ ಕಾಯುವನು ವಿಟಪುರುಷ;
ಹೂವಿನ ಮೊಗ್ಗು ಕಾಯುವುದು
ಅರುಣೋದಯಕ್ಕಾಗಿ;
ಜಲಭರ್ತಿಗಾಗಿ ಕಾಯುವುವು ಕೆರೆಕುಂಟೆ;
ವರ್ತಕ ಕಾಯುವನು ಕೊಳ್ಳುವವಗಾಗಿ;
ಕಕ್ಷಿಗಾರನಿಗಾಗಿ ಕಾಯುವನು ವಕೀಲ;
ಸೋತ ಜಟ್ಟಿ ಕಾಯುವನು ಸೇಡಿಗಾಗಿ;
ಪದಚ್ಯುತ ಅರಸ ಕಾಯುವನು ಸಿಂಹಾಸನಕ್ಕಾಗಿ;
ಮುಂದಾಳುತನಕ್ಕಾಗಿ ಕಾಯುವನು ರಾಜಕಾರಣಿ;
ಬೆಕ್ಕು ಕುಳಿತು ಕಾಯುವುದು ಇಲಿಗಾಗಿ;
ಸಮುದ್ರ ಕಾಯುವುದು ಹುಣ್ಣಿಮೆ ಚಂದ್ರನಿಗಾಗಿ;
ಪಳಗಿದ ಆನೆ ಕಾಯುವುದು ಕಬ್ಬಿನ ಜಲ್ಲೆಗಾಗಿ;
ಕನ್ಯೆ ಕಾಯುವಳು ವಿವಾಹ ಮಹೂರ್ತಕ್ಕಾಗಿ;
ಕೈ ಚಪ್ಪಾಳೆಗಾಗಿ ಕಾಯುವನು ಭಾಷಣಕಾರ;
ಸ್ಫೂರ್ತಿಗಾಗಿ ಕಾಯುವನು ಕಲೆಗಾರ;
ಸಂಜೆಗಾಗಿ ಕಾಯುವುದು ಹಗಲು;
ಬೆಳಗಿಗಾಗಿ ಕಾಯುವುದು ರಾತ್ರಿ;
ಶಾಂತಿಗಾಗಿ ಕಾಯುತಿದೆ ನರ ಪ್ರಪಂಚ;
ಬೇಸರ ಪಡದೆ ಕಾಯುವ ಅಪೇಕ್ಷೆ
ಎಲ್ಲ ಕಡೆಯಲ್ಲು; ಎಲ್ಲದಕು ಎಲ್ಲರಿಗು ನಿರೀಕ್ಷೆ
ಸತತವಾಗಿ. ಪರಿಸ್ಥಿತಿ ಹೀಗಿರುವಾಗ, ರಂಗಯ್ಯ,
ಯಾವುದನು ನೆನೆಯುತ್ತ ಜ್ವಲಿಸುತ್ತಿವೆ ನಕ್ಷತ್ರಗಳು?
ಯಾವ ಪರಿಣಾಮಕ್ಕಾಗಿ ಕಾಯುತಿದೆ ಬ್ರಹ್ಮಾಂಡ?

- ಡಾ.ಎಸ್.ವಿ.ರಂಗಣ್ಣ

ವಿಚಾರ ದೀಪ್ತಿ

ಧರ್ಮ ಕೇಂದ್ರಿತ ಮೀಸಲಾತಿಯು ದೇಶದಲ್ಲಿ ಅಪಾಯಕಾರಿ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ. ಮುಸ್ಲಿಂ ಮೀಸಲಾತಿಗೂ ಈ ಮಾತು ಅನ್ವಯವಾಗುತ್ತದೆ. ಇದು ಸ್ವತಃ ಸಮುದಾಯದ ಸ್ವಾಸ್ಥ್ಯ ಕೆಡಿಸುವುದು ಮಾತ್ರವಲ್ಲ; ಸದ್ಯದ ಇಡೀ ಸಮಾಜಿಕ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಅಪಾಯ ಇದೆ. ಹಿಂದುಳಿದ ವರ್ಗದ ಆಧಾರದಲ್ಲಿ ಮುಸ್ಲಿಮರು ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ಪಡೆಯಬೇಕೆನ್ನುವುದು ಅರ್ಥಮಾಡಿಕೊಳ್ಳುವ ವಿಚಾರವೇ ಆಗಿದೆ. ಮುಸ್ಲಿಮರಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಕೆಲವರು ಮೀಸಲಾತಿ ಫಲಾನುಭವಿಗಳಾಗಿದ್ದಾರೆ. ಆದರೆ ಧರ್ಮದ ಆಧಾರದಲ್ಲಿ ನೀಡುವ ಮೀಸಲಾತಿ ಸೌಲಭ್ಯವನ್ನು ಹಿಂದುತ್ವವಾದಿಗಳು ಸ್ವಹಿತಾಸಕ್ತಿಗೆ ಬಳಸಿಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

ಕೆಲವು ಮುಸ್ಲಿಂ ಮುಖಂಡರು ಮುಸ್ಲಿಂ ಮೀಸಲಾತಿ ಗುಣಮಟ್ಟದ ಬಗ್ಗೆ ಉಡಾಫೆಯ ಮಾತುಗಳನ್ನಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಇವರೆಲ್ಲ ಬೆಂಕಿಯೊಂದಿಗೆ ಸರಸವಾಡುತ್ತಿದ್ದಾರೆ ಎನ್ನಬಹುದೇನೋ? ಈ ನಾಯಕರು ಅನಗತ್ಯವಾಗಿ ಸಮುದಾಯದ ಭಾವನೆಯನ್ನು ಕೆರಳಿಸುತ್ತಿದ್ದಾರೆ. ದೇಶ ವಿಭಜನೆಗೆ ಮುನ್ನ ಆಗಿನ ಮುಸ್ಲಿಂ ಲೀಗ್ ಮಾಡಿದ್ದು ಕೂಡ ಇದನ್ನೇ ಅಲ್ಲವೇ? ನಿಜ ಹೇಳಬೇಕೆಂದರೆ ಸದ್ಯದ ಮುಸ್ಲಿಂ ನಾಯಕರಿಗೆ ಬೇಕಾಗಿರುವುದು ಚುನಾವಣಾ ರಾಜಕೀಯ. ಆದರೆ ಮೀಸಲಾತಿ ವಿಷಯದಲ್ಲಿ ಅವರು ನಡೆದುಕೊಳ್ಳುತ್ತಿರುವ ರೀತಿ ಪಂಥಾಭಿಮಾನದಿಂದ ಕೂಡಿದ್ದಾಗಿದೆ. ಮುಸ್ಲಿಮರಿಗೆ ಮೀಸಲಾತಿ ನೀಡಬೇಕೆನ್ನುವ ಕೂಗು ಹೊಣೆಗೇಡಿತನದ್ದು. ಇದು ಅಂತಿಮವಾಗಿ ದೇಶ ವಿಭಜನೆ ಸಿದ್ಧಾಂತವನ್ನು ಹುಟ್ಟುಹಾಕಬಲ್ಲದು.

– ಕುಲದೀಪ್ ನಯ್ಯರ್

ಮೆಕಾಲೆಯ ಪುನರ್‌ಜನ್ಮವಾಗುತ್ತಿದೆ – ಜೋಕೆ

– *ಸುರೇಂದ್ರ ಕೌಲಗಿ*

ನಮ್ಮ ಭಾವಿ ರಾಷ್ಟ್ರಪತಿಗೆ ಇಂಗ್ಲಿಷ್ ಗೊತ್ತಿರಬೇಕಾಗಿಲ್ಲ, ಆದರೆ ರಾಜಕಾರಣದಲ್ಲಿ ದಕ್ಷರಾದ ವಿದೇಶಿ ಭಾಷೆಗಳನ್ನು ಬಲ್ಲ ವ್ಯಕ್ತಿಗಳ ಸಹಾಯ ಅವನಿಗಿರುತ್ತದೆ. - *ಗಾಂಧೀ (ಜೂನ್-೧೯೪೭)*

೨೦೧೦ ಏಪ್ರಿಲ್ ೧ ಭಾರತದ ಚರಿತ್ರೆಯಲ್ಲಿ ಕರಾಳ ದಿನವಾಗುವುದೆ? ಇದನ್ನು ಕಾದು ನೋಡಬೇಕು. ಆದರೆ ಇತಿಹಾಸ ಮರುಕಳಿಸುತ್ತದೆಂಬ ಮಾತು ಇದೆಯಲ್ಲ? ಈ ಗಾದೆ ಸುಳ್ಳಾಗಬಾರದೆಂಬ ಅರ್ಥದಲ್ಲಿ ನಮ್ಮ ಸರ್ಕಾರ ನಡೆದುಕೊಂಡಿದೆ. ಇಂದಿಗೆ ಸುಮಾರು ೧೭೫ ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪನಿ ಭಾರತವನ್ನು ಭೌತಿಕವಾಗಿ, ರಾಜಕೀಯವಾಗಿ ಮತ್ತು ಮಾನಸಿಕವಾಗಿ ತನ್ನ ಅಧೀನಕ್ಕೆ ತೆಗೆದುಕೊಂಡಿತ್ತು. ಆ ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಧೂರ್ತ ಇಂಗ್ಲಿಷ್ ಅಧಿಕಾರಿಗಳು ತಮ್ಮ ಕಂಪನಿಗೆ ಇಂಗ್ಲೆಂಡ್ ಸರ್ಕಾರ ಕೊಟ್ಟಿದ್ದ ವ್ಯಾಪಾರದ ಸನದನ್ನು ಪಕ್ಕಕ್ಕೆ ಇಟ್ಟು ಭಾರತವನ್ನು ಸುಲಿಯುವುದು ಹೇಗೆ, ಭಾರತೀಯರನ್ನು ನಪುಂಸಕರನ್ನಾಗಿ ಮಾಡುವುದು ಹೇಗೆ, ಅವರು ಸದಾ ಪರಸ್ಪರರಲ್ಲಿ ಕಾದಾಡಿಕೊಂಡಿರುವಂತೆ ಮಾಡುವುದು ಹೇಗೆ, ಶತಮಾನಗಳ ಕಾಲ ಅವರಲ್ಲಿ ದಾಸ್ಯದ ಮನೋಭಾವನೆ ಉಳಿಯುವಂತೆ ಮಾಡುವುದು ಹೇಗೆ, ಒಂದು ವೇಳೆ ಯಾವುದೇ ರಾಜಕೀಯ ಸ್ಥಿತ್ಯಂತರಗಳ ಕಾರಣದಿಂದ ಮುಂದೆ ಎಂದಾದರೊಂದು ದಿನ ಕಂಪನಿ ಭಾರತ ಬಿಟ್ಟು ಹೋಗಬೇಕಾಗಿ ಬಂದರೂ ಭಾರತೀಯರು ಇಂಗ್ಲೆಂಡನ್ನು, ಇಂಗ್ಲೆಂಡಿನ ಸಂಸ್ಕೃತಿಯನ್ನು, ಇಂಗ್ಲೆಂಡಿನ ಅಭಿವೃದ್ಧಿ ನೀತಿಯನ್ನು ತಮಗರಿವಿಲ್ಲದೆಯೇ ಅನುಸರಿಸುವ ಉಪಾಯವನ್ನು ಹೊಂಚುವುದರಲ್ಲಿ ತೊಡಗಿದ್ದರು. ಅಂಥವರಲ್ಲಿ ಮುಖ್ಯವಾದ ವ್ಯಕ್ತಿ ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ. ಈತ ಬುದ್ಧಿವಂತ, ಇತಿಹಾಸಕಾರ. ತನ್ನ ಪ್ರತಿಭೆಯಿಂದ ಅವನು ಗವರ್ನರ್ ಜನರಲ್‌ನ ಕಾರ್ಯಾಂಗ ಸಮಿತಿಯ ಕಾನೂನು ಸದಸ್ಯನಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಮುಖ್ಯಸ್ಥನಾಗಿ ಕೆಲಸಮಾಡಿದ. ಕಂಪನಿಯ ಆಡಳಿತದಲ್ಲಿ ಇವನು ಎಷ್ಟೊಂದು ಪ್ರಭಾವಿ ವ್ಯಕ್ತಿಯಾಗಿದ್ದನೆಂದರೆ ಇವನು ಕೊಟ್ಟ ಸಲಹೆಯನ್ನು ಪ್ರಶ್ನಾತೀತವಾಗಿ ಅಂಗೀಕರಿಸಲಾಗುತ್ತಿತ್ತು. ಮೇಲ್ನೋಟಕ್ಕೆ ಇವನ ಆಶಯಗಳು ಸೂಕ್ತವೂ, ಸಾಧುವೂ ಆಗಿ ಕಾಣುತ್ತಿದ್ದವು. ಆದರೆ ಅಂತರಾಳದಲ್ಲಿಯ ಅವನ ಆಲೋಚನೆ ಹಾಗಿರುತ್ತಿರಲಿಲ್ಲ. ಇದಕ್ಕೆ ಮೆಕಾಲೆ ೧೮೩೫ ಫೆಬ್ರವರಿ ೨ ರಂದು ಕಂಪನಿಯ ಮುಖ್ಯಸ್ಥರಿಗೆ ಭಾರತದಲ್ಲಿಯ ಶಿಕ್ಷಣ ಸುಧಾರಣೆಯ ಬಗ್ಗೆ ಸಲ್ಲಿಸಿದ ಒಂದು ಗೊತ್ತುವಳಿಯೇ ಸಾಕ್ಷಿ. ಆ ಗೊತ್ತುವಳಿಯ ಪ್ರಕಾರ ಕಂಪನಿ

ಸರ್ಕಾರ ಇನ್ನು ಮುಂದೆ ಭಾರತೀಯ ಭಾಷೆಗಳಾದ ಸಂಸ್ಕೃತ ಮತ್ತು ಅರೆಬಿಕ್ ಭಾಷೆಗಳ ಶಾಲೆಗೆ ಅನುದಾನ ಕೊಡಬೇಕಾಗಿಲ್ಲ; ಬದಲಿಗೆ ಭಾರತೀಯರಲ್ಲಿ ಇಂಗ್ಲಿಷ್ ಭಾಷಾ ಜ್ಞಾನ ಬೆಳೆಸಬೇಕು ಎಂಬುದಾಗಿತ್ತು. ಏಕೆಂದರೆ ಮೆಕಾಲೆ ಪ್ರಕಾರ ಒಂದು ಕಪಾಟಿನಲ್ಲಿ ಇಡಬಹುದಾದ ಐರೋಪ್ಯದ ಒಳ್ಳೆಯ ಸಾಹಿತ್ಯಕ್ಕೆ ಇಡೀ ಭಾರತ ಮತ್ತು ಅರೆಬಿಯಾ ಸಾಹಿತ್ಯ ಸಮಾನವಾಗಲಾರದೆಂಬುದು ಅವನ ಅಭಿಪ್ರಾಯವಾಗಿತ್ತು. ಆ ಗೊತ್ತುವಳಿಯನ್ನು ಕಂಪನಿ ಸರ್ಕಾರ ಸ್ವೀಕರಿಸಿದ ೧೮೩೫ ಫೆಬ್ರವರಿ ೨ ಭಾರತದ ಚರಿತ್ರೆಯಲ್ಲಿ ಕರಾಳದಿನವೇ ಆಯಿತೆಂಬುದು ಅಂದಿನಿಂದ ಮುಂದೆ ನಡೆದ ಎಲ್ಲ ಘಟನೆಗಳು ಸಾಕ್ಷಿಯಾಗಿವೆ. ಮೆಕಾಲೆ ೧೭೫ ವರ್ಷಗಳ ಹಿಂದೆ ಬಯಸಿದ್ದಂತೆಯೇ ಭಾರತ ಸ್ವಾತಂತ್ರ್ಯ ಪಡೆದು ಅರವತ್ತೈದು ವರ್ಷಗಳಾದರೂ ಇಂಗ್ಲೆಂಡನ್ನೂ, ಇಂಗ್ಲಿಷನ್ನೂ ಅಪ್ಪಿಕೊಳ್ಳುವ ಕೀಳು ಮನೋಭಾವನೆಯಿಂದ ಹೊರಬರಲಾಗಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಸ್ವತಂತ್ರ್ಯ ಭಾರತದ ಕೇಂದ್ರ ಸರ್ಕಾರ ೨೦೧೦ ಮಾರ್ಚ್ ೯ ರಂದು ಸ್ವದೇಶದ ವಿಶ್ವವಿದ್ಯಾನಿಯಲಗಳ ಕಾರ್ಯಕ್ಷಮತೆಯನ್ನು ಅವಮಾನಗೊಳಿಸುವುದಕ್ಕೆ ಕಾರಣವಾಗುವ ವಿದೇಶಿ ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ ಅನುಕೂಲವಾಗುವ ಮಸೂದೆಗಳಿಗೆ ತನ್ನ ಒಪ್ಪಿಗೆಯನ್ನು ಕೊಟ್ಟಿತು. ಇದರ ಪರಿಣಾಮವಾಗಿ ಇನ್ನು ಮುಂದೆ ಭಾರತದ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿಯ ಬೆಳವಣಿಗೆ ರಭಸವಾಗಿ ನಡೆಯಲಿದೆ. ಏನೆಲ್ಲ ಉತ್ಕ್ರಾಂತಿ, ಏನೆಲ್ಲ ಉಚ್ಚಾಟನೆ, ಏನೆಲ್ಲ ಅನಾಹುತವಾಯಿತೆಂದು ತಿಳಿಯುವುದರೊಳಗಾಗಿಯೇ ಎಲ್ಲ ಘಟನಾವಳಿಗಳು ನಡೆದು ಹೋಗುವಷ್ಟು ವೇಗವಾಗಿ, ರಭಸವಾಗಿ ಬದಲಾವಣೆ ನಡೆಯಲಿದೆ. ಪ್ರಶ್ನೆ ಎಷ್ಟು ಗಂಭೀರವಾಗಲಿದೆಯೆಂದರೆ, ಭಾರತ ಭಾರತವಾಗಿ ಉಳಿಯಲಾರದು. ಜಾಗತೀಕರಣದ ಕಾರಣದಿಂದ ಬಹುರಾಷ್ಟ್ರೀಯ ಕಂಪನಿಯಗಳ ದಾಳಿ ಎಡೆಬಿಡೆಯಿಲ್ಲದೆ ನಡೆಯುತ್ತಿದೆ. ಯಾವ ಭಾರತದೇಶ ಸ್ವತಃ ವಸಾಹತುಶಾಹಿಯ ದುರಾಸೆಗೆ ತುತ್ತಾಗಿ ಪಡಬಾರದ ಕಷ್ಟಕೋಟಲೆಗಳನ್ನು ಅನುಭವಿಸಿತ್ತೋ ಅದೇ ಭಾರತ ಈಗ ಸ್ವತಃ ವಸಾಹತುಶಾಹಿ ದೇಶವಾಗಿ ಪರಿವರ್ತನಗೊಳ್ಳುತ್ತಿದೆ! ಇಂಗ್ಲೆಂಡ್ ತನ್ನ ಕೈಗಾರಿಕಾ ಕ್ರಾಂತಿಯ ಉಳಿವಿಗಾಗಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿದಂತೆ ಈಗ ಭಾರತ ತನ್ನ ಕೈಗಾರಿಕಾ ಕ್ರಾಂತಿಯ ನಿಮಿತ್ತ ತನ್ನದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟಿದೆ. ಈ ಹೊಸ ಸಾಮ್ರಾಜ್ಯಶಾಹಿ ಮನೋಭಾವ ಎಷ್ಟು ಪ್ರಬಲವೂ, ತೀವ್ರವೂ ಆಗಿದೆಯೆಂದರೆ ಭಾರತಕ್ಕೆ ಭೂಮಿ ಸಾಲದಾಗಿ ಅಂತರಿಕ್ಷವೂ ಬೇಕಾಗಿದೆ! ಅಲ್ಲದೆ, ಯಾವ ರೀತಿ ಇಂಗ್ಲೆಂಡ್ ತನ್ನ ಆರ್ಥಿಕ ಹಿತಾಸಕ್ತಿ ಕಾಪಾಡಿಕೊಂಡು ಬರಲು ತನ್ನ ಸಾಮ್ರಾಜ್ಯದಲ್ಲಿಯ ದೇಶಗಳನ್ನು ಶೋಷಣೆಗೆ ಒಳಪಡಿಸಿತೋ ಅದೇ ರೀತಿ ಸ್ವತಂತ್ರ ಭಾರತ ಸರ್ಕಾರ ತನ್ನ ಆರ್ಥಿಕಾಸಕ್ತ ಅಭಿವೃದ್ಧಿ ನೀತಿಗಾಗಿ ತನ್ನ ದೇಶದಲ್ಲಿಯ ಪ್ರಕೃತಿ ಸಂಪತ್ತನ್ನು ಶೋಷಣೆಗೆ ಗುರಿಪಡಿಸಿದೆ, ತನ್ನ ಮಣ್ಣಿನ ಭಾಷೆಗಳನ್ನು ಒಣಗಿಸುತ್ತಿದೆ, ತನ್ನ ಅಸ್ತಿತ್ವದ ಬೆನ್ನೆಲುಬಾಗಿರುವ ಹಳ್ಳಿಗಳನ್ನು ಉಚ್ಚಾಟಿಸುತ್ತಿದೆ, ದೇಶದ ಎಲ್ಲ ಜನರ ಎಲ್ಲ ಕೈಗಳಿಗೆ ಉದ್ಯೋಗ ಕೊಡುವುದರ ಬದಲು ಕೆಲವೇ ಕೆಲ ಬಂಡವಾಳಶಾಹಿಗಳ ಕೈಗಾರಿಕೆಗಳಿಂದ ಬೃಹತ್ ಪ್ರಮಾಣದಲ್ಲಿ ವಸ್ತುಗಳ ಉತ್ಪಾದನೆಗೆ ಪ್ರೋತ್ಸಾಹ ಕೊಡುತ್ತಿದೆ. ಸುಖ ಭೋಗ ವಸ್ತುಗಳನ್ನು ಉತ್ಪಾದಿಸಿ, ಆ ವಸ್ತುಗಳನ್ನು ಖರೀದಿಸಲು ಉತ್ತೇಜಿಸುವಂಥ ಆರ್ಥಿಕ ನೀತಿಯನ್ನು

ಅನುಸರಿಸುತ್ತಿದೆ. ಅಪಾರ ಪ್ರಮಾಣದ ಹಣ, ಶ್ರಮ ತೊಡಗಿಸಿ ಕೃತಕ ಮೌಲ್ಯದ ಪದಾರ್ಥಗಳನ್ನು ತಯಾರಿಸುವ ಮತ್ತು ಆ ಕೃತಕ ಮೌಲ್ಯದ ಪದಾರ್ಥಗಳನ್ನೇ ಸಂಭ್ರಮಿಸುತ್ತ ಕಾಲ ಕಳೆಯುವ ಭಾರತೀಯರನ್ನು ತಯಾರಿಸುತ್ತಿದೆ. ಭಾರತೀಯ ಸಮಾಜದಲ್ಲಿರುವ ಮಾನವ ರತ್ನಗಳನ್ನು ತಯಾರಿಸುವ ಪ್ರಯತ್ನ ಇದುವರೆಗೆ ನಡೆದೇ ಇಲ್ಲ. ಇದಕ್ಕೆ ಕಾರಣ ಮೆಕಾಲೆ ಭಾರತೀಯರಿಗೆ ತೋರಿಸಿದ ಇಂಗ್ಲಿಷ್ ಭಾಷೆಯ ಮೋಡಿ. ಎಲ್ಲರಿಗೂ ಗೊತ್ತಿರುವಂತೆ ಮೆಕಾಲೆಯ ಉದ್ದೇಶ್ಯ ಭಾರತೀಯರನ್ನು ಉನ್ನತ ವ್ಯಕ್ತಿಗಳನ್ನಾಗಿ ಮಾಡುವುದು ಇರದೇ ಕಂಪನಿಯ ಸರ್ಕಾರಕ್ಕೆ ಬೇಕಿದ್ದ ಗುಮಾಸ್ತರನ್ನು ತಯಾರಿಸುವುದು ಮತ್ತು 'ಕೃಷ್ಣವರ್ಣದ ಇಂಗ್ಲಿಷ'ರನ್ನು ತಯಾರಿಸುವುದೇ ಆಗಿತ್ತು. ಅಂದರೆ ಇಂಗ್ಲಿಷ್ ಸಾಮ್ರಾಜ್ಯದ ಮಹಾಯಂತ್ರದ ಕೀಲುಗಳಾಗಿ ಭಾರತೀಯರು ಕೆಲಸ ಮಾಡಬೇಕೆಂಬುದೇ ಆಗಿತ್ತು. ಅಂಥದೇ ಕೆಲಸವನ್ನು ಭಿನ್ನ ರೀತಿಯಲ್ಲಿ, ಭಿನ್ನ ಸ್ವರೂಪದಲ್ಲಿ ಭಾರತ ಸರ್ಕಾರ ವಿದೇಶಿ ವಿಶ್ವವಿದ್ಯಾನಿಲಯಗಳಿಗೆ ಆಹ್ವಾನ ಕೊಡುವುದರ ಮೂಲಕ ಮಾಡುತ್ತಿದೆ. ತನ್ಮೂಲಕ ಭಾರತೀಯ ಶಿಕ್ಷಣ ತಜ್ಞರ ಸಾಮರ್ಥ್ಯಕ್ಕೆ, ಭಾರತೀಯ ಶಿಕ್ಷಣ ಪದ್ಧತಿಗೆ, ಭಾರತೀಯ ಸಂಸ್ಕೃತಿಗೆ ಘೋರ ಅಪಮಾನವೆಸಗಿದೆ. ವಿಜ್ಞಾನ ಕ್ಷೇತ್ರದಲ್ಲಿ, ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕ್ಷೇತ್ರದಲ್ಲಿ, ಆಕಾಶಕಾಯಗಳನ್ನು ಹಾರಿಸುವುದರಲ್ಲಿ ಸ್ಥಳೀಯ ಜ್ಞಾನಕ್ಕೆ, ಸ್ವಾವಲಂಬನೆಗೆ ಒತ್ತುಕೊಡುವ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ವಿದೇಶಿ ತಂತ್ರಗಾರಿಕೆಯನ್ನು ಅಳವಡಿಸಹೊರಟಿರುವುದು ವಿಚಿತ್ರವಾಗಿ ಕಾಣಿಸುತ್ತದೆ. ಯಾವುದೇ ಒಂದು ದೇಶದ ಪ್ರಜೆಗಳನ್ನು ದೇಶಾಭಿಮಾನಿಗಳನ್ನಾಗಿ, ಉದಾರಚರಿತರನ್ನಾಗಿ, ನೀತಿವಂತರನ್ನಾಗಿ, ಸುಸಂಸ್ಕೃತರನ್ನಾಗಿ ಮಾಡುವುದು ಶಿಕ್ಷಣ. ಶಿಕ್ಷಣ ತುಂಬ ಬಲಯುತ ಮಾಧ್ಯಮ. ಅಂಥ ಮಾಧ್ಯಮವನ್ನು ಖಾಸಗಿ ವಿಶ್ವವಿದ್ಯಾನಿಲಯಗಳ, ವಿದೇಶಿ ವಿಶ್ವವಿದ್ಯಾನಿಲಯಗಳ ಸುಪರ್ದಿಗೆ ಕೊಡುವ ಕೆಲಸಕ್ಕಿಂತ ಮೂರ್ಖತನದ ಕೆಲಸ ಬೇರೊಂದಿರಲಾರದು. ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾನಿಲಯಗಳ ಆಡಳಿತಗಾರರ ಮನಸ್ಸಿನಲ್ಲಿ ವ್ಯಾಪಾರಿ ದೃಷ್ಟಿಯಿದೆಯೇ ಹೊರತು, ಕೈಗಾರಿಕಾ ದೃಷ್ಟಿಯಿದೆಯೇ ಹೊರತು ಇನ್ನಾವ ದೊಡ್ಡ ಆದರ್ಶ, ಸಾತ್ವಿಕ ಆದರ್ಶವಿಲ್ಲ, ದುರ್ದೈವದ ಸಂಗತಿಯೆಂದರೆ ಖಾಸಗೀಕರಣ ಮತ್ತು ವಿದೇಶಿಕರಣದ ಹಿಂದೆ ರಾಜಕಾರಣಿಗಳ ಕೈವಾಡವಿದೆ, ಸ್ವತಂತ್ರ ಭಾರತದಲ್ಲಿ ಯೋಜನಾ ಯುಗ ಪ್ರಾರಂಭವಾದಾಗಿನಿಂದಲೂ ನಮ್ಮ ರಾಜಕಾರಣವನ್ನು ಅರ್ಥಶಾಸ್ತ್ರವೇ ನಿರ್ದೇಶಿಸುತ್ತಿದೆ. ಇತ್ತೀಚೆಗಿನ ದೇವರು ಮಾರುಕಟ್ಟೆಯೇ ಆಗಿದೆ. ಆರ್ಥಿಕ ಅಭಿವೃದ್ಧಿಯ ಮೂಲಕ ಭೂಮಿಯ ಮೇಲೆ ಸ್ವರ್ಗವನ್ನು ನಿರ್ಮಿಸಬಹುದೆಂಬ ಭ್ರಮೆಯನ್ನು ಹುಟ್ಟಿಸಲಾಗಿದೆ. ಶಿಕ್ಷಣದ ಫಲಿತಾಂಶವನ್ನು ಅಂತಿಮವಾಗಿ ಆಂತರಿಕ ಒಟ್ಟು ಉತ್ಪಾದನೆ ಜೆಡಿಪಿ ಜೊತೆಗೆ ಹೋಲಿಸಿ ನೋಡಲಾಗುತ್ತಿದೆ.

ನಮ್ಮ ಸರ್ಕಾರ ಒಂದು ಕಡೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದ ವರೆಗೆ ಎಲ್ಲವೂ ಜನಸಾಮಾನ್ಯರ ಎಟುಕಿಗೆ ಸಿಗುವಂತಿರಬೇಕೆಂದು ಹೇಳುತ್ತದೆ. ಇನ್ನೊಂದು ಕಡೆ ಈ ಶಿಕ್ಷಣ ಅನೇಕ ಕಾರಣಗಳಿಂದ ತುಂಬ ದುಬಾರಿಯಾಗುವಂತೆ ಮಾಡುತ್ತದೆ; ಬಡವರಿಗೆ ಅದು ಗಗನಕುಸುಮವನ್ನಾಗಿಸುತ್ತದೆ. ಸರ್ಕಾರವೇ ಇಡೀ ಶಿಕ್ಷಣದ ಭಾರವನ್ನು ಹೊರಬೇಕು. ಆದರೆ ಅಪಾರ ಜನಸಂಖ್ಯೆಯ ಹಿನ್ನೆಲೆಯಲ್ಲಿ ಅದು ಸಾಧ್ಯವಾಗುತ್ತಿಲ್ಲವಾದ್ದರಿಂದ ಖಾಸಗಿ ಮತ್ತು ವಿದೇಶಿ ವಲಯಕ್ಕೆ ಶಿಕ್ಷಣವನ್ನು

ಒಪ್ಪಿಸುತ್ತಿದೆ ಮತ್ತು ದುಬಾರಿಯಾದ ಆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಬ್ಯಾಂಕುಗಳಿಂದ ವಿದ್ಯಾರ್ಥಿಗಳಿಗೆ ಸಾಲಕೊಡಿಸುತ್ತಿದೆ! ಅಂದರೆ ದೇಶದ ಒಬ್ಬ ವಿದ್ಯಾರ್ಥಿ ತನ್ನ ತಲೆಯ ಮೇಲೆ ಸಾಲದ ಹೊರೆಯನ್ನಿಟ್ಟುಕೊಂಡೇ ವ್ಯಾಸಂಗ ಮಾಡಬೇಕು. ವ್ಯಾಸಂಗ ಮಾಡುತ್ತಿರುವಾಗಲೇ ಆ ಸಾಲವನ್ನು ತೀರಿಸುವ ಯೋಚನೆ ಮಾಡುತ್ತ ಹೋಗಬೇಕು. ಇದಕ್ಕಿಂತ ದುರ್ದೈವದ ಪರಿಸ್ಥಿತಿ ನಮ್ಮ ದೇಶದ ವಿದ್ಯಾರ್ಥಿಗಳಿಗೆ ಯಾವುದು ಇರಲು ಸಾಧ್ಯವಿದೆ? ಇತ್ತೀಚೆಗೆ ಬಂದ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಫಲಿತಾಂಶ ನೋಡಿದಾಗ ಅನೇಕ ವಿದ್ಯಾರ್ಥಿಗಳು ತುಂಬ ಕಷ್ಟದಲ್ಲಿ ಓದಿ ಮೆಚ್ಚುವ ರೀತಿಯಲ್ಲಿ ಪಾಸಾಗಿದ್ದಾರೆ. ಹಾಗಾದರೆ ಆ ವಿದ್ಯಾರ್ಥಿಗಳು ದುಬಾರಿ ಶಿಕ್ಷಣದ ಖಾಸಗಿ ಮತ್ತು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆಯುವಂತಿಲ್ಲವೋ? ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ೧೯೧೬ರಲ್ಲಿ ಒಂದು ಮಾತು ಹೇಳಿದ್ದರು. "ಒಬ್ಬ ಚಮ್ಮಾರನು ಅಥವಾ ಅಂಥದೇ ಹಿಂದುಳಿದ ಜಾತಿಯ ವ್ಯಕ್ತಿ ರಾಷ್ಟ್ರಪತಿಯಾಗುವವರೆಗೆ ನನ್ನ ಮನಸ್ಸಿಗೆ ಶಾಂತಿಯಿಲ್ಲ..." ಇಂದಿನ ದುಬಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಗಾಂಧೀಯವರ ಕನಸು ನನಸಾಗಲು ಸಾಧ್ಯವೇ ಇಲ್ಲ.

ವಿದೇಶಿ ವಿಶ್ವವಿದ್ಯಾನಿಲಯಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಇಂಗ್ಲಿಷ್ ಭಾಷೆಯ ಬಲದ ಮೇಲೆ ನಿಂತಿವೆ. ಅವುಗಳಿಗೆ ಇಂಗ್ಲಿಷ್ ಭಾಷೆಯೇ ಪ್ರಾಣ, ಇಂಗ್ಲಿಷ್ ಭಾಷೆಯೇ ಸರ್ವಸ್ವ. ಇಂದಿನ ಯುಗಕ್ಕೆ ಇಂಗ್ಲಿಷ್ ಬೇಕೆನ್ನುವುದರಲ್ಲಿ ವಿವಾದವಿಲ್ಲ. ಆದರೆ ವಿವಾದವಿರುವುದು ಆ ಭಾಷೆಯ ಬಳಕೆ ಎಲ್ಲಿ, ಯಾವಾಗ, ಎಷ್ಟು ಎಂಬುದರ ಬಗ್ಗೆ. ಆ ವಿದೇಶಿ ಭಾಷೆ ಭಾರತೀಯ ಭಾಷೆಗಳನ್ನು ಕೊಲೆ ಮಾಡಿ ಅವುಗಳ ಹೆಣದ ಮೇಲೆ ಸೌಧ ಕಟ್ಟಿಕೊಂಡು ಅಟ್ಟಹಾಸ ಮಾಡಬೇಕೆ ಅಥವಾ ಇರುವ ಎಲ್ಲ ಭಾಷೆಗಳಲ್ಲಿ ಒಂದಾಗಿ, ಸಮರಸವಾಗಿ ಇರುವುದರ ಮೂಲಕ ಸಮಾಜದ ಒಟ್ಟು ಏಳಿಗೆಗೆ ದುಡಿಯ ಬೇಕೆ ಎಂಬುದು ಇಂದಿನ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕಂಡು ಹಿಡಿಯಬೇಕಾದವರು ಸರ್ಕಾರವೂ ಅಲ್ಲ, ಶಿಕ್ಷಣ ಕ್ಷೇತ್ರದಲ್ಲಿರುವ ದಿಗ್ಗಜರೂ ಅಲ್ಲ. ಏಕೆಂದರೆ ಸರ್ಕಾರ ಶಿಕ್ಷಣ ಕ್ಷೇತ್ರವನ್ನು ವಾಣಿಜ್ಯಕರಣಗೊಳಿಸಿಬಿಟ್ಟಿದೆ. ಅಷ್ಟೇ ಅಲ್ಲ, ವಿಶ್ವವಿದ್ಯಾಲಯಗಳಿಂದ ಹೊರಬರುವ ಎಲ್ಲ ಪ್ರಕಾರದ ಪದವೀಧರರಲ್ಲಿಯೂ ವಾಣಿಜ್ಯದ ಮನೋಭಾವನೆಯನ್ನೇ ಮೂಡಿಸಿದೆ. ಸರ್ಕಾರವೂ ಸಹ ಇಂಗ್ಲಿಷ್ ಭಾಷೆಗೇ ಮಣೆಹಾಕಿದೆ. ಇನ್ನು ಶಿಕ್ಷಣ ತಜ್ಞರ ಅಭಿಪ್ರಾಯವು ಇದಕ್ಕೆ ಭಿನ್ನವಾಗಿಲ್ಲ. ಅಲ್ಲದೆ, ಸಮಾಜದಲ್ಲಿರುವ ಹಿಂದುಳಿದ ವರ್ಗಗಳೆಲ್ಲ ಇಂಗ್ಲಿಷ್ ಕಲಿಯಬೇಕೆಂಬ ಚಳುವಳಿಯೂ ಪ್ರಾರಂಭವಾಗಿದೆ. ಈ ಚಳುವಳಿಯ ಸಂಕೇತವಾಗಿ ಉತ್ತರ ಪ್ರದೇಶದ ಬಂಕಾಗಾಂವ್‌ನಲ್ಲಿ ಇಂಗ್ಲಿಷ್ ದಲಿತರ ದೇವಿಯ ವಿಗ್ರಹವನ್ನೂ ಸ್ಥಾಪಿಸಲಾಗಿದೆ. ಕ್ರಮೇಣ ಈ ಚಳುವಳಿಯು ಬೆಳೆಯುವ ಲಕ್ಷಣಗಳು ಕಾಣುತ್ತಿವೆ. ಈ ಕಾರಣದಿಂದಲೇ "ಮೆಕಾಲೆ ಪುನರ್‌ಜನ್ಮವೆತ್ತುತ್ತಿದ್ದಾನೆ–ಜೋಕೆ" ಎಂಬ ಮಾತನ್ನು ಹೇಳಿರುವುದು. ಜಗತ್ತಿನಲ್ಲಿ ಇಂಗ್ಲಿಷ್ ಒಂದೇ ಪ್ರಬುದ್ಧ ಬಾಷೆಯೂ ಅಲ್ಲ, ಸಂಪರ್ಕ ಭಾಷೆಯೂ ಅಲ್ಲ. ನಮಗೆ ನಿಜವಾಗಿಯೂ ಜ್ಞಾನ ಬೇಕಿದ್ದರೆ, ವ್ಯವಹಾರಿಕ ಭಾಷೆ ಬೇಕಿದ್ದರೆ ಅದೆಲ್ಲವನ್ನೂ ನಮ್ಮ ನಮ್ಮ ಪ್ರಾದೇಶಿಕ ಭಾಷೆಗಳಿಂದ ಪಡೆಯುವುದರ ಜೊತೆಗೆ ಫ್ರೆಂಚ್, ರಶಿಯನ್, ಜಪಾನೀಸ್, ಜರ್ಮನಿ ಭಾಷೆಗಳ ಮೂಲಕವೂ ಪಡೆಯಬಹುದು. ಹೇರಳವಾಗಿ ಉದ್ಯೋಗವಕಾಶವನ್ನು ಪಡೆಯಬಹುದು. ಈ ಬಗ್ಗೆ

ಚಿಂತನೆ ಮತ್ತು ಗಂಭೀರ ಪ್ರಯತ್ನ ನಡೆಯಬೇಕಿದೆ.

ವಿದೇಶಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ವಿರೋಧವಿದೆಯೇ ಹೊರತು, ಜ್ಞಾನಕ್ಕಲ್ಲ. ಜ್ಞಾನ ನಮಗೆ ಎಲ್ಲ ದಿಕ್ಕುಗಳಿಂದಲೂ ಹರಿದುಬರಲಿ, ಆದರೆ ಅದರೊಂದಿಗೆ ನಮ್ಮತನವನ್ನು ಕಳೆದುಕೊಳ್ಳುವುದು ಬೇಡ ಎಂಬ ಗಾಂಧೀಯವರ ಮಾತಿನ ಕಡೆಗೂ ನಮ್ಮ ಗಮನ ಹರಿಯಬೇಕಿದೆ.

ಕೇವಲ ಇಂಗ್ಲಿಷ್ ಭಾಷೆಯನ್ನೊಂದನ್ನು ಕಲಿತದ್ದಕ್ಕೇ ನಮ್ಮ ದೇಶ ತದ್ರೂಪಿ ಅಮೇರಿಕಾ, ಇಂಗ್ಲೆಂಡ್ ಆಗುತ್ತಿರುವಾಗ ಇನ್ನು ಪಾಶ್ಚಿಮಾತ್ಯ ದೇಶಗಳ ವಿಶ್ವವಿದ್ಯಾನಿಲಯಗಳನ್ನೇ ಇಲ್ಲಿ ಬರಮಾಡಿಕೊಂಡು, ಅವುಗಳ ಮೂಲಕ ನಮ್ಮ ದೇಶದ ಮಕ್ಕಳು ಅವರು ಹಿಂದುಳಿದವರೇ ಆಗಿರಲಿ, ಮುಂದುವರಿದವರೇ ಆಗಿರಲಿ ಶಿಕ್ಷಣ ಪಡೆಯುತ್ತ ಹೋದರೆ ಇನ್ನು ಕೇವಲ ಒಂದು ದಶಕದೊಳಗಾಗಿ ಭಾರತ ದೇಶ ಎಂಬುದೇ ಇರುವುದಿಲ್ಲ. ಅದು ಇಂಡಿಯಾ ಅಗಿರುವುದು. ಇದನ್ನೇ ಮೆಕಾಲೆ, ಅವನ ಸಂತತಿ, ಅವನ ಆರಾಧಕರು ಬಯಸುತ್ತಿರುವುದು. ಅಂಥ ದುರ್ದೆಶೆ ಭಾರತಕ್ಕಂತೂ ಬರಬಾರದು. ೧೯೪೨ರಲ್ಲಿ ಮಹಾತ್ಮಾ ಗಾಂಧೀ ಇಂಗ್ಲಿಷ್ ಸರ್ಕಾರದ ವಿರುದ್ಧ "ಭಾರತ ಬಿಟ್ಟು ತೊಲಗಿ" ಎಂಬ ಆಂದೋಲನ ನಡೆಸಿ ಇಂಗ್ಲಿಷರ ಆಡಳಿತದ ನೊಗವನ್ನು ಕಿತ್ತುಹಾಕಿದಂತೆ ಈಗ "ಇಂಗ್ಲಿಷನ್ನು ತೊಲಗಿಸಿ" ಎಂಬ ಅಂದೋಲನ ನಡೆಸಬೇಕಿದೆ. ಈ ಆಂದೋಲನದ ಪ್ರಕ್ರಿಯೆಯ ಕಾರಣದಿಂದ ಎಲ್ಲ ಭಾರತೀಯ ಭಾಷೆಗಳು ಇನ್ನಷ್ಟು ಶ್ರೀಮಂತಗೊಳ್ಳುವವು, ವಿಜ್ಞಾನ ಮತ್ತು ತಂತ್ರಜ್ಞಾನ ಜನಸಾಮಾನ್ಯನಿಗೆ ಗೊತ್ತಾಗುವವು, ದಲಿತ-ದಲಿತೇತರ ಎಂಬ ಭೇದ ಅಳಿಯುವುದು, ಆರ್ಥಿಕ ಅಸಮಾನತೆ ಇಲ್ಲವಾಗುವುದು, ಸ್ವಾತಂತ್ರ್ಯದ ನಿಜವಾದ ಅರ್ಥ ಆಗುವುದು. ಆಗ ನಮ್ಮ ಪ್ರಜಾಪ್ರಭುತ್ವ ಶ್ರೀಸಾಮಾನ್ಯನ ಪ್ರಜಾಪ್ರಭುತ್ವವಾಗುವುದು ಮತ್ತು ಗಾಂಧೀಜಿ ಹೃದಯಪೂರ್ವಕವಾಗಿ ಬಯಸಿದ್ದಂತೆ ಧೈರ್ಯಶಾಲಿ, ನಿಸ್ವಾರ್ಥ ಮತ್ತು ಶುದ್ಧ ಹೃದಯದ ಪೌರಕಾರ್ಮಿಕ ಮಗಳು ರಾಷ್ಟ್ರಪತಿಯಾಗಬಹುದು. ಅಂಥ ಹೊಸ ಪ್ರಪಂಚದ ಸೃಷ್ಟಿಗೆ ಹೊಸ ರೀತಿಯ ಶಿಕ್ಷಣ ಬೇಕು. ಇಂದು ಯಾವುದನ್ನು ಅತ್ಯಾಧುನಿಕ ಶಿಕ್ಷಣ ಪದ್ಧತಿಯೆಂದೂ, ಧರೆಗೆ ಸ್ವರ್ಗವನ್ನು ತರುವ ಶಿಕ್ಷಣ ಪದ್ಧತಿಯೆಂದೂ ತಿಳಿದಿದ್ದೇವೆಯೋ ಆ ಶಿಕ್ಷಣ ಪದ್ಧತಿ ಇಂದಿನ ಅತಿ ಆಧುನಿಕ ವಿಜ್ಞಾನ ಯುಗದಲ್ಲಿ ಜನತೆಯನ್ನು ಅನಾಗರಿಕ ಯುಗಕ್ಕೆ ಕೊಂಡೊಯ್ಯುವ ಶಿಕ್ಷಣವಾಗಿದೆ. ಇಂಗ್ಲಿಷ್ ಭಾಷೆ ಆಧಾರಿತ ಆಧುನಿಕ ಶಿಕ್ಷಣ ಪದ್ಧತಿಯ ಕಾರಣದಿಂದಲೇ ಇಂದು ಜಗತ್ತಿನ ತುಂಬ ಅಣು ಅಸ್ತ್ರಗಳು ತುಂಬಿವೆ; ಶಿಕ್ಷಿತರೆಲ್ಲ ಭ್ರಷ್ಟರಾಗಿದ್ದಾರೆ; ಸಮಾಜ ಒಡೆದು ಹೋಳಾಗಿದೆ, ಅಶಾಂತಿ ತಾಂಡವವಾಡುತ್ತಿದೆ, ಹಿಂಸೆ ದಿನನಿತ್ಯದ ಕರ್ಮವಾಗಿದೆ, ಸನಾತನ ಮೌಲ್ಯಗಳು ಮಾಯವಾಗಿ ಹಣ ಪ್ರಧಾನವಾಗಿದೆ. ಮುಂದಿನ ದುರಂತಕ್ಕೆ ಕಡಿವಾಣ ಹಾಕಬೇಕಿದೆ. ಆ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ವಿದೇಶಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳನ್ನು ಧಿಕ್ಕರಿಸಬೇಕು, ಮೆಕಾಲೆಯ ಮರುಜನ್ಮ ಯಾವುದೇ ರೂಪದಲ್ಲಿಯಾಗದಂತೆ ಜಾಗ್ರತೆವಹಿಸಬೇಕು. ಜನನಾಯಕರು ಟೊಂಕಕಟ್ಟಬೇಕು.

* * *

ಬಹುಗುಣರೊಂದಿಗೆ ಮೊದಲ ಭೇಟಿ

– ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

"ನೀವೆಲ್ಲಿದ್ದೀರಾ" ಅವರು ಕೇಳಿದರು. "ಹೌದು, ಶಿಮ್ಲಾದಲ್ಲಿದ್ದೇನೆ, ನಾನು ಹೇಳಿದೆ. "ಹಾಗೋ, ನೀವು ಕೂಡಲೆ ಬನ್ನಿ" ಅಂದರು. "ನಾನು ನಾಳೆ ನಿಮ್ಮ ಭೇಟಿಗೆ ಬರಬಹುದೋ?" ಎಂದು ಕೇಳಿದೆ. "ಆಗಲಿ. ನೀವು ನನ್ನನ್ನು ಯಾವಾಗ ಬೇಕಾದರೂ ಭೇಟಿ ಮಾಡಬಹುದು! ನಾನು ಇನ್ನು ಎರಡು ವಾರ ಇಲ್ಲಿಯೇ ಇರುತ್ತೇನೆ." "ಆಗಬಹುದು. ನಾನು ನಿಮ್ಮನ್ನು ನನ್ನ ವಿಚಾರಗಳೊಂದಿಗೆ ನಾಳೆ ಭೇಟಿ ಮಾಡುವೆ" ಎಂದು ಹೇಳಿದೆ. "ಆಗಬಹುದು. ದೂರವಾಣಿಯಲ್ಲಿ ನನ್ನೊಂದಿಗೆ ಮಾತನಾಡಿದ್ದಕ್ಕಾಗಿ ವಂದನೆ. ಬೈ, ಬೈ!"

ಈ ಭೇಟಿಗಾಗಿ ತಿಂಗಳುಗಟ್ಟಲೆ ಯೋಜನೆ ಮಾಡಿದ ಮೇಲೆ ನಾನು ಸಿದ್ಧನಾಗುವ ಮೊದಲೆ ಸುವರ್ಣ ಸದೃಶ ಅವಕಾಶಗಳು ಬರಲಾರಂಭಿಸಿದವು. ಚಿಪ್ಕೊ ಚಳುವಳಿಯ ಬಗ್ಗೆಯೂ ಕೇಳಿದ್ದೆ. ಚಿಪ್ಕೊ ಚಳುವಳಿ ಅತ್ಯಂತ ಯಶಸ್ವಿ ತಳಮಟ್ಟದ ಚಳುವಳಿಯೆಂದು ಎಲ್ಲೆಡೆ ಪ್ರಸಿದ್ಧವಾಗಿತ್ತು. ಬಹುಗುಣರವರನ್ನು ಸ್ವತಃ ಭೇಟಿ ಮಾಡಿದ ಬುದ್ಧಿಜೀವಿಗಳನ್ನು ನಾನು ಅಮೇರಿಕದಲ್ಲಿ ಭೇಟಿ ಮಾಡಿ ಮಾತನಾಡಿದ್ದೆ. ಅವರು ಬಹುಗುಣರನ್ನು ಸಂದರ್ಶಿಸುವ ಬಗೆ ಹೇಗೆ ಎಂಬುದನ್ನು ತಿಳಿಸುವುದಾಗಿ ಭರವಸೆಕೊಟ್ಟಿದ್ದರು. ಆದರೆ ನಾನು ಅವರಿಗೆ ಕಳುಹಿಸಿದ ಇ–ಮೇಲ್‌ಗಳಿಗೆ ಉತ್ತರವೇ ಬರಲಿಲ್ಲ. ಈಗ ಭಾರತ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಇದೇ ವಿಷಯವಾಗಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಯ ಭೇಟಿಯಾಯಿತು. ಅವನಿಗೆ ಬಹುಗುಣರ ಪರಿಚಯವಿತ್ತು ಹಾಗೂ ಅವನ ಬಳಿ ಅವರ ದೂರವಾಣಿ ಸಂಖ್ಯೆಯೂ ಇತ್ತು. "ನೀನು ಸುಮ್ಮನೆ ದೂರವಾಣಿ ಮಾಡು. ಪೂರ್ವಪರಿಚಯದ ಅಗತ್ಯವಿಲ್ಲ. ಬಹುಗುಣ ತುಂಬ ಸ್ನೇಹಿ ಸ್ವಭಾವದ ವ್ಯಕ್ತಿ" ಯೆಂದೂ ಆತ ಯಾವ ಅಳುಕೂ ಇಲ್ಲದೆ ಹೇಳಿದ.

ಈಗ ನಾನು ನನ್ನ ಅಧ್ಯಯನದ ಪುಸ್ತಕಗಳನ್ನು ಬದಿಗಿಡಲು ನಿಶ್ಚಯಿಸಿದೆ. ಯೋಚನಾಮಗ್ನನಾಗಿ ಹಾಗೂ ತುಂಬ ಪುಳಕಿತನಾಗಿ ಅಧ್ಯಯನ ಸಂಸ್ಥೆಗೆ ಹಿಂದಿರುಗಿದೆ. ನಿರ್ದೇಶಕರನ್ನು ಭೇಟಿ ಮಾಡಿದೆ. ಮಧ್ಯಂತರದಲ್ಲಿಯೇ ಹೊರಟು ಹೋಗುತ್ತಿರುವುದಕ್ಕೆ ಕ್ಷಮೆ ಕೇಳಿದೆ. ಬೇಗನೆ ಹಿಂದಿರುಗುವುದಾಗಿ ಹೇಳಿದೆ. ನಂತರ ಕೂಡಲೆ ನನ್ನ ಗಂಟು ಕಟ್ಟಿದೆ. ನಲ್ವತ್ತೆಂಟು ಗಂಟೆಯೊಳಗಾಗಿ ನಾನು ಪರ್ವತಶ್ರೇಣಿಯ ತಿರುವು ರಸ್ತೆಗಳಲ್ಲಿ ಮತ್ತು ಡೆಹರಾಡುನ್ ಪಟ್ಟಣಕ್ಕೆ ಇಳಿಜಾರಾದ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದೆ. ಅದೊಂದು ಶ್ರಮದಾಯಕ ಪ್ರವಾಸ. ಬಸ್ ಡೆಹರಾಡುನ್ ತಲುಪುವಷ್ಟರೊಳಗೆ ಕತ್ತಲಾಗಿತ್ತು. ಉತ್ತರ ಪ್ರದೇಶ ಪ್ರವಾಸೋದ್ಯಮ ಇಲಾಖೆ ನಡೆಸುವ ವಸತಿಗೃಹದಲ್ಲಿ ಬಿಡಾರ ಮಾಡಿದೆ. ಟೆಹರಿಗೆ ಹೋಗುವ ವಾಹನಗಳ ಬಗ್ಗೆ ವಿಚಾರಿಸಿದೆ. "ಅಲ್ಲಿಗೆ ಬಸ್ ಇಲ್ಲವೆಂದು" ಸ್ವಾಗತ ಕಛೇರಿಯವರು ಹೇಳಿದರು.

"ನೀವು ಜೀಪ್ ಬಾಡಿಗೆಗೆ ತೆಗೆದುಕೊಳ್ಳಬೇಕು". "ಅದೆಲ್ಲಿ ಸಿಗುತ್ತದೆ" ಎಂದು ಕೇಳಿದೆ. "ಈ ರಸ್ತೆಗುಂಟ ಹೋಗಿ, ಎರಡು ಮನೆಗಳ ನಂತರ, ಎಡಕ್ಕೆ ತಿರುಗಿ. ಪುನಃ ಒಂದು ಮನೆಯ ನಂತರ ನಿಮಗೆ ಜೀಪ್ ನಿಲ್ದಾಣ ಕಾಣುವುದು. ಅಲ್ಲಿ ಜೀಪುಗಳು ಇರುವವು.

ನಾನು ಜೀಪನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಗಿಲ್ಲ, ಕುಳಿತುಕೊಳ್ಳಲು ಒಂದು ಟಿಕೆಟ್ ಖರೀದಿಸಿದರೆ ಸಾಕೆಂದು ಅಲ್ಲಿಗೆ ಹೋದ ಮೇಲೆ ಗೊತ್ತಾಯಿತು. ಡ್ರೈವರ್ ಪಕ್ಕ ಮುಂಭಾಗದಲ್ಲಿ ಮೂವರನ್ನು ಕೂಡಿಸುತ್ತಾರೆಂದು ಗೊತ್ತಾದ ಮೇಲೆ, ನಾನೇ ಎರಡು ಸ್ಥಳಗಳ ದುಡ್ಡು ಕೊಡುವೆನೆಂದು ಹೇಳಿ, ಆರಾಮವಾಗಿ ಕುಳಿತುಕೊಳ್ಳಲು ಅವಕಾಶ ಮಾಡಿಕೊಂಡೆ. ನನ್ನ ಮೂಟೆ ಜೀಪ್ ಮೇಲೆ ಸುರಕ್ಷಿತವಾಗಿತ್ತು. ಬೆಳಿಗ್ಗೆ ಎಂಟು ಗಂಟೆಗೆ ಜೀಪ್ ಹೊರಟಿತು. ಎಲ್ಲವೂ ಸರಿಹೋದರೆ ಮಧ್ಯಾಹ್ನದ ಹೊತ್ತಿಗೆ ಡೆಹರಾಡುನ್ ತಲುಪಬಹುದೆಂದುಕೊಂಡೆ. ದಾರಿ ಬಹು ಸುಂದರವಾದ ಪ್ರದೇಶದ ಮೂಲಕ ಸಾಗಿತ್ತು. ಕೆಲವೊಂದು ಸ್ಥಳವನ್ನು ಚಿತ್ರೀಕರಿಸಬೇಕೆಂದು ಬಯಸಿ ಜೀಪ್ ನಿಲ್ಲಿಸಲು ಡ್ರೈವರ್‌ನನ್ನು ಒತ್ತಾಯಿಸಿದೆ. ಅವನು ಸಂತೋಷದಿಂದ ಸಹಕರಿಸಿದ. ಹಂತಹಂತವಾದ ಗದ್ದೆಗಳಲ್ಲಿ ಬೆಳೆದು ನಿಂತಿದ್ದ ಭತ್ತದ ಪೈರು ಸ್ಥಳೀಯ ಬೀಜದ್ದಾಗಿರದೆ ಫಸಲನ್ನು ಹೆಚ್ಚಿಸುವುದಕ್ಕಾಗಿ ಬ್ರಿಟಿಷರು ಪರಿಚಯಿಸಿದ್ದ ಬೀಜಗಳದ್ದೆಂದು ನನಗೆ ನಂತರ ಬಹುಗುಣ ತಿಳಿಸಿದರು. ಆ ಪ್ರದೇಶದ ಮೂಲ ಆರ್ಥಿಕ ಸಂಪನ್ಮೂಲಗಳು ಪಶು ಸಂಗೋಪನೆ, ಲಘು ವ್ಯವಸಾಯ; ಅರಣ್ಯಾವನ್ನವಲಂಬಿಸಿದ ಆಹಾರ, ಮೇವು, ಸೌದೆ, ಗೊಬ್ಬರ ಮತ್ತು ನಾರು. ಪ್ರಯಾಣದ ಕೊನೆಯ ಘಟ್ಟವಾಗಿ ಒಂದು ಕಿರಿದಾದ ಸೇತುವೆಯನ್ನು ದಾಟಿ ತುಂಬ ತಿರುವಾದ ರಸ್ತೆಯಲ್ಲಿ ಹೋಗಿ, ನಂತರ ಕಡಿದಾದ ರಸ್ತೆ ಹತ್ತಿ ನಗರದ ಮಧ್ಯಭಾಗಕ್ಕೆ ಬಂದು ತಲುಪಿದೆವು. ಜೀಪು ಏದುಸಿರು ಬಿಡುತ್ತ ರಸ್ತೆಯ ಪಕ್ಕದಲ್ಲಿ ನಿಂತಿದ್ದ ಇತರ ಜೀಪುಗಳ ಸಾಲಿನಲ್ಲಿ ನಿಂತಿತು. ಸ್ವಲ್ಪ ದೂರದಲ್ಲಿ ಬಸ್ ನಿಲ್ದಾಣವಿತ್ತು. ಅಲ್ಲಿ ಡಿಸೆಲ್ ವಾಸನೆ, ಮಣ್ಣು ಗಾಳಿಯನ್ನಾವರಿಸಿತ್ತು. ರಸ್ತೆ ಗುಂಟ ಅಂಗಡಿಗಳ ಸಾಲು. ಎಡಭಾಗದ ಕಡೆಗೆ ದೂರದಲ್ಲಿ ಗುಡ್ಡದ ಮೇಲೆ ರಿವರ್ ವ್ಯೂ ಹೋಟೆಲ್ ಇತ್ತು. "ಡೆಹರಾಡುನ್‌ಗೆ ಬಂದ ಕೂಡಲೆ ರಿವರ್‌ವ್ಯೂ ಹೋಟೆಲ್‌ಗೆ ಬರಲು ಬಹುಗುಣ ಹೇಳಿದ್ದರು. ಅಲ್ಲಿ ಸ್ಥಳ ಕಾದಿರಿಸಬೇಕೆ ಎಂದು ಕೇಳಿದ್ದೆ. ಅಗತ್ಯವೇನಿಲ್ಲ. ಅಲ್ಲಿ ಯಾವಾಗಲೂ ಸ್ಥಳ ಸಿಗುತ್ತದೆ ಎಂದು ಅವರು ಹೇಳಿದ್ದರು. ಅಲ್ಲಿಗೆ ಬಂದ ನಂತರ ನಿಮ್ಮನ್ನೆಲ್ಲಿ ಹುಡುಕುವುದು ಎಂದು ಕೇಳಿದ್ದೆ. ಅದಕ್ಕವರು ಯಾರನ್ನಾದರೂ ಕೇಳಿ. ನಾನೆಲ್ಲಿರುವೆನೆಂದು ಅಲ್ಲಿಯ ಎಲ್ಲರಿಗೂ ಗೊತ್ತಿದೆ ಎಂದು ವಿವರಣೆ ಕೊಟ್ಟಿದ್ದರು. ಹೆಗಲ ಮೇಲೆ ಉದ್ದನೆಯ ಬ್ಯಾಗ್, ಕೈಯಲ್ಲೊಂದು ಬ್ಯಾಗ್ ಹಿಡಿದುಕೊಂಡು ಗುಡ್ಡ ಹತ್ತಲಾರಂಭಿಸಿದೆ. ಇಲ್ಲಿ ಕೋತಿಗಳ ಕಾಟವಿದೆ, ಆದ್ದರಿಂದ ನೀವು ಹೊರಗೆ ಹೋಗುವಾಗ ಕಿಡಕಿಗಳನ್ನು ಮುಚ್ಚಿ ಹೋಗಲು ಮರೆಯಬೇಡಿ ಎಂದು ರೂಂ ತೋರಿಸಲು ನನ್ನೊಂದಿಗೆ ಬರುತ್ತಿದ್ದ ಯುವಕ ಸೂಚನೆ ಕೊಡುತ್ತಿದ್ದ. ಹೋಟೆಲ್ ತಲುಪಿದ ಮೇಲೆ "ನನ್ನಿಂದ ನಿಮಗೆ ಇನ್ನು ಏನಾದರೂ ಸಹಾಯ ಬೇಕೆ?" ಎಂದು ಆತ ಕೇಳಿದ. "ನಿನಗೆ ಸುಂದರಲಾಲ್ ಬಹುಗುಣ ಗೊತ್ತೆ?", "ಗೊತ್ತು. ಅವರು ನನ್ನ ಚಿಕ್ಕಪ್ಪ". "ಓ, ನಿನ್ನ ಚಿಕ್ಕಪ್ಪ!" ಉದ್ಗಾರ ತೆಗೆದೆ. "ಅವರು

ನಿಜವಾದ ಚಿಕ್ಕಪ್ಪನಲ್ಲ. ಆದರೆ ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರು ನನಗೆ ಚಿಕ್ಕಪ್ಪನಂತೆಯೇ ಇದ್ದಾರೆ. ನನಗಷ್ಟೇ ಅಲ್ಲ, ಇತರರಿಗೂ ಕೂಡ" ಎಂದು ಆ ಯುವಕ ಹೇಳಿದ. ಅಷ್ಟು ಹೊತ್ತಿಗೆ ನಾವಿಬ್ಬರು ಹೋಟೆಲಿನ ರೂಂ ಹೊರಭಾಗ ತಾರಸಿಯ ಮೇಲೆ ನಿಂತಿದ್ದೆವು. ಅಲ್ಲಿ ಕಾಣುವ ಸೇತುವೆ ಕಾಣುತ್ತದೆಯಲ್ಲವೆ? ಎಂದು ಆ ಯುವಕ ತೋರಿಸಿದ. ನನಗೆ ಕಾಣಿಸಿತು. ಭಾಗೀರಥಿ ನದಿಯ ಮೇಲಿರುವ ಆ ಸೇತುವೆಯನ್ನೇ ದಾಟಿ ನಾನು ಊರಿನೊಳಗೆ ಬಂದಿದ್ದೆ. "ಸುಂದರಲಾಲ್ ಅಲ್ಲಿ ಆ ಸೇತುವೆಯ ಎಡಭಾಗದಲ್ಲಿ, ಒಂದು ಸಣ್ಣ ಗುಡಿಸಲಲ್ಲಿ ವಾಸವಾಗಿದ್ದಾರೆ. ಅಲ್ಲಿಗೆ ಹೋದರೆ ನಿಮಗೆ ಗೊತ್ತಾಗುವುದು. ಅವರು ನಿಮಗೆ ಖಂಡಿತ ಸಿಗುವರು. ಅವರು ನಿಮ್ಮ ನಿರೀಕ್ಷೆಯಲ್ಲಿದ್ದಾರೆ." ಎಂದು ಆತ ಹೇಳಿದ. ಕೂಡಲೆ ನಾನು ನನ್ನ ಕ್ಯಾಮರಾ ಬ್ಯಾಗ್ ಮತ್ತು ನೋಟ್‌ಪುಸ್ತಕ ಹಾಗೂ ಟೇಪ್ ರೆಕಾರ್ಡರ್ ಎತ್ತಿಕೊಂಡು ಹೊರಟೇಬಿಟ್ಟೆ. ಪೇಟೆಯ ಬಳಿ ಇರುವ ಬಸ್‌ಸ್ಟಾಂಡ್ ಪಕ್ಕ ಮೈದಾನದಲ್ಲಿ ಮಕ್ಕಳು ಕ್ರಿಕೆಟ್ ಆಡುತ್ತಿದ್ದರು. ಹೊಸಬನಾದ ನಾನು ಅಲ್ಲಿಂದ ನಡೆದು ಹೋಗುವಾಗ ನನ್ನ ಕಡೆ ಕುತೂಹಲದಿಂದ ನೋಡುತ್ತ ನಿಂತುಬಿಟ್ಟರು. ಸ್ವಲ್ಪ ಹೊತ್ತು ತಮ್ಮ ಆಟವನ್ನೇ ನಿಲ್ಲಿಸಿಬಿಟ್ಟರು. ಸ್ವಲ್ಪ ಹೊತ್ತಿನ ನಂತರ ಆಟವನ್ನು ಪುನಃ ಪ್ರಾರಂಭಿಸಿದರು. ನಾನು ಕಬ್ಬಿಣದ ಸೇತುವೆ ದಾಟುತ್ತ ನಡೆದೆ. ಪಕ್ಕದಲ್ಲಿ ಸಂಚರಿಸುತ್ತಿದ್ದ ಟ್ರಕ್ಕುಗಳ ರಭಸದ ಓಡಾಟಕ್ಕೆ ಕಬ್ಬಿಣದ ಸೇತುವೆ ನಡುಗುತ್ತಿತ್ತು. ನನ್ನ ಎಡ ಭಾಗಕ್ಕೆ ತಾತ್ಕಾಲಿಕವಾಗಿ ನಿರ್ಮಿಸಿದ ಗುಡಿಸಲು ಮತ್ತು ದೇವಸ್ಥಾನ ಕಣ್ಣಿಗೆ ಬಿದ್ದವು. ಆವರಣದ ಹತ್ತಿರ ಹೋಗುತ್ತಿದ್ದಂತೆ ಒಬ್ಬ ಯುವಕ ನನ್ನ ಬಳಿ ಬಂದು, "ನಿಮಗೆ ಸಹಾಯ ಮಾಡಲೆ" ಎಂದು ಕೇಳಿದ. ಆಗಬಹುದೆಂದು ನಾನು ಉತ್ತರಿಸುತ್ತಾ "ನನ್ನ ಹೆಸರು ಜಾರ್ಜ್ ಜೇಮ್ಸ್. ಅಮೇರಿಕದಿಂದ ಬಂದಿದ್ದೇನೆ. ಸುಂದರಲಾಲ್ ಬಹುಗುಣರವರನ್ನು ಭೇಟಿ ಮಾಡಲು ಇಲ್ಲಿಗೆ ಬಂದಿದ್ದೇನೆ" ಎಂದು ಹೇಳಿದೆ. "ನಾನು ಅವರ ಸಹಾಯಕ. ಸದ್ಯಕ್ಕೆ ಅವರು ಕಾರ್ಯ ನಿರತರಾಗಿದ್ದಾರೆ. ನೀವು ಆನಂತರ ಬರಬಹುದೋ..." ಅಷ್ಟರಲ್ಲಿ ಆ ಗುಡಿಸಿಲಿನಿಂದ ಒಬ್ಬ ವ್ಯಕ್ತಿ ಹೊರಗೆ ಬರುವುದನ್ನು ನೋಡಿದೆ. ನಮ್ಮಿಬ್ಬರ ಕಡೆ ನೋಡಿ ಕೈ ಬೀಸಿದರು. "ಅವರೇ ಬಹುಗುಣರವರಲ್ಲವೇ?" ಅಂದೆ ನಾನು. ಆ ಯುವಕ ಹಿಂದಿರುಗಿ ನೋಡಿ, ಹೌದು, ದಯಮಾಡಿ ಬನ್ನಿ" ಎಂದ. ಬಹುಗುಣ ಎಂಥ ನಿಲುವಿನ ಮನಷ್ಯನಿರಬಹುದೆಂಬ ಬಗ್ಗೆ ನಾನು ಆಲೋಚಿಸಿರಲಿಲ್ಲ. ಅವರು ತೆಳ್ಳಗಿನ, ದಪ್ಪವಲ್ಲದ ಶರೀರದವರಾಗಿದ್ದರು. ಐದೂವರೆ ಅಡಿ ಎತ್ತರ ಇರುವಂತೆ ತೋರಿತು. ಅವರ ಉದ್ದನೆಯ ಕೂದಲು ಮತ್ತು ಗಡ್ಡ ಹಾಗು ಅವರ ಖಾದಿ ಬಟ್ಟೆ ಅವರೊಬ್ಬ ಸಂತನೆಂಬ ಭಾವನೆ ನನ್ನಲ್ಲಿ ಮೂಡಿಸಿದವು. ಆದರೆ ಅವರ ಕಣ್ಣುಗಳಲ್ಲಿಯ ಪ್ರಕಾಶ ಬಹು ಮುಖ್ಯ ಅಂಶವಾಗಿತ್ತು. ಅವರು ಕೈಗೊಂಡಿದ್ದ ಕೆಲ ಉಪವಾಸಗಳ ಬಗ್ಗೆ ಆಗಲೆ ನಾನು ತಿಳಿದಿದ್ದೆ. ಒಂದು ಉಪವಾಸವಂತೂ ಪ್ರಾಣಾಂತಕವಾಗಿತ್ತು. ಅಂಥ ಅಸಾಧಾರಣ ಕೃತ್ಯಗಳ ಹಿಂದೆ ಇದ್ದ ಪ್ರೇರಣೆಗಳ ಬಗ್ಗೆ ತಿಳಿಯಲಪೇಕ್ಷಿಸಿದ್ದೆ. *(ಮುಂದುವರಿಯುವುದು...)*

* * *

ಶಬ್ದದಲ್ಲಿಯ ಅಣುಶಕ್ತಿ ಪ್ರಯೋಗದಿಂದ ಪ್ರಸ್ಫುಟಿತಗೊಂಡ ವೇದ ಮಂತ್ರ

- ವಿನೋಬಾ

ವೇದಗಳಲ್ಲಿಯ ಮಂತ್ರಭಾಗ ಹಿಮಾಲಯದ ಅರಣ್ಯದಂತೆ ದುರ್ಗಮವಾಗಿದೆ. ಇಲ್ಲಿಂದಲೇ ಆರ್ಯ ಸಂಸ್ಕೃತಿಯ ಪಾವನಗಂಗೆಯ ಉದ್ಗಮವಾಯಿತು. ಅಭ್ಯುದಯ ಮತ್ತು ನಿಃಶ್ರೇಯಸ್ಸು (ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿ) ಎಂಬ ಈ ಎರಡು ದಂಡೆಗಳನ್ನು ಸ್ಪರ್ಶಿಸುತ್ತಾ ಚಿಮ್ಮುತ್ತಾ ಹರಿಯುವ ಈ ವಿಶ್ವಮಾತೆ ಓಂಕಾರದ ಸ್ನಿಗ್ಧ ಗಂಭೀರವಾದ ನಿರ್ಘೋಷ ಮಾಡುತ್ತಾ ಮತ್ತು ವೈದಿಕ ಋಷಿಗಳ ಮಧುರ ಜೀವನದಿಂದ ಭಾರತವನ್ನು ಸಚೇತನ ಮಾಡುವುದಕ್ಕಾಗಿ ಅನಾದಿಕಾಲದಿಂದಲೂ ಗಂಗೆ ಸತತವಾಗಿ ಹರಿಯುತ್ತಾ ಬರುತ್ತಿದೆ.

ಮಂತ್ರವೆಂದರೆ ತಪೋದೃಷ್ಟ ಮತ್ತು ಗಹನ ಮನನದಿಂದ ಪರಿಪೂರ್ಣ ಅಕ್ಷರ, ಶಬ್ದ ಅಥವಾ ವಾಕ್ಯ. ತಪದಿಂದ ಶುದ್ಧಿಯಾಗುತ್ತದೆ, ಮಂತ್ರದ ದರ್ಶನ ತಪದಿಂದ ಆಗುತ್ತದೆ. ಆದ್ದರಿಂದ ಮಂತ್ರ ತಪೋದೃಷ್ಟ, ತಪದಿಂದ ನೋಡಿದಂತದ್ದಾಗಿರುತ್ತದೆ.

ಯಾವ ಶಬ್ದಗಳು ರಚಿತವಾಗಿರದೆ, ಅನುಭೂತವಾಗಿವೆಯೋ, ದರ್ಶಿತವಾಗಿವೆಯೋ ಅವು ಆರ್ಶ ಶಬ್ದ. ಶಬ್ದಗಳಲ್ಲಿ ಒಂದು ಸಾಮರ್ಥ್ಯವಿರುತ್ತದೆ. ಈ ಶಬ್ದಗಳು ಯಾರಿಗೆ ಹೊಳೆಯುತ್ತವೋ ಅವುಗಳ ಹಿಡಿತ ಆ ಶಬ್ದಗಳ ಮೇಲೆ ಇರುವುದಿಲ್ಲ. ಅಂದರೆ ಆ ಶಬ್ದಗಳ ಅರ್ಥ ಎಷ್ಟಾಗುತ್ತದೋ ಅಷ್ಟಕ್ಕೇ ಅವುಗಳ ಅರ್ಥ ಸೀಮಿತವಾಗಿರುವುದಿಲ್ಲ. ಗಾಯತ್ರಿ ಮಂತ್ರದ ಒಂದು ಅರ್ಥವನ್ನು ವಿಶ್ವಾಮಿತ್ರ ಹೇಳಬಹುದು. ಆದರೆ ಅದಕ್ಕಿಂತ ಬೇರೆಯಾದ ಇನ್ನೂ ಬೇರೆ ಬೇರೆ ಅರ್ಥಗಳನ್ನು ಮಾಡಲು ಸಾಧ್ಯವಿದೆ. ಇದು ಆ ಮಂತ್ರಗಳ ವಿಶೇಷತೆ. ಅವು ಸ್ಫುರಿತವಾಗುತ್ತವೆ. ಪರಿನಿಷ್ಠ ಸಾಕ್ಷಾತ್ ಅನುಭೂತ ಆಗುತ್ತವೆ. ಮಾನವನ ಮನಸ್ಸು ವಿಕಾಸವಾದಂತೆಲ್ಲ ಈ ಶಬ್ದಗಳು ಕೂಡ ಪರಿಪುಷ್ಟವಾಗಿ ಮುಂಬರಿಯುತ್ತವೆ. ಅವುಗಳಲ್ಲಿ ಒಂದು ಅಣುಶಕ್ತಿಯಿರುತ್ತದೆ. ಅದು ಪ್ರಯೋಗದಿಂದ ಪ್ರಸ್ಫುಟಿತವಾಗುತ್ತದೆ.

ಈ ಪ್ರಕಾರದ ಮಂತ್ರಗಳು ಗಾಳಿಯಲ್ಲಿ ಹರಡಿರುತ್ತವೆ. ಚಿರಸ್ಥಾಯಿಯಾಗುತ್ತವೆ. ಬಹು ಪ್ರಾಚೀನ ಕಾಲದಿಂದಲೂ ಅನೇಕ ಇವು ಋಷಿಗಳಿಂದ ಪ್ರೇರಿತಗೊಂಡು ಇಡೀ ಭಾರತದ ಗಾಳಿಯಲ್ಲಿ ಅವ್ಯಕ್ತದಲ್ಲಿ ಹರಡಿವೆ. ಅವು ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ.

ಮಂತ್ರದ ಅರ್ಥವನ್ನು ಮನನ ಮಾಡುವುದರ ಮೂಲಕ ಹುಡುಕಬೇಕಾಗುತ್ತದೆ. ಮಂತ್ರದ ಸಂಬಂಧ ನನ್ನ ಜೀವನದೊಂದಿಗಿದೆ ಎಂಬ ಮಾತನ್ನು ಗಮನದಲ್ಲಿರಿಸಿಕೊಂಡು ಆತ್ಮ ನಿರೀಕ್ಷಣ ಪೂರ್ವಕ ಮಂತ್ರದ ಅರ್ಥವನ್ನು ನಾವು ನಿಶ್ಚಿತಗೊಳಿಸಬೇಕು.

ಅಂಕಗಣಿತದಲ್ಲಿ ಲಾಭ-ಹಾನಿಯ ಪ್ರಶ್ನೆಗಳಿಂದ ನಮಗೆ ಸ್ವಂತಕ್ಕೆ ಲಾಭ-ಹಾನಿ ಆಗುವುದಿಲ್ಲ. ಆದ್ದರಿಂದ ಯಾವ 'ನಿರಂಹಕಾರ' ವೃತ್ತಿಯಿಂದ ನಾವು ಆ

ಪ್ರಶ್ನೆಗಳನ್ನು ಬಿಡಿಸುತ್ತೇವೋ ಅದೇ 'ನಿರಂಹಕಾರ' ವೃತ್ತಿಯಿಂದ ಮಂತ್ರದ ಅರ್ಥವನ್ನು ಮಾಡಕೂಡದು, ಆದರೆ 'ಅಹಂ' ಪೂರ್ವಕವಾಗಿ ತನ್ನನ್ನು ಮಂತ್ರದಿಂದ ಕಟ್ಟಿಕೊಂಡು ಭಾವನಾಯುಕ್ತ ಮನನದ ಮೂಲಕ ಆತ್ಮ-ಪರಿಕ್ಷಣೆ ಮಾಡಿ ಮಂತ್ರದ ಅರ್ಥವನ್ನು ನಿಶ್ಚಿತ ಮಾಡಬೇಕು. ಈ ಪ್ರಕಾರ ನಿಶ್ಚಿತಗೊಳಿಸಲಾದ ಅರ್ಥವನ್ನು ಕೂಡ ನಮಗಷ್ಟಕ್ಕೇ ಸರಿ. ಆ ಅರ್ಥವನ್ನು ಪರರ ಮೇಲೆ ಹೇರಲಾಗದು.

ಈ ಪ್ರಕಾರ 'ಅಹಂ'-ಬದ್ಧ ಮನನದ ಮೂಲಕ ನಿಶ್ಚಿತಗೊಳಿಸಲಾದ ಅರ್ಥವು ಎಷ್ಟೇ ಭಿನ್ನ ಭಿನ್ನವಾಗಿರಲಿ ವಿರೋಧಿಯಾಗಿರಲು ಸಾಧ್ಯವಿಲ್ಲ. ಪ್ರತಿಯೋರ್ವ ಮನುಷ್ಯನಿಗೂ ತನ್ನ ತನ್ನ ದರ್ಶನವಿರುತ್ತದೆ. ನನಗೆ ಅದೇ ಮಂತ್ರದ ಒಂದು ಅರ್ಥ ಇಂದು ಒಂದು ಬಗೆಯಾದರೆ ನಾಳೆ ಬೇರೊಂದು ಅರ್ಥ ಹೊಳೆಯಬಹುದು. ಆದರೆ ನನ್ನ ಯಾವುದೇ ಒಂದು ಅರ್ಥ ಎರಡನೆಯ ಅರ್ಥವನ್ನು ತೆಗೆದು ಹಾಕುವುದಿಲ್ಲ, ಬದಲಿಗೆ ಪೂರಕವಾಗುವುದು. ಈ ದೃಷ್ಟಿಯಿಂದ ನಾವು ನೋಡಿದರೆ ಒಂದು ಅದ್ಭುತ ದರ್ಶನವಾಗುತ್ತದೆ. ಮಂತ್ರದ ಅರ್ಥ ರಬ್ಬರಿನ ಹಾಗೆ ಹೆಚ್ಚು ಕಡಿಮೆಯಾಗುತ್ತದೆ. ರಬ್ಬರಿಗೆ ಕೊಂಚ ಮಿತಿ ಇದೆ. ಆದರೆ ಮಂತ್ರ ಬಹು ಹೆಚ್ಚು ಕಡಿಮೆಯಾಗುತ್ತದೆ. ಬಹುದೊಡ್ಡ ಅರ್ಥವನ್ನು ಕಂಡರೂ ಮಂತ್ರದ ಮೇಲೆ ಭಾರ ಬೀಳುವುದಿಲ್ಲ. ಒಂದು ಮಂತ್ರ ಇನ್ನೊಂದು ಮಂತ್ರಕ್ಕೆ ಢಿಕ್ಕಿ ಹೊಡೆಯುವುದಿಲ್ಲ.

ಅಗ್ನಿ ಮೀಳೆ ಪುರೋಹಿತಂ ಯಜ್ಞಸ್ಯ ದೇವ ಮೃತ್ವಿಜಂ ಹೋತಾರಂ ರತ್ನ ಧಾತಮಮಂ

ನಿತ್ಯ ಅಗ್ನಿಯ ಪೂಜೆ ಮಾಡುತ್ತೇನೆ. ಅದು ಸಮ್ಮುಖದಲ್ಲಿಯೇ ಇದೆ. ಯಜ್ಞಾರ್ಥವಾಗಿ ದಾನ ಕೊಡುವುದಂಥದ್ದಾಗಿದೆ. ಋತುಗಳ ಅನುಸಾರ ಯೋಜಿತವಾಗಿದೆ. ಸಕಲರನ್ನು ಕರೆಯುವಂಥದ್ದಾಗಿದೆ. ರತ್ನಗಳಿಂದ ತುಂಬಿದೆ. ಹೋತಾರಂ-ಆಹುತಿಕೊಡುವಂಥವನು; ರತ್ನ ಧಾತಮಂ-ಉತ್ತಮವಾದ ರತ್ನಗಳನ್ನು ಧರಿಸುವವನು; ಪುರೋಹಿತಂ-ಸಮ್ಮುಖದಲ್ಲಿ ಇಡುವಂಥದ್ದು; ಮೃತ್ವಿಜಂ-ಯಾವ ಋತುವಿನಲ್ಲಿ ಹೇಗೆ ಪೂಜಿಸಬೇಕು ಎಂಬುದನ್ನು ತಿಳಿಸುವವನು.

ಅಗ್ನಿ ಪೂರ್ವೇಭಿರ್ ಋಷಿಭಿಃ ಈಡ್ಯೋ ನೂತನೈರುತಾ

ಅಗ್ನಿಯ ಉಪಾಸನೆಯನ್ನು ಪೂಜೆಯನ್ನು ನಮ್ಮ ಪೂರ್ವಜರು ಮಾಡುತ್ತಿದ್ದರು. ಆದ್ದರಿಂದ ನಾವು ಹೊಸಬರು ಕೂಡ ಅಗ್ನಿಯ ಪೂಜೆಯನ್ನು ಮಾಡಬೇಕು.

ನಾವು ವೈದೀಕ ಋಷಿಯ ಹೆಸರನ್ನು ತೆಗೆದುಕೊಳ್ಳುತ್ತೇವೆ ಮತ್ತು ಅವರು ತಮ್ಮ ಪೂರ್ವಜರ ಹೆಸರನ್ನು ತೆಗೆದುಕೊಳ್ಳುತ್ತಾರೆ. ಇದರ ಅರ್ಥ ದಾರಿ ಸಿದ್ಧವಾಗಿದೆ. ಅದರ ಕೆಳಗೆ ಬೀಳುವ ಅಧಿಕಾರ ನಮಗಿಲ್ಲ. ಮೇಲೆ ಹೋಗುವುದಕ್ಕೆ ಅಧಿಕಾರವಿದೆ. ಬದಲಿಗೆ ನಾವು ಮುಂಬರಿಯಬೇಕೆಂದು ವೇದ ಬಯಸುತ್ತದೆ.

* * *

ಇಪ್ಪತ್ತೊಂದನೇ ಶತಮಾನ ಅಜ್ಞಾನ ಯುಗದ ನಾಂದಿಯೇ?

– ಕಿಷನ್ ಪಟ್ನಾಯಕ್

ಮನುಷ್ಯಕುಲದ ಮನಸ್ಸು ಸಂಕುಚಿತವಾಗುತ್ತಲಿದೆಯೇನೋ ಎನ್ನುವಂತೆ ಇಪ್ಪತ್ತನೇ ಶತಮಾನದ ಅಂತಿಮ ದಶಕಗಳಲ್ಲಿ ಮನುಷ್ಯನ ಚಿಂತನೆ ದುರ್ಬಲವಾಗುತ್ತಲಿದೆ. ಪರಿಸ್ಥಿತಿಗಳನ್ನು ಗ್ರಹಿಸಿಕೊಳ್ಳಲು ಹಾಗೂ ವಿವರಿಸಲು ಪ್ರಸಕ್ತ ಚಿಂತನೆ ಹಾಗೂ ಎಲ್ಲ ಶಾಸ್ತ್ರಗಳು ಸಂಪೂರ್ಣವಾಗಿ ಅಸಮರ್ಪಕವೆಂದು ಸಾಬೀತಾಗುತ್ತಿವೆ. ಚಿಂತನ ಶಕ್ತಿಯನ್ನು ಚುರುಕುಗೊಳಿಸಲು ಎಲ್ಲ ನಿಟ್ಟಿನಲ್ಲಿ ಪ್ರಯತ್ನ ನಡೆಯಲಿ ಎನ್ನುವ ಆಶಯದೊಂದಿಗೆ ಇಪ್ಪತ್ತೊಂದನೇ ಶತಮಾನದ ಆರಂಭಕ್ಕೆ ಮೊದಲು ಈ ಸಮಸ್ಯೆಯನ್ನು ವಿಶ್ಲೇಷಿಸಬೇಕಾಗಿದೆ.

ಅಧ್ಯಯನ, ಅವಲೋಕನ, ಚಿಂತನೆ ಇತ್ಯಾದಿ ಕಾರ್ಯಗಳು ಮೊದಲಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ಗ್ರಂಥರಚನೆ ಹಾಗೂ ಶಾಸ್ತ್ರೀಯ ಸಂಶೋಧನೆ ಮೊದಲಿಗಿಂತ ಎಷ್ಟೋ ಪಟ್ಟು ಹೆಚ್ಚಾಗಿದೆ. ಚಿಂತನ ಮಂಥನಕ್ಕೆ ಆಧುನಿಕ ತಂತ್ರಜ್ಞಾನ ಸಹಾಯ ಒದಗಿಸುವುದರಲ್ಲಿ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎನ್ನಲಾಗುತ್ತಿದೆ. ಈ ವಾದದ ವಿಷಯವಾಗಿ ನಮಗೆ ಸಮಾಧಾನವಿಲ್ಲವಾಗಿದೆ. ಇದರ ಪರಿಣಾಮವಾಗಿ ತನ್ನ ಸನ್ನಿವೇಶಗಳನ್ನು ಮುಖಾಮುಖಿಯಾಗುವಲ್ಲಿ ನಾನು ಹೆಚ್ಚು ಸಶಕ್ತನಾಗಿದ್ದೇನೆ ಎಂದು ಮನುಷ್ಯನಿಗೆ ಅನ್ನಿಸುತ್ತಿದೆಯೇ?

ಚಿಂತನೆಯನ್ನು ರಾಶಿ ಹಾಕಲು ಅದೇನೂ ಕಸವಲ್ಲ. ಅದೆಷ್ಟು ಸುದೀರ್ಘವಾಗಿದೆ, ಸತ್ವಯುತವಾಗಿದೆ ಹಾಗೂ ವಿಸ್ಮಯಕಾರಿಯಾಗಿದೆ ಎಂದು ಆ ಕುರಿತು ಹೇಳಲು ಅದೇನೂ ಪ್ರದರ್ಶನಕ್ಕಿಟ್ಟ ವಸ್ತುವೂ ಅಲ್ಲ. ಚಿಂತನೆಯನ್ನು ಶ್ರೀಮಂತರು ಸಾರಾ ಸಗಟಾಗಿ ಖರೀದಿಸಿ ಮೋಜು ಮಾಡಬಹುದಾದ ವಸ್ತುವೂ ಅಲ್ಲ. ಒಂದೇ ಕುಲಕ್ಕೆ ಸೇರಿದ ಮನುಷ್ಯ ತಾನು ಸವಾಲುಗಳ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿದ್ದು ಅವುಗಳನ್ನು ಗ್ರಹಿಸಿಕೊಂಡು ಅವುಗಳಿಗೆ ಪರಿಹಾರ ಕೈಗೊಳ್ಳದ ಹೊರತು ಗತ್ಯಂತರವಿಲ್ಲವೆಂದು ಅವನಿಗೆ ಅನ್ನಿಸಿದಾಗ ಮಾತ್ರ ಚಿಂತನೆ ಹುಟ್ಟಿಕೊಳ್ಳುತ್ತದೆ. ಹಲವಾರು ಸಂಗತಿಗಳ ಅರಿವು ನಿಖರವಾದಾಗ ಅದು ಶಾಸ್ತ್ರವಾಗಿ ಪರಿಣಮಿಸುತ್ತದೆ. ಎಷ್ಟೋ ವಿಚಾರಗಳು ವಿವಾದ ಹಾಗೂ ಸಂಶೋಧನೆಯ ಪ್ರಕ್ರಿಯೆಯಲ್ಲಿರುತ್ತವೆ. ಇನ್ನುಳಿದಂತೆ ನಿಗೂಢ ಹಾಗೂ ಕತ್ತಲೆಯ ಕೂಪವಾಗಿರುವುದನ್ನೂ ಕಲ್ಪನೆ ಹಾಗೂ ಮಿಥ್‌ಗಳ ಮೂಲಕ ವೈಚಾರಿಕ ಒರೆಗಲ್ಲಿಗೆ ಹಚ್ಚಲಾಗುತ್ತದೆ. ಈ ಮೂರು ಸ್ತರಗಳ ಪರಸ್ಪರ ಸಂಬಂಧದಿಂದ ಮನುಷ್ಯನ ಚಿಂತನೆಯ ಒಂದು ಲೋಕ ಅಸ್ತಿತ್ವಕ್ಕೆ ಬರುತ್ತದೆ. ಪ್ರತಿಯೊಬ್ಬ ಮನುಷ್ಯ ಅಥವಾ ಮನುಷ್ಯ ಸಮುದಾಯದ್ದೇ ಒಂದು ಚಿಂತನಾಲೋಕವಿರುತ್ತದೆ.

ಈ ಚಿಂತನ ಲೋಕವನ್ನು ತೊಡೆದು ಹಾಕಿದರೆ ಮನುಷ್ಯನ ಅಸ್ತಿತ್ವವೇ ಇರಲಾರದು. ಈ ಚಿಂತನ ಲೋಕದಲ್ಲಿ ಇದ್ದುದರಿಂದ ತನಗೆ ಒಂದು ನೆಲೆ ಇದೆ, ಸಂಕಷ್ಟಗಳಿಂದ ನಾನು ಪಾರಾಗಬಲ್ಲೆ ಹಾಗೂ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಬಲ್ಲೆ ಎಂದು ಮನುಷ್ಯನಿಗೆ ಆತ್ಮ ವಿಶ್ವಾಸವಿರುತ್ತದೆ. ಈ ಚಿಂತನಲೋಕ ಇತ್ತೀಚೆಗೆ ಬಿಕೋ ಎನ್ನುತ್ತಿದೆ. ಮನುಷ್ಯ ಯುಗ ಯುಗಗಳಿಂದ ಯಾವ ಯಾವ ಸಾಧನೆ ಮಾಡಲು ಪ್ರಯತ್ನಿಸುತ್ತಾ ಬಂದಿದ್ದನೋ, ಯಾವ ಯಾವ ಸಾಧನೆಗಳು ಇಪ್ಪತ್ತನೇ ಶತಮಾನದಲ್ಲಿ ಸಾಧ್ಯವಾಗಲಿವೆಯೆಂದು ನಾವು ಭಾವಿಸಿದ್ದೆವೋ ಅವೆಲ್ಲ ಕಷ್ಟಸಾಧ್ಯವಷ್ಟೇ ಅಲ್ಲ ಅಸಾಧ್ಯವೆನ್ನಿಸುತ್ತಿವೆ.

ಒಂದು ಪ್ರಜಾತಿಗೆ ಸೇರಿದವನಾಗಿ ಮನುಷ್ಯನ ಸಾಧನೆ ಎಂಥದ್ದಾಗಿರಬಹುದು? ಇದನ್ನು ಎರಡು ರೀತಿಯಲ್ಲಿ ವ್ಯಕ್ತಮಾಡಬಹುದು. ಮೊದಲನೆಯದಾಗಿ ಸಮಗ್ರ ಸೃಷ್ಟಿಯಲ್ಲಿ ತನ್ನ ಪಾಲಿದೆ ಎನ್ನುವ ಅನುಭವವಾಗುವಂತೆ ಪ್ರಪಂಚದೊಂದಿಗೆ ಮನುಷ್ಯನ ಸಂಬಂಧ ಏರ್ಪಡಬೇಕು. ಇದು ಪರಮೋಚ್ಚ ಗುರಿಯಾಗಿರುತ್ತದೆ. ಎರಡನೆಯದಾಗಿ ಕನಿಷ್ಠ ಗುರಿಯೆಂದರೆ ಪ್ರತಿಯೊಬ್ಬ ಮನುಷ್ಯನಿಗೆ ಸ್ವಾಭಿಮಾನದ ಜೊತೆಗೆ ಆರೋಗ್ಯಪೂರ್ಣ ಬದುಕು ಸಾಗಿಸಲು ಅವಶ್ಯವಾದ ಸೌಲಭ್ಯಗಳು ಲಭ್ಯವಾಗಬೇಕು. ಎಲ್ಲಿ ಕನಿಷ್ಠ ಹಾಗೂ ಸರ್ವೋಚ್ಚ ಗುರಿಗಳನ್ನು ಸಾಧಿಸಲು ಪ್ರಯತ್ನಗಳು ನಡೆಯುತ್ತವೆಯೋ ಅಲ್ಲಿ ನಾಗರಿಕತೆ ತಲೆ ಎತ್ತುತ್ತದೆ.

ಇನ್ನೂ ತನಕ ಈ ಮೇಲಿನ ಕನಿಷ್ಠ ಗುರಿಗಳನ್ನು ಸಹ ಮನುಷ್ಯ ಸಮಾಜ ಸಾಧಿಸಿಲ್ಲವಾದ್ದರಿಂದ ನಾವು ಈವರೆಗಿನ ಇತಿಹಾಸವನ್ನು ಧಿಕ್ಕರಿಸಬಹುದು. ಇಪ್ಪತ್ತನೇ ಶತಮಾನದ ಆದಿ ಭಾಗದಲ್ಲಿ ಕನಿಷ್ಠ ಗುರಿ ಹಾಗೂ ಸರ್ವೋಚ್ಚ ಗುರಿ ಇವೆರಡೂ ಸ್ತರಗಳಲ್ಲಿ ಚಿಂತನೆಯ ಅಭಾವವಾಗಿರುವುದನ್ನು ನಾವು ಗಮನಿಸಬಹುದು. ಮನುಷ್ಯನ ಯಾವುದೇ ಸಮಸ್ಯೆಯ ಪರಿಹಾರಕ್ಕೆ ಅವನಲ್ಲಿ ಬುದ್ಧಿಮತ್ತೆ ಇಲ್ಲವೆಂದು ಇಂದು ಅನ್ನಿಸುತ್ತಿದೆ. ಐವತ್ತು ವರ್ಷಗಳ ಹಿಂದೆ ಪರಿಸ್ಥಿತಿ ಉತ್ತಮವಾಗಿತ್ತು. ಮನುಷ್ಯನ ಚಿಂತನ ಲೊಕದಲ್ಲಿ ಸಾಕಷ್ಟು ಸಕಾರಾತ್ಮಕ ಅಂಶಗಳಿದ್ದವು. ಅವುಗಳಿಂದಾಗಿ ಮನುಷ್ಯ ತನ್ನ ಕನಿಷ್ಠ ಗುರಿಗಳನ್ನು ಸಾಧಿಸಬಲ್ಲೆ ಎನಿಸುತ್ತಿತ್ತು. ಬಡತನ ರೋಗ ಹಾಗೂ ಅಪರಾಧಗಳಿಂದ ಮುಕ್ತವಾದ ವಿಶ್ವ ಸಮಾಜದ ವ್ಯವಸ್ಥೆಯ ಸಾಧ್ಯತೆ ಆ ಕಾಲದ ಚಿಂತನ ಲೋಕದಲ್ಲಿ ಕಾಣಸಿಗುತ್ತಿತ್ತು. ಬಡತನ, ರೋಗ ಹಾಗೂ ಅಪರಾಧದ ವ್ಯಾಪಕತೆಯಿಂದಾಗಿ ಸಾಮಾಜಿಕ ಮನುಷ್ಯನಿಗೆ ಜೀವಂತ ಹಾಗೂ ಸುರಕ್ಷಿತವಾಗಿರುವುದೇ ಎಲ್ಲಕ್ಕೂ ಮುಖ್ಯ ಕಾರ್ಯವಾಗುತ್ತಿದೆ. ಕೇವಲ ಜೀವಂತವಾಗಿರುವುದಕ್ಕಾಗಿ ಜೀವನದ ಹೋರಾಟ ನಡೆಸುವುದು ಒಂದು ಹೀನಾಯ ಸ್ಥಿತಿಯಾಗುತ್ತಿದೆ. ಒಂದು ಶ್ರೀಮಂತ ವರ್ಗ ಅಥವಾ ಶ್ರೀಮಂತ ರಾಷ್ಟ್ರ ಅಸ್ತಿತ್ವಕ್ಕೆ ಬರುವುದರಿಂದ ಇದರಲ್ಲಿ ವ್ಯತ್ಯಾಸವೇನೂ ಆಗಲಾರದು. ಆದ್ದರಿಂದ ಇಂದಿನಂತಹ ಅಸಮಾನ ವಿಶ್ವ ಸಮಾಜದಲ್ಲಿ, ಒಂದು ಭಾಗದಲ್ಲಿ ಜೀವನದ ಹೋರಾಟ ಹೊಟ್ಟೆ ಹೊರೆದುಕೊಳ್ಳುವುದಾದರೆ ಇನ್ನೊಂದು ಭಾಗದಲ್ಲಿ ಅದು ಹೊಟ್ಟೆಬಾಕನಾಗುವುದಾಗಿದೆ. ಈ ಹೀನಾಯ ಸ್ಥಿತಿಯಿಂದ ಮನುಷ್ಯಕುಲವನ್ನು ಮೇಲೆತ್ತುವ ನಿಟ್ಟಿನಲ್ಲಿ ಇಂದಿನ ಎಲ್ಲ ಶಾಸ್ತ್ರಗಳು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸುತ್ತಿವೆ.

ವಿಶ್ವ ವಿದ್ಯಾಲಯ, ಸಾಮಾಜಿಕ ಕಾರ್ಯ, ರಾಜಕೀಯ ಹಾಗೂ ಮಾಧ್ಯಮದ ಕ್ಷೇತ್ರದ ಸಾಮಾನ್ಯ ಬುದ್ಧಿಮತ್ತೆಯ ಯಾವುದೇ ವ್ಯಕ್ತಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು;

* ೯೫ ಪ್ರತಿಶತ ಮನುಷ್ಯರಿಗೆ ಸುಖಶಾಂತಿ ನೀಡಬಲ್ಲ ಒಂದು ಮಾನವ ಸಮಾಜವನ್ನು ಮುಂಬರುವ ಐವತ್ತು ಅಥವಾ ನೂರು ವರ್ಷಗಳ ಅವಧಿಯಲ್ಲಿ ನೀವು ಕಲ್ಪಿಸಿಕೊಳ್ಳಬಲ್ಲಿರಾ? ಈ ನಿಟ್ಟಿನಲ್ಲಿ ನಿಮ್ಮ ಅರಿವಿಗೆ ಬಂದಿರಬಹುದಾದ ಯಾವುದಾದರೂ ಒಂದು ವಿಶ್ವಾಸಾರ್ಹ ಯೋಜನೆ ಇದೆಯೆ?

* ಇಪ್ಪತ್ತು ಮೂವತ್ತು ವರ್ಷಗಳ ನಂತರದ ಜನಸಂಖ್ಯೆಗೆ ಸಾಕಾಗುವಷ್ಟು ಆಹಾರ ಪೂರೈಸಬಲ್ಲ ಯಾವುದಾದರೂ ಯೋಜನೆ ವಾಸ್ತವಿಕವಲ್ಲವಾದರೂ ಕಲ್ಪನೆ ಅಥವಾ ಚಿಂತನೆಯ ಸ್ತರದಲ್ಲಾದರೂ ಚರ್ಚೆಗೆ ಬಂದಿದೆಯೆ?

* ಇಂದು ಪ್ರಚಲಿತವಿರುವ ಶಾಸ್ತ್ರಗಳು ಅಥವಾ ವಿಚಾರ ಧಾರೆಗಳ ಆಧಾರದ ಮೇಲೆ ನಿರುದ್ಯೋಗ, ವಸತಿ ಸಮಸ್ಯೆ, ಮಹಾಮಾರಿ, ಅನಕ್ಷರತೆ, ಹಳ್ಳಿಗಳ ದುರವಸ್ಥೆ ಇತ್ಯಾದಿಗಳನ್ನು ಮುಂದಿನ ಕೆಲ ದಶಕಗಳಲ್ಲಿ ನಿರ್ಮೂಲನ ಮಾಡುವುದು ಸಾಧ್ಯವೆಂದು ನಿಮಗೆ ಅನಿಸುತ್ತದೆಯೆ?

* ವಿಭಿನ್ನ ದೇಶಗಳೆದುರು ಎಂಥೆಂಥ ಸವಾಲುಗಳಿವೆ ಹಾಗೂ ಪ್ರಜಾಪ್ರಭುತ್ವವನ್ನು ಹೆಚ್ಚು ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿಸಲು ಏನೇನು ಮಾಡಬಹುದು ಎನ್ನುವ ಕುರಿತು ತಿಳುವಳಿಕೆ ಮೂಡಿಸಬಲ್ಲ ಯಾವುದಾದರೂ ಪುಸ್ತಕವನ್ನು ಕಳೆದ ಹತ್ತು ವರ್ಷಗಳಲ್ಲಿ ಓದಿದ್ದೀರಾ?

* ಭಾರತ ಅಥವಾ ಆಫ್ರಿಕಾದ ಸಾಮಾನ್ಯ ನಾಗರಿಕನಲ್ಲಿ ತನಗೆ ಒಂದು ಒಳ್ಳೆಯ ಕಾಲ ಬರಲಿದೆ ಎನ್ನುವ ವಿಶ್ವಾಸ ಮೂಡಿಸಲು ಸದ್ಯದ ಸಾಮಾಜಿಕ ಶಾಸ್ತ್ರಗಳು ಅಥವಾ ಯಂತ್ರವಿಜ್ಞಾನ ಯಾವುದಾದರೂ ಕೊಡುಗೆ ನೀಡಬಲ್ಲುದೆ?

ಈ ಪ್ರಶ್ನೆಗಳಿಗೆ ಉತ್ತರಗಳು ನಕಾರಾತ್ಮಕ ಹಾಗೂ ಅತ್ಯಂತ ನಿರಾಶಾದಾಯಕವಾಗಿವೆ. ಅಂದರೆ ಮನುಷ್ಯನಿಗೆ ಸುಖ ಶಾಂತಿ ಹಾಗೂ ಸ್ವಾವಲಂಬನೆ ಒದಗಿಸುವ ನಿಟ್ಟಿನಲ್ಲಿ ಯಾವ ಶಾಸ್ತ್ರವೂ ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿಲ್ಲ.

ಉದಾಹರಣೆಗೆ ಇತಿಹಾಸ ಶಾಸ್ತ್ರವನ್ನು ತೆಗೆದುಕೊಳ್ಳಬಹುದು. ಯೂರೋಪಿಯನ್ ಇತಿಹಾಸಕಾರರು ಇಂದಿನ ತನಕ ಯೂರೋಪಿಯನ್ನೇತರ ದೃಷ್ಟಿಕೋನದಿಂದ ಜಾಗತಿಕ ಇತಿಹಾಸವನ್ನು ಬರೆದಿಲ್ಲ. ಜಾಗತಿಕ ಇತಿಹಾಸ ಲೇಖನಕ್ಕೆ ಸಂಬಂಧಿಸಿದಂತೆ ಯೂರೋಪಿಯನ್ ಇತಿಹಾಸಕಾರರು ಬರೆದಿರುವ ಇತಿಹಾಸ ಯೂರೋಪಿಯನ್ ಮಾನಸಿಕತೆಗೆ ಅನುಗುಣವಾಗಿದೆ ಹಾಗೂ ಯೂರೋಪ್ ಕೇಂದ್ರಿತವಾಗಿದೆ ಎಂದು ಹೇಳಬಹುದು. ಏಷ್ಯಾದ ಇತಿಹಾಸಕಾರ ಬರೆದರೂ ಅದು ಸಂಪೂರ್ಣವಾಗಿ ವಸ್ತುನಿಷ್ಠವಾಗಿರಲಾರದು ಎನ್ನುವುದು ಸಹಜವಾಗಿದೆ. ಆದರೆ ಇವರೀರ್ವರ ಸಮ್ಮಿಲನದಿಂದ ಒಂದು ನಿರ್ಲಿಪ್ತ ಇತಿಹಾಸ ಶಾಸ್ತ್ರದ ಉಗಮವಾಗಬಲ್ಲದು. ವಿಪರ್ಯಾಸವೇನೆಂದರೆ ಏಷ್ಯಾ, ಆಫ್ರಿಕಾ ಅಥವಾ ದಕ್ಷಿಣ ಅಮೇರಿಕಾದ ಮಾನಸಿಕತೆಯಿಂದ ಪ್ರಭಾವಿತವಾದ ಜಾಗತಿಕ ಇತಿಹಾಸ

ರಚನೆಯಾಗುತ್ತಿಲ್ಲ; ಯೂರೋಪ್ ಕೇಂದ್ರಿತ ಇತಿಹಾಸದಲ್ಲಿ ಆಗುತ್ತಿರುವ ಸುಧಾರಣೆಗಳೆಲ್ಲ ಪಶ್ಚಿಮದ ವಿದ್ವಾಂಸರಿಂದಲೇ ಆಗುತ್ತಿವೆ.

ಸೋವಿಯೆಟ್ ಒಕ್ಕೂಟದ ಪತನ ನಮ್ಮ ಯುಗದ ಒಂದು ಮಹತ್ವಪೂರ್ಣ ಹಾಗೂ ನಿರ್ಣಾಯಕ ಘಟನೆಯಾಗಿದೆ. ಸೋವಿಯೆಟ್ ಸಾಮ್ರಾಜ್ಯ ಕೂಡ ಅಮೆರಿಕನ್ ಸಾಮ್ರಾಜ್ಯದಂತೇ ದೈತ್ಯಾಕಾರದ ಹಾಗೂ ಸ್ವಾರ್ಥಿ ಸಾಮ್ರಾಜ್ಯವಾಗಿತ್ತು. ಎಷ್ಟೋ ಸಂಗತಿಗಳು ಅಮೆರಿಕಾಗಿಂತ ಭಿನ್ನವಾಗಿದ್ದವು. ಏಕಾಏಕಿ ಈ ಸಾಮ್ರಾಜ್ಯ ಮರಳಲ್ಲಿ ಕಟ್ಟಿದ ಮನೆಯಂತೆ ನೆಲಸಮಗೊಂಡಿತು. ಅದರ ಪತನದ ಇತಿಹಾಸ ಹಾಗೂ ಕಾರಣಗಳ ಕುರಿತಂತೆ ಒಂದೂ ಗ್ರಂಥವನ್ನು ಬರೆಯಲಾಗಿಲ್ಲ. ನಂಬಲರ್ಹವಾದ ಒಂದೂ ಕಾರಣವನ್ನು ನೀಡಲಾಗುತ್ತಿಲ್ಲ. ಪ್ರಾಯಃ ಇದೇ ರೀತಿ ಅಮೆರಿಕನ್ ಸಾಮ್ರಾಜ್ಯ ಕೂಡ ಕುಸಿಯಬಹುದು. ಅದೆಲ್ಲ ಹೇಗಾಯಿತೆಂದು ನಮಗೆ ತಿಳಿಯದೇ ಹೋಗಬಹುದು. ಎಷ್ಟು ದರಿದ್ರವಾಗಿಬಿಟ್ಟಿದೆ ಶಾಸ್ತ್ರ!

ಮೂರ್‍ನಾಲ್ಕು ವರ್ಷಗಳ ಮೊದಲೂ ಸೋವಿಯಟ್ ರಷ್ಯಾ ಈ ರೀತಿ ಅವಸಾನಗೊಳ್ಳಲಿದೆ ಎಂದು ನಮಗೆ ತಿಳಿಯದಾಯಿತು. ಮೂರ್‍ನಾಲ್ಕು ತಿಂಗಳ ಮೊದಲು 'ಏಷ್ಯಾದ ಸಿಂಹಗಳು' ಕಂದಕದ ಅಂಚಿನಲ್ಲಿ ಬಂದು ನಿಂತದ್ದು ಕೂಡ ನಮ್ಮ ಅರಿವಿಗೆ ಬಾರದಾಯಿತು. ಈ ರೀತಿ ಶಾಸ್ತ್ರಗಳು ತಮ್ಮ ಮೂಲಭೂತ ಜವಾಬದಾರಿಗಳನ್ನು ನಿರ್ವಹಿಸುತ್ತಿಲ್ಲ ಎನ್ನುವುದನ್ನು ಸೂಚಿಸಲು ಒಂದು ಸುದೀರ್ಘ ಪಟ್ಟಿಯನ್ನು ಮಾಡಬಹುದು. ಜ್ಞಾನ ವಿಜ್ಞಾನದ ಸ್ಥಿತಿಗತಿ ಏನಿದೆ ಹಾಗೂ ಅದು ಮನುಷ್ಯ ಸಮಾಜದ ಮಾರ್ಗದರ್ಶನಕ್ಕೆ ಎಷ್ಟು ಸಮರ್ಥವಾಗಿದೆ ಎನ್ನುವ ಕುರಿತು ೨೦೦೦ದ ಅಂತ್ಯದಷ್ಟೊತ್ತಿಗೆ ಒಂದು ವರದಿಯನ್ನು ಸಲ್ಲಿಸುವುದು ಶಾಸ್ತ್ರಗಳಲ್ಲಿ ನೈಪುಣ್ಯ ಹೊಂದಿದವರ ಜವಾಬದಾರಿಯಾಗಬೇಕು.

ಶಾಸ್ತ್ರಗಳು ದಿವಾಳಿಯೆದ್ದದ್ದು ಹೇಗೆ? ಈ ಪ್ರಶ್ನೆಗೆ ಉತ್ತರ ಕೂಡ ಪ್ರಸಕ್ತ ಶಾಸ್ತ್ರಗಳಲ್ಲಿ ಕಾಣಸಿಗದು. ಶಾಸ್ತ್ರರಚನೆ ವಿಷಯವಾಗಿ ಎರಡು ಗ್ರಹಿಕೆಗಳಿವೆ. ಮೊದಲನೆಯದಾಗಿ ವಿಶಿಷ್ಟ ವರ್ಗದ ಬುದ್ಧಿಮತ್ತೆಯಿಂದ ಶಾಸ್ತ್ರರಚನೆಯಾಗುತ್ತದೆ. ಎರಡನೆಯದಾಗಿ ಶೋಷಿತ ವರ್ಗದಿಂದ ಮೇಲೆ ಬರುತ್ತಿರುವಒಂದು ವರ್ಗದ ಹಿತಗಳಿಗನುಗುಣವಾಗಿ ಹೊಸ ಚಿಂತನೆ ರೂಪುಗೊಳ್ಳುತ್ತದೆ. ಎರಡೂ ವ್ಯಾಖ್ಯೆಗಳು ಆಂಶಿಕವಾಗಿ ಸರಿಯಾಗಿವೆ. ೧೯೫೦ಕ್ಕೂ ಮೊದಲು ಚಿಂತನೆಯನ್ನು ಹುಟ್ಟುಹಾಕಿದವರು ಯೂರೋಪಿಯನ್ನರೇ. ಏಕೆಂದರೆ ಅವರೇ ರಾಜಕೀಯವಾಗಿ ಸ್ವಾಯತ್ತ ಹಾಗೂ ಸಾರ್ವಭೌಮರಾಗಿದ್ದರು. ಅವರ ಜ್ಞಾನ ಯೂರೋಪ್ ಕೇಂದ್ರಿತವಾಗಿತ್ತು. ಆಧುನಿಕ ಪಾಶ್ಚಿಮಾತ್ಯ ಚಿಂತನೆಯ ಆರಂಭ ಯೂರೋಪಿಯನ್ ಪುನರುಜ್ಜೀವನದಿಂದ ಆಯಿತು. ಕ್ರಿಶ್ಚಿಯನ್ ಧರ್ಮ, ಗ್ರೀಕ್-ರೋಮನ್ ನಾಗರಿಕತೆ, ಅರೇಬಿಕ್ ಜ್ಞಾನ ಮುಂತಾದವುಗಳ ಆಳವಾದ ಮಂಥನ ಅದರ ಹಿಂದಿತ್ತು. ಮನುಷ್ಯನ ಕೆಲವು ಗುರಿಗಳಿಗೆ ಶಾಶ್ವತ ಮೌಲ್ಯಗಳ ಸ್ಥಾನ ನೀಡಿ ಚಿಂತನೆಗಳನ್ನು ಹರಿಬಿಡಲಾಯಿತು. ಆದ್ದರಿಂದ ಪಶ್ಚಿಮ ಕೇಂದ್ರಿತವಾಗಿದ್ದರೂ ಉನ್ನತ ಮಟ್ಟದ ಶಾಸ್ತ್ರ ರೂಪುಗೊಂಡಿತು. ಅವುಗಳಲ್ಲಿ ಉದಾತ್ತವಾದ ಹಾಗೂ ಭವಿಷ್ಯದ ನಿರ್ಮಾಣಕ್ಕೆ ಸಹಕಾರಿಯಾಗಬಲ್ಲ ಹಲವಾರು ವಿಚಾರಗಳಿವೆ. ಆದರೆ ೧೯೪೫-೫೦ರ ನಂತರ

ಪಶ್ಚಿಮದ ಒಳಗಡೆಯೇ ಚಿಂತನೆಯ ಮುಖ್ಯ ಕೇಂದ್ರಗಳು ಯೂರೋಪಿನಿಂದ ಅಮೆರಿಕಾಕ್ಕೆ ಸ್ಥಳಾಂತರಗೊಂಡವು.

ಅಮೆರಿಕಾ ಶಾಸ್ತ್ರ ಹಾಗೂ ಚಿಂತನೆಗಳ ಮೂಲಗಳ ಚುಕ್ಕಾಣಿ ಹಿಡಿದಾಗಿನಿಂದ ಪಶ್ಚಿಮದ ಚಿಂತನಲೋಕದಲ್ಲಿ ಮೊದಲಿನ ಆಳವೇನೋ ಇದೆ-ಯಾದರೂ ಗಾಂಭೀರ್ಯ ಹೇಳಹೆಸರಿಲ್ಲದಂತಾಯಿತು. ಆ ಕುರಿತು ವಿಶಿಷ್ಟ ಚರ್ಚೆ ಮತ್ತೆ ಯಾವಾಗಲಾದರೂ ಮಾಡಬಹುದು. ಆದರೆ ಮನುಷ್ಯನ ಚಿಂತನೆಯ ನವೀಕರಣ ವಿಭಿನ್ನ ಯುಗಗಳಲ್ಲಿ ಆದಾಗೆಲ್ಲ ಜ್ಞಾನ ಕೇಂದ್ರಗಳು ಭೌಗೋಳಿಕವಾಗಿ ಸ್ಥಳಾಂತರಗೊಂಡಿವೆ ಎನ್ನುವ ವಾಸ್ತವದತ್ತ ಗಮನ ಹರಿಸಬೇಕಾಗಿದೆ. ಭೌಗೋಳಿಕ ಸ್ಥಳಾಂತರದ ಜೊತೆ ಜೊತೆಗೆ ಭಾಷೆಯ ಪರಿವರ್ತನೆ ಕೂಡ ಆಗಿದೆ. ಹೊಸ, ಅಂದರೆ ತುಲನಾತ್ಮಕವಾಗಿ ಹಿಂದುಳಿದ ಭಾಷೆಗಳ ಮೂಲಕವೇ ಜ್ಞಾನದ ಮುಂದಿನ ಯುಗ ಸಮೃದ್ಧಗೊಳ್ಳುತ್ತದೆ. ಚೀನಿ, ಸಂಸ್ಕೃತ, ಗ್ರೀಕ್, ರೋಮನ್, ಲ್ಯಾಟಿನ್, ಇಂಗ್ಲಿಷ್, ಅಮೆರಿಕನ್-ಇಂಗ್ಲಿಷ್ ಶಾಸ್ತ್ರ ರಚನೆಗಳ ಬೇರೆ ಬೇರೆ ಯುಗಗಳ ಹೆಸರುಗಳಾಗಿವೆ, ಬೇರೆ ಬೇರೆ ಪ್ರದೇಶ ಹಾಗೂ ಭಾಷೆಗಳ ಹೆಸರುಗಳಾಗಿವೆ.

೧೯೫೦ರಲ್ಲಿ ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಜ್ಞಾನ ಕೇಂದ್ರ ಸ್ಥಳಾಂತರಗೊಂಡಾಗ ಅದಕ್ಕೆ ಒಂದು ಪ್ರಬಲವಾದ ಪರ್ಯಾಯ ಆ ದಿನಗಳಲ್ಲಿತ್ತು. ೧೯೪೫ರಲ್ಲಿ ಅಮೆರಿಕಾ ತನ್ನನ್ನು ಪಶ್ಚಿಮದ ಚಕ್ರಾಧಿಪತಿ ಎಂದು ಘೋಷಿಸಿಕೊಂಡಿತು. ಅದೇ ಕಾಲಘಟ್ಟದಲ್ಲಿ ಏಷ್ಯಾ ಆಫ್ರಿಕಾದ ನೂರು ದೇಶಗಳು ಸ್ವಾತಂತ್ರ್ಯ ಪಡೆಯಲಿದ್ದವು. ಮನುಷ್ಯನ ಘನತೆಯನ್ನು ಹೆಚ್ಚಿಸುವ ರಾಷ್ಟ್ರೀಯ ಆಂದೋಲನಗಳಿಂದ ಮಾನವಕುಲದ ಈ ಮಟ್ಟಿನ ರಾಜಕೀಯ ಪುನರುಜ್ಜೀವನವಾಯಿತು. ಅವುಗಳಲ್ಲಿ ಒಂದು ಬೌದ್ಧಿಕ ಪುನರುಜ್ಜೀವನದ ಸಾಧ್ಯತೆಯೂ ಇತ್ತು. ಈ ಎಲ್ಲ ರಾಷ್ಟ್ರೀಯ ಆಂದೋಲನಗಳಲ್ಲಿ ಮಾನವ ಕಲ್ಯಾಣದ ಆಶಯಗಳೂ ಇದ್ದವು. ಆದರೆ ಆಶಯಗಳ ಸಂಪೂರ್ಣ ಈಡೇರಿಕೆ ಪಶ್ಚಿಮದ ಶಾಸ್ತ್ರಗಳ ಮೂಲಕ ಸಾಧ್ಯವಾಗಲಾರದು ಎನ್ನುವುದು ಬಹುತೇಕ ಆಂದೋಲನಗಳಿಗೆ ಸ್ಪಷ್ಟವಾಗಿರಲಿಲ್ಲ, ಪಶ್ಚಿಮದ ಸಿದ್ಧಶಾಸ್ತ್ರಗಳ ಮೂಲಕ ಮನುಕುಲದ ಕಲ್ಯಾಣ ಸಾಧ್ಯವಾಗಬಲ್ಲದು, ಆ ಕಾರಣಕ್ಕಾಗಿ ಹೊಸ ಜ್ಞಾನದ ನಿರ್ಮಾಣದ ಜವಾಬುದಾರಿ ವಹಿಸಿಕೊಳ್ಳುವ ಅಗತ್ಯವಿಲ್ಲವೆಂದು ಮೇಲ್ಕಾಣಿಸಿದ ಮೂರೂ ಖಂಡಗಳ ವಿಶಿಷ್ಟ ವರ್ಗಗಳು ಭಾವಿಸಿದವು. ಈ ಮೂರೂ ಖಂಡಗಳ ಬಿಳಿಯರ ಹೊರತಾದ ಬುದ್ಧಿಜೀವಿಗಳ ಈ ಐತಿಹಾಸಿಕ ಪಲಾಯನದಿಂದ ಪಶ್ಚಿಮದ ವರ್ಚಸ್ಸು ಅಮೆರಿಕಾ ಮೂಲಕ ಮತ್ತೊಮ್ಮೆ ಸ್ಥಾಪನೆಗೊಂಡಿತು. ಪಾಶ್ಚಿಮಾತ್ಯ ಶಾಸ್ತ್ರಗಳ ಈ ಅಮೆರಿಕನ್ ಆವೃತ್ತಿ ಮೊದಲಿಗಿಂತ ಹೆಚ್ಚು ಅನುಪಯುಕ್ತವಾಗಿದೆ. ಈಗ ಮನುಕುಲವನ್ನು ಒಂದು ಶಾಸ್ತ್ರ ರಹಿತ(ಚಿಂತನ ರಹಿತ)ಯುಗಕ್ಕೆ ದೂಡಲಾಗುತ್ತಿದೆ. ಈ ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ನಾವು ಅಜ್ಞಾನದ ಯುಗವನ್ನು ಪ್ರವೇಶಿಸುತ್ತಿದ್ದೇವೆ. ಈಗಲೇ ನಾವು ಈ ಅಪಾಯವನ್ನು ಅರಿತುಕೊಂಡರೆ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ನಾವು ಅದರಿಂದ ಪಾರಾಗಲೂಬಹುದು.

* * *

ಸಾಲದ ಸುಳಿಯಲ್ಲಿ 'ದೊಡ್ಡಣ್ಣ' ಅಮೇರಿಕಾ

– ಎಸ್.ನಾಗೇಂದ್ರ

ಇತ್ತೀಚೆಗೆ ಗ್ರೀಕ್ ದೇಶ ಸಾಲದ ಮಡುವಿನಲ್ಲಿ ಸಿಕ್ಕಿ ಹಾಕಿಕೊಂಡಿದೆ. ಅದನ್ನು ಸಾಲದಿಂದ ಮುಕ್ತಗೊಳಿಸಲು ಅಮೇರಿಕಾದಂಥ ಶ್ರೀಮಂತ ರಾಷ್ಟ್ರಗಳು ಧಾವಿಸುತ್ತಿವೆ. ಆದರೆ ಇಲ್ಲಿ ವೈರುಧ್ಯದ ಸಂಗತಿಯೇನೆಂದರೆ ಅಮೇರಿಕಾ ಸ್ವತಃ ಸಾಲದಲ್ಲಿ ಮುಳುಗಿದೆ. ಮುಳುಗುತ್ತಿರುವ ಮನುಷ್ಯನೊಬ್ಬ ಮುಳುಗುತ್ತಿರುವ ಇನ್ನೊಬ್ಬನನ್ನು ಉಳಿಸುವ ಪ್ರಯತ್ನದಂತಿದೆ. ಜಾಗತಿಕ ಸಾಲದ ಸಮಸ್ಯೆಗೆ ಭಾರತದ ಅರ್ಥ ಶಾಸ್ತ್ರಜ್ಞ ಕೌಟಿಲ್ಯ ತುಂಬ ಹಿಂದೆಯೇ ಹೇಳಿದ್ದ ಒಂದು ಮಾತು ಇಲ್ಲಿ ಅನ್ವಯವಾಗುತ್ತದೆ. ರಾಜರಿಗಾಗಲೀ ಸರ್ಕಾರಕ್ಕಾಗಲೀ ಸಾಲದ ಸಂಕೇತ ಅವನತಿ. ಆದರೆ ಆಧುನಿಕ ಸರ್ಕಾರಗಳು ಚಾಣಕ್ಯನ ಸಾಲದ ಬಗೆಗಿನ ಈ ಸಿದ್ಧಾಂತದಿಂದ ಬಹಳ ದೂರ ಬಂದಿವೆ. ಅಷ್ಟೇ ಅಲ್ಲ, ಚಾಣಕ್ಯನ ನೀತಿ ಮಾತು ಅಕಾಲಿಕವಾಗಿದೆ. ಇತ್ತೀಚಿನ ದಿನಗಳಲ್ಲಿ ಒಳ್ಳೆಯ ಅರ್ಥಶಾಸ್ತ್ರ ಮತ್ತು ಒಳ್ಳೆಯ ರಾಜಕಾರಣ ಪರಸ್ಪರ ಕಣ್ಣುಮುಚ್ಚಾಲೆಯಾಡುತ್ತಿವೆ. ಕನಿಷ್ಠ ಈ ರೀತಿ ಅನ್ನಿಸುತ್ತದೆ, ಸುಯೋಗ್ಯ ಆರ್ಥಿಕ ನೀತಿಗಳು ಕಡ್ಡಾಯವಾಗಿ ಮುಂಬರುವ ಸರ್ಕಾರಗಳಿಗೆ ರಾಜಕೀಯ ಲಾಭಗಳನ್ನು ತಂದುಕೊಡಬೇಕೆಂದೇನಿಲ್ಲ. ಬದಲಿಗೆ ನಾಯಕರು ಮತ್ತು ರಾಜಕೀಯ ಪಕ್ಷಗಳು ತಮ್ಮ ಕೆಟ್ಟ ಆರ್ಥಿಕ ನೀತಿಗಳ ಬಲದಿಂದಲೇ ತಮ್ಮ ಪರವಾಗಿ ರಾಜಕೀಯ ತೀರ್ಪನ್ನು ಪಡೆಯಬಹುದು. ಆದ್ದರಿಂದ ಆಧುನಿಕ ಸರ್ಕಾರಗಳು ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಬರಲು ದೇಶದ ಅರ್ಥವ್ಯವಸ್ಥೆಯನ್ನು ಉದ್ದೀಪಿಸಲು ಕಡಿಮೆ ಸಂಪಾದನೆಯನ್ನು ಮಾಡುತ್ತಾ ಮಾಡುತ್ತಾ ಹೆಚ್ಚು ಹೆಚ್ಚು ಖರ್ಚು ಮಾಡುತ್ತದೆಂಬುದು ರಹಸ್ಯವಾಗಿಯೇ ಉಳಿದಿಲ್ಲ. ಮೈತುಂಬಾ ಸಾಲಮಾಡಿಕೊಂಡಿರುವ ಈ ಜಗತ್ತಿನಲ್ಲಿ "ದಿ ಎಕಾನಾಮಿಸ್ಟ್" ಪತ್ರಿಕೆ ಪ್ರಕಾರ ಜಗತ್ತಿನ ಇಂದಿನ ಒಟ್ಟು ಸಾಲದ ಮೊತ್ತ ೩೨ಟ್ರಿಲಿಯನ್ ಡಾಲರ್‌ಗಳಷ್ಟಿದೆ. ಅಂದರೆ ಈಗ ಜಗತ್ತಿನಲ್ಲಿರುವ ೭ ಬಿಲಿಯನ್ ಸುಮಾರಿನ ಜನಸಂಖ್ಯೆ ಆಧಾರವಾಗಿಟ್ಟುಕೊಂಡರೆ ಈ ಭೂಮಿಮೇಲಿರುವ ಪ್ರತಿಯೊಬ್ಬನ ತಲೆಯ ಮೇಲೆ ೨ ಲಕ್ಷ ರೂಪಾಯಿಗಳಷ್ಟು ಸಾಲ ಇದೆ.

ಇತ್ತೀಚೆಗೆ ಭಾರತ ಸರ್ಕಾರವು ಆಹಾರ ಮತ್ತು ರಾಸಾಯನಿಕ ಗೊಬ್ಬರಗಳ ಮಾರಾಟಕ್ಕೆ ರಿಯಾಯಿತಿ ಕೊಡಲು ಮತ್ತು ಹಣದುಬ್ಬರವನ್ನು ತಡೆಯಲು ೬.೬ ಬಿಲಿಯನ್ ಡಾಲರ್‌ಗಾಗಿ ಸಂಸತ್ತಿನ ಒಪ್ಪಿಗೆಯನ್ನು ಕೇಳಿತು. ಓರ್ವ ಭಾರತೀಯನ ತಲೆಯ ಮೇಲಿನ ಸಾಲ ಸರಾಸರಿ ಅವನ ಹತ್ತು ತಿಂಗಳ ಆದಾಯಕ್ಕೆ ಸಮನಾಗಿದೆ. ಇದನ್ನು ವಾರ್ಷಿಕ ಆಧಾರದ ಮೇಲೆ ಕೇಂದ್ರ ಅಂಕಿ ಸಂಖ್ಯಾ ಸಂಸ್ಥೆ ೧೧೫.೪ ಜನಸಂಖ್ಯೆಯ ಆಧಾರದ ಮೇಲೆ ೩೮ ಸಾವಿರ ರೂಪಾಯಿಗಳಿಗೆ ಸಮವೆಂದು ಲೆಕ್ಕ ಹಾಕಿದೆ. ಇತ್ತೀಚಿನ ವರ್ಷಗಳಲ್ಲಿ ಪ್ರತಿ ವರ್ಷವೂ ಸರ್ಕಾರವು ೩ ಲಕ್ಷ ಕೋಟಿ ಸಾಲಮಾಡುತ್ತಿರುವುದರಿಂದ ೨೦೧೦ರ ಮಾರ್ಚ್ ವೇಳೆಗೆ ಒಟ್ಟು ಸಾಲದ ಮೊತ್ತ

೩೪,೦೬,೩೨೨ ಕೋಟಿಗೆ ನೆಗೆದಿದೆ. ಅಂದರೆ ಏಳು ವರ್ಷಗಳ ಹಿಂದೆ ಇದ್ದ ಸಾಲದ ಮೊತ್ತಕ್ಕೆ ಎರಡರಷ್ಟು ಮೊತ್ತ ಇದಾಗಿದೆ. ಯೋಜನೆಗಿಂತ ಹೆಚ್ಚು ಖರ್ಚುಮಾಡುವ ಈ ಪ್ರವೃತ್ತಿಯಿಂದ ಹತ್ತು ವರ್ಷಗಳ ಬಾಂಡ್‌ಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಕಳೆದ ವರ್ಷ ಏಷ್ಯಾದಲ್ಲಿಯ ಸ್ಥಾನೀಯ ಹತ್ತು ಶ್ರೇಷ್ಠ ಸಾಲದ ಮಾರುಕಟ್ಟೆಯಲ್ಲಿ ಭಾರತೀಯ ಬಾಂಡ್‌ಗಳು ಅತ್ಯಂತ ಕಳಪೆ ಮೌಲ್ಯಗಳದಾಗಿದ್ದವು. ಇದಕ್ಕೆ ಜಪಾನ್ ಮಾತ್ರ ಅಪವಾದವಾಗಿತ್ತು. ಹೂಡಿಕೆದಾರರಿಗೆ ಶೇಕಡಾ ೫.೧ರಷ್ಟು ನಷ್ಟವಾಯಿತು. ಇದಕ್ಕೆ ಕಾರಣ ಜಾಗತಿಕ ಆರ್ಥಿಕ ಹಿಂಜರಿತದಿಂದ ರಕ್ಷಣೆ ಪಡೆಯಲು ೧.೮೬ ಟ್ರಿಲಿಯನ್ ಮೊತ್ತದ ಹಣವನ್ನು ಖರ್ಚು ಮಾಡಿತು. ಭಾರತದ ಪ್ರಚಲಿತ ಸಾರ್ವಜನಿಕ ಸಾಲ ಜಿ.ಡಿ.ಪಿ.ಯೊಂದಿಗೆ ಹೋಲಿಸಿದಾಗ ಶೇಕಡಾ ೫೮.೨ರಷ್ಟಿದೆ ಅಂದರೆ ಅಮೇರಿಕಾದ ಶೇಕಡಾ ೬೦.೮ಕ್ಕೆ ಹತ್ತಿರವಾಗಿದೆ. ನಾವು ಅಮೇರಿಕಾದಿಂದ ಬಹಳಷ್ಟು ಕಲಿಯಬೇಕಿದೆ. ಅಮೇರಿಕಾದ ಅಧ್ಯಕ್ಷ ಬರಾಕ್ ಒಬಾಮ ಅಮೇರಿಕಾದ ಸಂಸತ್ತಿನ ಬೆಂಬಲದಿಂದ ತನ್ನ ದೇಶದ ಸಾಲದ ಮಿತಿಯನ್ನು ೧೨.೪ ಟ್ರಿಲಿಯನ್ ಡಾಲರ್‌ಗೆ ಹೆಚ್ಚಿಸುವ ಶಾಸನವೊಂದಕ್ಕೆ ಹಸ್ತಾಕ್ಷರ ಹಾಕಿದರು. ೨೦೦೯ ಸೆಪ್ಟಂಬರ್ ೩೦ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷಕ್ಕೆ ಅಮೇರಿಕಾದ ಸರ್ಕಾರ ೧.೪ ಟ್ರಿಲಿಯನ್‌ನಷ್ಟು ಖೋತಾ ತೋರಿಸಿತ್ತು. ತನ್ನ ಅರ್ಥವ್ಯವಸ್ಥೆಗೆ ಪ್ರಚೋದನೆ ಕೊಡುವುದಕ್ಕಾಗಿ ಅಮೇರಿಕಾ ಸರ್ಕಾರ ಹೆಚ್ಚು ಹಣ ಖರ್ಚುಮಾಡುವ ಅಗತ್ಯವಿದೆ. ಈ ಪ್ರಕಾರದ ಹೆಚ್ಚು ಖರ್ಚಿಗಾಗಿ ಮತ್ತು ತನ್ನ ಖೋತಾವನ್ನು ಕಡಿಮೆ ಮಾಡುವುದಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಸಾಲವಾಗಿ ಪಡೆಯಬೇಕಿದೆ.

ಐತಿಹಾಸಿಕವಾಗಿ ಜಗತ್ತಿನಲ್ಲಿಯೇ ದ್ವಿತೀಯ ಶ್ರೇಷ್ಠ ಮತ್ತು ಬಲಶಾಲಿಯಾದ ಅಮೇರಿಕಾ ತನ್ನ ಸಾಮರ್ಥ್ಯವನ್ನು ಮೀರಿ ಜೀವಿಸುತ್ತಿದೆ. ೧೯೮೦ರಿಂದ ೧೯೯೨ರವರೆಗಿನ ಅವಧಿಯಲ್ಲಿ ರೇಗನ್ ಮತ್ತು ಬುಷ್ ಅಧ್ಯಕ್ಷರಾಗಿದ್ದಾಗ ಸಾರ್ವಜನಿಕ ಸಾಲ ನಾಲ್ಕು ಪಟ್ಟು ಹೆಚ್ಚಾಯಿತು. ೨೦೦೦ದ ವೇಳೆಗೆ ಕ್ಲಿಂಟನ್ ಅಧ್ಯಕ್ಷರಾಗಿದ್ದಾಗ ಅಷ್ಟೇ ಮೊತ್ತ ಸಾಲವಾಗಿತ್ತು. ಅಧ್ಯಕ್ಷ ಜಾರ್ಜ್.ಡಬ್ಲ್ಯೂ.ಬುಷ್‌ರವರ ಅಧ್ಯಕ್ಷತೆಯ ಬಹು ದೊಡ್ಡ ಹಿರಿಮೆಯೆಂದರೆ ಸಾರ್ವಜನಿಕ ಸಾಲವು ಜನವರಿ ೨೦೦೧ರಿಂದ ಡಿಸೆಂಬರ್ ೨೦೦೮ರ ವೇಳೆಗೆ ೫.೬ಟ್ರಿಲಿಯನ್‌ನಿಂದ ೧೦.೭ ಟ್ರಿಲಿಯನ್‌ಗೆ ಏರಿತು. ಇದು ಕಿರಿಯ ಬುಷ್ ಹಿರಿಯ ಬುಷ್‌ರಿಂದ ಕಲಿತ ಪಾಠದ ಸಾರವಾಗಿತ್ತು. ಏಕೆಂದರೆ ಹಿರಿಯ ಬುಷ್ ತಮ್ಮ ಪುನರಾಯ್ಕೆಯ ಪ್ರಯತ್ನದಲ್ಲಿ ಕ್ಲಿಂಟನ್‌ರವರಿಂದ ಸೋಲನ್ನು ಅನುಭವಿಸಿದ್ದರು. ಇದಕ್ಕೆ ಮುಖ್ಯ ಕಾರಣ ಅಮೇರಿಕಾದ ಬೆಳೆಯುತ್ತಿರುವ ರಾಷ್ಟ್ರೀಯ ಸಾಲವನ್ನು ತೆರಿಗೆಗಳ ಮೂಲಕ ಶಿಸ್ತಿಗೆ ಒಳಪಡಿಸಬೇಕೆಂಬುದೇ ಆಗಿತ್ತು. ಆದರೆ ಇದು ಚುನಾವಣೆಯ ಕಾಲದಲ್ಲಿ ಅವರು ಕೊಟ್ಟಿದ್ದ ವಚನಕ್ಕೆ ವಿರುದ್ಧವಾಗಿತ್ತು. ಸಾಲವನ್ನು ಹೆಚ್ಚಿಸುವ ಈ ಪ್ರಕ್ರಿಯೆ ಮುಂಬರಿಯುವ ಸೂಚನೆಯಿದೆ. ಏಕೆಂದರೆ ಬರಾಕ್ ಒಬಾಮ ಯುದ್ಧ, ಆರೋಗ್ಯ ಸುರಕ್ಷಾ ಸುಧಾರಣೆಗಳು ಮತ್ತು ಸಾಮಾಜಿಕ ಭದ್ರತೆ ಇತ್ಯಾದಿಗಳಿಗಾಗಿ ಇನ್ನೂ ಹೆಚ್ಚು ಹಣವನ್ನು ಖರ್ಚುಮಾಡಲು ಉದ್ದೇಶಿಸಿದ್ದಾರೆ. ತತ್ಪರಿಣಾಮವಾಗಿ ಅಮೇರಿಕಾದ ಒಟ್ಟು ರಾಷ್ಟ್ರೀಯ ಸಾಲ ೨೦೧೫ರ ಹೊತ್ತಿಗೆ ಸುಮಾರು ೨೦ ಟ್ರಿಲಿಯನ್ ಡಾಲರ್‌ಗೆ ಏರುವ ಸಂಭವವಿದೆ. ಹಾಗಾದರೆ ಅಮೇರಿಕೆಗೆ

ಈ ಅಗಾಧವಾದ ಸಾಲವನ್ನು ಯಾರು ಕೊಡುತ್ತಿದ್ದಾರೆ? ಮೇ ೨೦೦೯ರ ವೇಳೆಗೆ ಅಮೆರಿಕಾ ಚೀನಾಕ್ಕೆ ೭೭೨ ಬಿಲಿಯನ್ ಸಾಲವನ್ನು ಕೊಡಬೇಕಾಗಿತ್ತು. ಅಲ್ಲದೇ ಜಪಾನ್ ಮತ್ತು ಸೌದಿ ಅರೆಬಿಯಾದಂತಹ ಇತರ ದೇಶಗಳಿಗೂ ಕೂಡ ದೊಡ್ಡ ಪ್ರಮಾಣದ ಸಾಲವನ್ನು ಕೊಡಬೇಕಾಗಿತ್ತು. ವಾಸ್ತವದಲ್ಲಿ ಆಗುತ್ತಿರುವುದೇನೆಂದರೆ ಓರ್ವ ಚೀನಿಯ ಉಳಿತಾಯವನ್ನು ಓರ್ವ ಅಮೇರಿಕನ್ ಖರ್ಚುಮಾಡುತ್ತಿದ್ದಾನೆ! ಈ ಪರಿಸ್ಥಿತಿ ಖಂಡಿತವಾಗಿಯೂ ಅಮೇರಿಕಾಕ್ಕೆ ಆಥಿಕ ಮತ್ತು ರಾಜಕೀಯ ಗಂಡಾಂತರಗಳನ್ನು ತಂದೊಡ್ಡಿದೆ. ಅಮೇರಿಕಾ ಹೆಚ್ಚು ಹೆಚ್ಚಾಗಿ ಚೀನಾದಿಂದ ಸಾಲ ಪಡೆಯುತ್ತಿರುವುದರಿಂದ ಅಮೇರಿಕಾದ ಆರ್ಥಿಕ ಹಿರಿತನವು ಕ್ರಮೇಣ ಗಂಭೀರವಾಗಿ ಇಳಿಮುಖವಾಗುವ ಸಾಧ್ಯತೆಯಿದೆ. ಸಧ್ಯಕ್ಕಂತೂ ಚೀನಾ ಕದಡಿದ ನೀರಿನಲ್ಲಿ ಮೀನು ಹಿಡಿಯಲು ಇಷ್ಟಪಡುವುದಿಲ್ಲ. ಕಾರಣ ಅಮೇರಿಕಾದ ಡಾಲರ್‌ಗೆ ಗಣನೀಯ ಪರ್ಯಾಯವಾದ ನಾಣ್ಯ ಇಲ್ಲದೇ ಇರುವುದು. ತೈಲ ಶ್ರೀಮಂತ ರಾಷ್ಟ್ರಗಳು ಮತ್ತು ಭಾರತ, ಚೀನಾ, ರಷ್ಯಾ ಮುಂತಾದ ದೇಶಗಳು ಡಾಲರ್‌ಯೇತರ ಠೇವಣಿಗಳನ್ನು ಬಗೆ ಬಗೆಯ ಉಪಯೋಗಕ್ಕಾಗಿ ಉಪಯೋಗಿಸುವುದರಿಂದ ಅಮೇರಿಕಾದ ಡಾಲರ್‌ಗೆ ಪರ್ಯಾಯ ನಾಣ್ಯದ ಅಭಾವದ ಕಾರಣದಿಂದ ಪರಿಸ್ಥಿತಿ ಬದಲಾಗುತ್ತಿದೆ. ಅಮೇರಿಕಾ ತನ್ನ ರಾಷ್ಟ್ರೀಯ ಸಾಲದ ಭಾರವನ್ನು ತಡೆಯಲು ಸಾಧ್ಯವಾಗದಿರುವುದಕ್ಕೆ ಕಾರಣ ಅದರ ಆರ್ಥಿಕ ಮತ್ತು ರಾಜಕೀಯ ಪ್ರಧಾನ್ಯತೆಯೇ ಆಗಿದೆ. ಜೊತೆಗೆ ಅದರ ಡಾಲರ್‌ನ ಶಕ್ತಿ ಕೂಡ. ಆದರೆ ಭಾರತದ ವಿಷಯವೇನು? ಭಾರತ ನಿಸ್ಸಂಶಯವಾಗಿ ಅಮೇರಿಕಾದ ರೀತಿಯನ್ನು ಅನುಕರಣೆ ಮಾಡಕೂಡದು. ದೇಶದ ಖೋತಾ ಬಜೆಟ್‌ನ್ನು ಕಡಿಮೆಮಾಡುವ ಮತ್ತು ರಾಷ್ಟ್ರೀಯ ಸಾಲಕ್ಕೆ ಕಡಿವಾಣ ಹಾಕುವ ಕ್ರಮವನ್ನು ದೇಶದ ಆರ್ಥಿಕ ಯೋಜಕರು ಸಮತೋಲನದ ನೀತಿಯನ್ನು ಅನುಸರಿಸುವ ಕಾಲ ಬಂದಾಗಿದೆ. ಆರ್ಥಿಕ ಪ್ರಗತಿಯ ಒತ್ತಡಕ್ಕಾಗಿ ನಾವು ನಮ್ಮ ಆಂತರಿಕ ಖರ್ಚಿಗಾಗಿ ಹೊರ ದೇಶದಿಂದ ಸಾಲಮಾಡುತ್ತಾ ಹೋಗುವುದು ಸರಿಯಲ್ಲ. ಇದರಿಂದಾಗಿ ಬೆಳವಣಿಗೆಯ ಕೆಲ ಗುರಿಗಳನ್ನು ತಗ್ಗಿಸಬೇಕಾಗಬಹುದು. ನಮ್ಮ ದೀರ್ಘಾವಧಿಯ ರಾಷ್ಟ್ರೀಯ ಮತ್ತು ಆರ್ಥಿಕ ಭದ್ರತೆ ದೃಷ್ಟಿಯಿಂದ ಆರ್ಥಿಕ ಶಿಸ್ತು ಅತ್ಯಗತ್ಯವಾಗಿದೆ. ನಾವು ನಮ್ಮ ದೇಶವನ್ನು ಮುಂದುವರೆಯುತ್ತಿರುವ ಪೂರ್ವೋತ್ತರ ದೇಶವೆಂದು ಪರಿಗಣಿಸುವ ಹಾಗೂ ಸುಯೋಗ್ಯ ಆರ್ಥಿಕ ಆಯ್ಕೆಗಳನ್ನು ಮಾಡುವ ಕಾಲ ಬಂದಿದೆ. ಇದನ್ನು ರಾಜಕೀಯವಾಗಿ ಅಂಗೀಕರಿಸುವುದಕ್ಕೆ ಕಷ್ಟಸಾಧ್ಯವಾಗಬಹುದು. "ಕಪ್ಪು ಹಂಸ" ಎಂಬ ಪುಸ್ತಕದ ಲೆಖಕರಾದ ನಾಸಿಮ್ ನಿಕೋಲಾಸ್ ತಾಲಿಬ್ ಇತ್ತಿಚೆಗೆ ದೂರದರ್ಶನದಲ್ಲಿ ಈ ರೀತಿ ಹೇಳಿದ್ದಾರೆ. "ಅಮೇರಿಕಾದ ಕಳೆದ ಕೆಲವು ವರ್ಷಗಳ ಬೆಳವಣಿಗೆ; ಸಾಲದಿಂದ ಉಂಟಾದ ಗಿಲೀಟ್ ಬೆಳವಣಿಗೆ".

(ಅನು–ಸು.ಕೌ)

* * *

ಮಹಾತ್ಮರ ಬಗ್ಗೆ ಮಾಹಿತಿ; ಐದು ಸಾವಿರ ರೂಪಾಯಿ ಬಹುಮಾನ !

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

ಹೆಂಡತಿ ಊಟಕ್ಕೆ ಬಡಿಸುತ್ತಿದ್ದರು, ಆದರೆ ಗಂಡ(ಅಧ್ಯಕ್ಷ) ಮಾತ್ರ ಊಟವನ್ನೂ ಮಾಡದೆ, ಏನೂ ಮಾತಾಡದೆ ಸುಮ್ಮನೆ ಕುಳಿತಿದ್ದರು. ಯಾವುದೋ ಚಿಂತೆಗೆ ಅವರು ಒಳಗಾಗಿರುವಂತೆ ಕಾಣುತ್ತಿತ್ತು.

"ಖಂಡಿತವಾಗಿಯೂ ಎಲ್ಲೋ ಏನೋ ವ್ಯತ್ಯಾಸವಾಗಿದೆ" ಎಂದು ಗ್ರಹಿಸಿದ ಅವರ ಶ್ರೀಮತಿಯವರು "ಸಾಹೇಬ್ರ ಆರೋಗ್ಯ ಚೆನ್ನಾಗಿದೆ ತಾನೆ?" ಅಕ್ಕರೆಯಿಂದ ಕೇಳಿದರು.

"ಚೆನ್ನಾಗಿದ್ದೀನಿ ಚಿನ್ನ, ಖಂಡಿತಾ ಚೆನ್ನಾಗಿದ್ದೀನಿ!" ಮುಖದ ಮೇಲೆ ಗೆಲುವು ತಂದುಕೊಂಡು ಮಂಪರಿನಿಂದ ಹೊರಬಂದವರಂತೆ ಉತ್ತರಿಸಿದರು.

"ಇಲ್ಲ ನಿಮ್ಮ ಮುಖ, ನಿಮ್ಮ ಈ ನಿಷ್ಕ್ರಿಯ ಸ್ಥಿತಿ ಸಾರಿ ಸಾರಿ ಹೇಳ್ತಾ ಇವೆ. ಎಲ್ಲೋ ಏನೋ ಆಗಿದೆ ಅಂತ. ಅಂದ ಹಾಗೆ, ನಿಮ್ಮ ಎರಡನೆಯ ಹೆಂಡ್ತಿ–ಆ ಮಹಾನ್ ಮುನಿಸಿಪಾಲಿಟಿಯ ಆರೋಗ್ಯ ಹದವಾಗಿದೆ ತಾನೆ?" ಎಂದು ನೇರವಾಗಿ ಕೇಳಿದಳು.

"ನಾವು ಈ ದೇಶಕ್ಕೆ ಬರಲೇ ಬಾರದಿತ್ತು ಚಿನ್ನ! ನನಗೆ ತೀರಾ ನಿರಾಸೆ ಆಗಿದೆ, ಆಗ್ತಾ ಇದೆ!" ಪಶ್ಚಾತ್ತಾಪ ಮತ್ತು ಖಿನ್ನತೆಗಳು ಮುಖದ ಮೇಲೆ ಎದ್ದು ಕಾಣುತ್ತಿದ್ದವು.

ಗಂಡನ ಮಾತುಗಳನ್ನು ಕೇಳಿ ಕಳವಳಗೊಂಡ ಆಕೆ "ಏನು, ಏನಾಗಿದೆ ಅನ್ನೋದನ್ನ ಸ್ವಲ್ಪ ಬಿಡಿಸಿ ಹೇಳಿ, ಈ ದೇಶ ಎಷ್ಟೇ ಆಗ್ಲಿ ನಮ್ಮ ಹಿರಿಯರ ದೇಶ, ನಾವಿಬ್ಬರೂ ಈ ದೇಶಕ್ಕೆ ಮೂರನೇ ತಲೆಮಾರಿನವರು, ಅನಿವಾಸಿ ಭಾರತೀಯರು, ಈ ದೇಶದ ಪ್ರಧಾನಮಂತ್ರಿಯವರು ಅನಿವಾಸಿ ಭಾರತೀಯರಿಗೆ ಕಾಲದಿಂದ ಕಾಲಕ್ಕೆ ವಿನಂತಿಸಿಕೊಂಡಿದ್ದಕ್ಕೆ ಗಮನ ಕೊಟ್ಟು, ಈ ದೇಶದ ಸೇವೆ ಮಾಡಬೇಕೂಂತ ಸಂಯುಕ್ತ ಸಂಸ್ಥಾನಗಳಿಂದ ಇಲ್ಲಿಗೆ ಬಂದಿರೋದು, ನಾವು ಇಲ್ಲಿಗೆ ಬಂದಿರೋದು ಶುದ್ಧ ಸೇವಾ ಮನೋಭಾವದಿಂದಲೇ ಹೊರತು ಸಂಪತ್ತು–ಸಂತೋಷಗಳನ್ನು ಸಂಪಾದ್ನೆ ಮಾಡ್ಕೋಬೇಕೂಂತ ಖಂಡಿತ ಅಲ್ಲ. ಆದ್ರಿಂದ ನಾವು ಖಿನ್ನರಾಗಬೇಕಾದ್ದಿಲ್ಲ, ಆಗೋದಕ್ಕೆ ಕಾರಣವೂ ಇಲ್ಲ ಅಂತ ನನ್ನ ಭಾವನೆ" ಎಂದು ಸಮಾಧಾನ ಹೇಳಿದಳು.

"ಏನು ಹೇಳಲಿ ಚಿನ್ನ! ಭಣಭಣಿಸುವ ಮರಳುಗಾಡಿನಲ್ಲಿ ಮರೀಚಿಕೆಯ ಬೆನ್ನು ಹತ್ತಿ ಬಾಯಾರಿದ ಪ್ರಯಾಣಿಕನ ಸ್ಥಿತಿ ನನ್ನದಾಗಿದೆ! ಇಲ್ಲಿನ ಜನ... ಅದ್ರಲ್ಲೂ ಮುಂದಾಳುಗಳು ಅನ್ನಿಸಕೊಂಡೋರು ಸೇವಾ ಮನೋಧರ್ಮದಿಂದ ಸುತಾರಾಮ್ ಕೆಲಸ ಮಾಡಲ್ಲ ಅನ್ನೋದನ್ನ ನಾನೇ ಕಂಡುಕೊಂಡೆ. ನಿನಗೊಂದು ನಿದರ್ಶನ

ನೀಡಬೇಕೂಂದ್ರೆ–ನಮ್ಮ ಈ ಪುರಸಭೆಯ ಹೊರವಲಯದಲ್ಲಿ "ಗಾಂಧೀ ಮೈದಾನ" ಎಂಬ ಹೆಸರಿನ ಒಂದು ಮೈದಾನ ಇದೆ. ಅದಕ್ಕೆ ಆ ಹೆಸ್ರು ಹ್ಯಾಗೆ ಬಂತು? ಆ ಮಹಾನ್ ವ್ಯಕ್ತಿ ಗಾಂಧೀ ಯಾರು? ಎಂಬುದು ಮಾತ್ರ ನಮ್ಗೆ ತಿಳಿದಷ್ಟೂ ತಿಳಿದಿಲ್ಲ. ಆ ಮೈದಾನ "ಗಾಂಧೀ ಮೈದಾನ" ಹ್ಯಾಗಾಯ್ತು ಅನ್ನೋದನ್ನ ಪರಿಶೀಲನೆ ಮಾಡಿ ವರದಿ ಒಪ್ಪಸೋದಕ್ಕೆ ಅಂತ ಒಂದು ಸಮಿತಿಯನ್ನು ರಚಿಸಿದ್ದೆ. ಅದ್ರಿಂದ ಏನೂ ಪ್ರಯೋಜನವಾಗ್ಲಿಲ್ಲ. ಆದ್ರೂ ಒಂದು ಸೋಜಿಗದ ಸಂಗ್ತಿ ಹೊರಕ್ಕೆ ಬಂತು. ಸಮಿತಿ ಅಧ್ಯಕ್ಷರಾಗಿದ್ದ ಹಿರೀ ಸದಸ್ಯರೇ, ಮೈದಾನಕ್ಕೆ ತನ್ನ ತಂದೆಯ ಹೆಸ್ರನ್ನ ಇರಿಸಿ ಮೈದಾನಕ್ಕೆ ಮರುನಾಮಕರಣ ಮಾಡಬೇಕೂಂತ ಶಿಫಾರಸು ಮಾಡವ್ರೆ. ಅವ್ರ ಅಪ್ಪ ಬಹು ದೊಡ್ಡ ಸಮಾಜ ಕಾರ್ಯಕರ್ತರೂಂತ್ಲೂ ಹೇಳಿಕೊಂಡವ್ರೆ. ಈಗ ತಲೆದೋರಿರೋ ಸಮಸ್ಯೆ ಅಂದ್ರೆ ಆ ಶಿಫಾರಸನ್ನ, ಸದಸ್ಯರ್ಯಾರೂ ಒಪ್ತಾ ಇಲ್ಲ. ತನಗೂ, ತನ್ನ ತಂದೆಗೂ ಅವಮಾನವಾಯ್ತೂಂತ ಪ್ರತಿಭಟಿಸಿ ಹೊರಹೋದ ಹಿರೀ ಸದಸ್ಯರು, ನಡೆದ ಭೂಮಿಪೂಜಾ ಕಾರ್ಯಕ್ಕೂ ಹಾಜರಾಗ್ಲಿಲ್ಲ!" ಮಾತಿನಲ್ಲಿ ನೋವಿತ್ತು, ಬೇಸರವೂ ಇತ್ತು.

"ನಾಚಿಕೆ ಗೇಡು!" ಸಿಟ್ಟಿನಿಂದ ಉದ್ಗರಿಸಿದ ಆಕೆ, "ಅಲ್ಲ, ಸಭೆಯಲ್ಲಿ ಹಿರಿಯರು ಅನ್ನಿಸಿಕೊಂಡೋರು, ಸಮಿತಿಗೆ ಅಧ್ಯಕ್ಷರೂ ಆಗಿದ್ದೋರು ನಡೆದುಕೊಂಡಿರೋದನ್ನ ಕೇಳಿದ್ರೆ ನನಗೇ ಆಶ್ಚರ್ಯವಾಗ್ತದೆ, ಅಸಹ್ಯವೂ ಆಗ್ತದೆ! ಕೆಲಸಕ್ಕೆ ಬಾರದಿರೋ ವಿಷಯಗಳನ್ನೇ ಇಷ್ಟು ದೊಡ್ಡದಾಗಿ ಬೆಳೆಸ್ಕೊಂಡು ಹೋಗೋದಕ್ಕೆ ಮನಸ್ಸು ಹ್ಯಾಗೆ ಬರ್ತದೆ, ಸಮಯ ಎಲ್ಲಿ ಸಿಕ್ತದೆ ಅನ್ನೋದೇ ಅರ್ಥವಾಗ್ತಾಯಿಲ್ಲ. ಇಲ್ಲಿನ ವ್ಯವಸ್ಥೇನೇ ವಿಚಿತ್ರ, ತೀರಾ ವಿಚಿತ್ರ! ಆಮೇಲೆ ಏನಾಯ್ತು ಅನ್ನೋದನ್ನೂ ಹೇಳಿಬಿಡಿ" ಎಂದಳು.

"ಏನು ಹೇಳಲಿ ಚಿನ್ನ? ಅದೇ ಆ ಹಿರೀ ಸದಸ್ಯರು, ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ, ತಮ್ಮ ಅಪ್ಪನ ಹೆಸರ್ನಲ್ಲಿ ಮೈದಾನಕ್ಕೆ ಮರು ನಾಮಕರಣ ಮಾಡುವಂತೆ ವಿನಂತಿಸಿಕೊಂಡಿರಬೇಕೂಂತ ಕಾಣ್ತದೆ. ಆದ್ರಿಂದ್ಲೇ ಈವೊತ್ತು ಎಲ್ಲರ ಎದುರಿನಲ್ಲಿಯೇ ಮೈದಾನದ ಹೆಸ್ರನ್ನ ಬದ್ಲಾಯಿಸುವಂತೆ ಮುಖ್ಯಮಂತ್ರಿಯವರು ಮುನಿಸಿಪಾಲಿಟಿಗೆ ಅಧಿಕೃತವಾಗಿ ಸೂಚನೆ ಕೊಡ್ತಾರೆ ಅಂತ ಕೊಚ್ಚಿಕೊಂಡ್ರು".

"ಅದು ಆಗುತ್ತೆ ಅಂತ ನೀವು ನಂಬ್ತೀರಾ?" ಗಂಭೀರವಾಗಿ ಕೇಳಿದಳು.

"ನನ್ನ ಮಟ್ಟಿಗೆ ಹೇಳೋದಾದ್ರೆ ಚಿನ್ನ, ಈ ದೇಶದಲ್ಲಿ, ಯಾವ್ದೂ ಸಾಧ್ಯವಿಲ್ಲ ಅಂತ ಹೇಳೋದಕ್ಕೆ ಆಗೋದಿಲ್ಲ. ಐದು ವರ್ಷಗಳ ಹಿಂದೆ ಬಂದು ಈ ದೇಶಕ್ಕೆ ಕಾಲಿರಿಸಿದಂದಿನಿಂದ ಪ್ರತಿನಿತ್ಯವೂ ಅನುಭವಕ್ಕೆ ಬಂದಿದೆ, ಬರ್ತಾಯಿದೆ. ರಚನಾತ್ಮಕವಾದ ರೀತಿಯಲ್ಲಿ ಜನರಿಗೆ ಸಹಾಯಮಾಡೋದಕ್ಕಾಗಲಿ, ಮಾರ್ಗದರ್ಶನ ಮಾಡೋದಕ್ಕಾಗಲಿ ಇಲ್ಲಿನ ರಾಜಕಾರಣಿಗಳಿಗೆ ಮನಸಿಲ್ಲ. ಅದಕ್ಕೆ ಬದ್ಲಾಗಿ ಬೀದಿ, ಚೌಕ, ವೃತ್ತ, ಗಲ್ಲಿ, ಪಟ್ಟಣ ಮತ್ತು ನಗರಗಳ ಹೆಸರುಗಳನ್ನು ಬದ್ಲಾಯಿಸೋದೂಂದ್ರೆ ಒಂದು ಕೆಲಸವೇ ಆಗಿಬಿಟ್ಟಿದೆ. ಬೇರೆ ಕಡೆ ಬದ್ಲಾವಣೆ ಅನ್ನೋದೊಂದು ಪ್ರಕೃತಿ ನಿಯಮವಾದ್ರೆ, ಇಲ್ಲಿ ಮಾತ್ರ ಅದೊಂದು ಜೀವನ ಕ್ರಮವೇ ಆಗಿಬಿಟ್ಟಿದೆ. ಒಟ್ನಲ್ಲಿ ಬದ್ಲಾವಣೆಗೋಸ್ಕರ ಬದ್ಲಾವಣೆ, ಅದಕ್ಕೊಂದು ಕ್ರಮ, ಕಾರಣ ಏನೂ ಬೇಕಾಗಿಲ್ಲ!" ನೊಂದು ನುಡಿದರು.

"ನಿಮ್ಮ ನೋವು ನನಗೆ ಅರ್ಥವಾಗಿದೆ. ಈ ದೇಶಕ್ಕೆ ಬರೋದಕ್ಕೆ ಮೊದ್ಲೇ,

ಈ ದೇಶ ಮುಂದಾಳ್ತನದಲ್ಲಿ ಮಾತ್ರ ಮುಂದಾಗಿದೆ, ಬಹಳ ಮುಂದಾಗಿದೆ, ಮಿಕ್ಕ ಎಲ್ಲ ವಿಷಯಗಳಲ್ಲಿ ಬಹಳ ಹಿಂದುಳಿದಿದೆ, ಬಡವಾಗಿದೆ ಅಂತ ನಮಗೆ ತಿಳಿದೇ ಇತ್ತು. ಇಲ್ಲಿನ ಜನರು ಬಹಳಮಟ್ಟಿಗೆ ಸ್ವಾರ್ಥಿಗಳು, ಆದ್ರೆ ಎಲ್ರೂ ಲೋಭಿಗಳಲ್ಲ ಎಂಬುದೂ ನಮಗೆ ತಿಳಿದಿತ್ತು. ಇಂಥಾದ್ರಲ್ಲಿಯೇ ಇಲ್ಲಿನ ಜನರಿಗೆ ಸಾಧ್ಯವಾಗುವಷ್ಟು ಸಹಾಯ ಮಾಡಬೇಕೂಂತ ನಾವು ಬಂದಿರೋರು ಹೌದಾದ್ರೆ, ಇನ್ನೂ ಸ್ವಲ್ಪ ಕಷ್ಟಪಡಬೇಕಾಗ್ತದೆ–ಪಡೋಣ, ಎಷ್ಟೇ ಆಗ್ಲಿ ಮಾತೃಭೂಮಿ! ಪ್ರತಿಫಲಾಪೇಕ್ಷೆಯಿಲ್ಲದೆ ತಾಯಿ ಭಾರತಿಗಾಗಿ ಶ್ರಮಿಸೋಣ!" ಸಮಾಧಾನ ಹೇಳಿದಳು.

"ಅದಂತೂ ಹೇಳ್ದೇ ಕೇಳ್ದೇ ಆಗ್ತದೆ ಚಿನ್ನ" ಎಂದು ದೃಢೀಕರಿಸಿದ ಅಧ್ಯಕ್ಷರು ವಿಷಯಾಂತರ ಮಾಡಿ" ಮೊನ್ನೆಯ ದಿನ ನೆರವೇರಿದ ಭೂಮಿಪೂಜೆಯದು ಒಂದು ಸಂಗತಿ ಚಿನ್ನ. ಪುರೋಹಿತರ ಅಣತಿಯಂತೆ ನಾನು ಮೂರು ಬಾರಿ ಪಿಕಾಶಿಯಿಂದ ಮಣ್ಣು ಅಗೆಯಬೇಕಾಯ್ತು, ಮೂರನೇ ಬಾರಿಗೆ ಮಣ್ಣನ್ನ ಮೀಟಿದಾಗ, ಒಳಗಿನಿಂದ ಠಣ್ ಶಬ್ದ ಕೇಳಿ ಬಂತು. ಆಮೇಲೆ ಎಲ್ಲ ಸದಸ್ಯರ ಸಮ್ಮುಖದಲ್ಲಿ ಭೂಮಿಯನ್ನು ಶೋಧಿಸಿ ನೋಡಿದ್ದಾಯ್ತು".

"ಸಧ್ಯ, ಬೆಟ್ಟ ಅಗೆದು ಇಲಿ ಹಿಡಿದ್ಹಂಗಾಯ್ತು ಅನ್ನೋ ಹಾಗೆ ಆಗಲಿಲ್ಲ ತಾನೆ?" ಬೇಕು ಅಂತ ತಮಾಷೆ ಮಾಡಿದಳು. "ನಿನ್ನ ಗಂಡನ ನಿರೀಕ್ಷೆ ತಪ್ಪಾಗಬಹುದು, ಚಿನ್ನ ಆದ್ರೆ ಪುರಸಭಾಧ್ಯಕ್ಷರ ನಿರೀಕ್ಷೆ ಹುಸಿಯಾಗೋದಕ್ಕೆ ಸಾಧ್ಯವಿಲ್ಲ" ಮುಗುಳ್ನಗುತ್ತ ಹೇಳಿದರು.

"ಹೌದಾ? ಏನು ಸಿಕ್ತು?" ಕುತೂಹಲದಿಂದ ಕೇಳಿದಳು.

"ಸಿಕ್ತು ಚಿನ್ನ, 'ಮಹಾತ್ಮ ಗಾಂಧೀ' ಎಂದು ಕರೆಯಲಾಗಿರುವ ಸಂತರೊಬ್ಬರ ಆಳು ಪ್ರಮಾಣದ ಪ್ರತಿಮೆ ಭೂಮಿಯಲ್ಲಿ ಹುದುಗಿ ಹೋಗಿದ್ದುದು ಕಂಡು ಬಂತು, ಸಿಕ್ತು. ಆ ಮೈದಾನಕ್ಕೆ "ಗಾಂಧೀ ಮೈದಾನ" ಅಂತ ಯಾಕೆ ಹೆಸ್ರಾಯ್ತು ಅನ್ನೋದೀಗ ಅಂಗೈಲಿಟ್ಕೊಂಡ ನೆಲ್ಲಿಕಾಯಿನಷ್ಟು ಸ್ಪಷ್ಟವಾಯ್ತು!" ಎಂದು ಸಂತೋಷದಿಂದ ಸಂಕ್ಷೇಪಿಸಿದರು.

"ಅದ್ಸರಿ, ನಿಮ್ಮ ಸದಸ್ಯ ಮಿತ್ರರ ಪ್ರತಿಕ್ರಿಯೆ ಏನು? ಹ್ಯಾಗಿದೆ?" ತಿಳಿಯ ಬಯಸಿದಳು.

"ಅದನ್ನ ಹೇಳಬೇಕೂಂದ್ರೆ ಬೇಸ್ರವಾಗ್ತದೆ ಚಿನ್ನ! ಆ ಸಂತ ಯಾರು ಅನ್ನೋದು ಯಾರೊಬ್ರಿಗೂ ಗೊತ್ತಿಲ್ಲ ಅಷ್ಟೇ ಅಲ್ಲ ತಿಳ್ಕೊಳ್ಳೋ ಆಸಕ್ತಿನೂ ತೋರಿಸ್ಲಿಲ್ಲ. ಈ ಪಟ್ಟಣ ಅಷ್ಟೇ ಯಾಕೆ? ಈ ಪ್ರದೇಶಕ್ಕೆ ಸಂಬಂಧಪಡದಿರೋ ಯಾರೋ ಒಬ್ಬ ಅಪರಿಚಿತ ಅನ್ನೋದು ಅವ್ರ ಅಭಿಪ್ರಾಯ!"

"ಅವರ ಅರಿವು, ಅಭಿಪ್ರಾಯ ಅವರಿಗಿರ್ಲಿ, ಹಂಗಿರ್ಲಿ, ಆ ಪ್ರತಿಮೆ 'ಮಹಾತ್ಮ ಗಾಂಧಿ'ಯವರದ್ದು ಅಂತ ನಿಮ್ಗೆ ಹ್ಯಾಗೆ ತಿಳೀತು ಅನ್ನೋದನ್ನ ಹೇಳಿ!" ಎಂದು ಕೇಳಿದಳು.

"ಚಿನ್ನ, ಅದೊಂದು ಎತ್ತರವಾದ ವೃದ್ಧರ ಪ್ರತಿಮೆ, ಕೃಶವಾದ ಕೈಕಾಲು, ಕೈಲಿ ಕೋಲ್ಹಿಡ್ಕೊಂಡು ನಡೆಯುವ ಭಂಗಿ, ಮೊಳಕಾಲ್ನಿಂದ ಮೇಲಕ್ಕೆ, ಸೊಂಟದವರ್ಗೆ ಒಂದು ತುಂಡು ಪಂಚೆ, ಎದೆ ಮತ್ತು ಭುಜಗಳನ್ನು ಮುಚ್ಚುವ ಒಂದು ಶಾಲು, ಬೋಳು ತಲೆ, ನೋಡಿದವರ ಮನಸ್ಸನ್ನು ತುಂಬುವಂಥ ಮುಗುಳ್ನಗೆ, ಕಣ್ಣಿಗೆ

ಕನ್ನಡಕ, ನೇರ ನಿಲುವಿನ ಆ ವೃದ್ಧಮೂರ್ತಿ ನೋಡೋದಕ್ಕೆ ನಿಜಕ್ಕೂ ಚೆನ್ನಾಗಿದೆ, ಸಂತ ಸದೃಶವಾಗಿ ಕಾಣ್ತದೆ!"

"ಹೌದಾ? ಈಗ ಆ ಪ್ರತಿಮೆ ಎಲ್ಲಿದೆ? ಕೇಳ್ತಾ ಕೇಳ್ತಾ ನೋಡ್ಬೇಕು ಅನ್ನಿಸ್ತದೆ, ನೋಡಬೋದು ತಾನೆ?" ಅತ್ಯಾಸಕ್ತಿಯಿಂದ ಕೇಳಿದಳು.

"ಖಂಡಿತ ನೋಡಬೋದು. ಸದ್ಯಕ್ಕೆ ಅದನ್ನ ಅಚ್ಚುಕಟ್ಟು ಮಾಡಿಸ್ತಾ ಇದ್ದೀವಿ. ಅದಾದ ಮೇಲೆ ಮೆರಗು ಕೊಡ್ಸಿ, ಸಾರ್ವಜನಿಕರ ದರ್ಶನಕ್ಕೇಂತ ಪುರಸಭಾ ಭವನದಲ್ಲಿ ಇರಿಸ್ತೇವೆ. ಗಮನಾರ್ಹ ಸಂಗತಿ ಅಂದ್ರೆ-ಪ್ರತಿಮೆಗೆ ಒಂದು ಪಾದಪೀಠವೂ ಇದೆ, ಅದರ ಮೇಲೆ ಅಕ್ಷರ ಕೆತ್ತನೆಯೂ ಇದೆ. ನಮ್ಮ ದುರದೃಷ್ಟ-ಸದರಿ ಪಾದಪೀಠ ಸ್ವಲ್ಪ ಮುಕ್ಕಾಗಿರೋದ್ರಿಂದ ಕೆತ್ತಿರೋ ಅಕ್ಷರಗಳು ಗುರುತಿಸೋದಕ್ಕೆ ಆಗದಿರೋಷ್ಟು ವಿರೂಪವಾಗಿವೆ..."

"ಹಾಗೇನು?" ಮಿತಿಮೀರಿದ ಕುತೂಹಲದಿಂದ ಕೇಳಿದ ಆಕೆ - "ಓದೋದಕ್ಕೆ ಸಾಧ್ಯವಾಗಿರೋದ್ರಿಂದ ಏನು ತಿಳಿದ್ಬಂತು ತಿಳಿಸಿ!" ಒತ್ತಾಯಿಸಿದಳು.

"ಪಾದಪೀಠದ ಕೆತ್ತನೆಯಲ್ಲಿ "ಮಹಾತ್ಮ ಗಾಂಧಿ... ಪಿತ" ಎಂದು ಓದಬೋದು. ಆ "ಪಿತ" ಎಂಬುದರ ಮೊದಲಿಗೆ ಮುಕ್ಕಾಗಿರೋದ್ರಿಂದ, ಏನಿತ್ತು ಅನ್ನೋದು ತಿಳಿಯಲಾಗ್ತಾಯಿಲ್ಲ. ಈ "ಮಹಾತ್ಮ ಗಾಂಧೀ" ಯಾವ ಮಗನ ಅಥವಾ ಮಗಳ ಪಿತ-ತಂದೆ ಆಗಿದ್ರು ಅನ್ನೋದನ್ನ ತಿಳಿಸಿ ಅಂತ ಎಲ್ಲ ಸದಸ್ಯರನ್ನೂ ಕೇಳ್ದೆ-ಆದ್ರೇನು? ಯಾರಿಂದ್ಲೂ ಉತ್ತರ ಬರ್ಲಿಲ್ಲ. ಹಾಗಾಗಿ ಆ ಮಹಾತ್ಮರ ಪ್ರತಿಮೆಯ ತೊಡಕನ್ನು ಬಿಡಿಸ್ಲಾಗ್ದೇ ಇರೋದ್ರಿಂದ ಅದೊಂದು ನಿಗೂಢ ವಸ್ತುವಾಗಿಯೇ ಉಳ್ಕೊಂಡಿದೆ".

"ಆ ತೊಡಕನ್ನ ಬಿಡಿಸ್ಬೇಕೂಂತ ಯಾಕೆ ಒದ್ದಾಡ್ತೀರಿ-ಇದ್ಹಾಗೆ ಇರ್ಲಿ ಬಿಡಿ!"

"ಯಾಕೇಂತಂದ್ರೆ ಚಿನ್ನ, ಆ ಸಂತನ ಸಂತತಿಯವ್ರು, ಯಾರಾದ್ರೂ ಈ ಭೂಮಿ ಮೇಲೆ ಬದುಕಿದ್ದಾರೆಯೆ ಅಂತ ತಿಳೀಬೇಕು ಅನ್ನೋ ಹಂಬಲ. ಅದ್ರಿಂದ್ಲೇ ಪುರಸಭೆಯ ಸಭಾಭವನದಲ್ಲಿರಿಸಿ ಸಾರ್ವಜನಿಕರಿಂದ ಮಾಹಿತಿ ಪಡೀಬೇಕೂಂತ ತೀರ್ಮಾನ ಮಾಡಿದ್ದೀನಿ, ಮುಂದೆ ಎಂದಾದ್ರೊಂದು ದಿನ ಆ ಸಂತನ ಸಂತತಿ ಯಾರು ಅಂತ ತಿಳಿದು ಬರಬೋದು!" ಎಂದು ಆಶಯವನ್ನು ವ್ಯಕ್ತಪಡಿಸಿದರು.

"ಹಾಗಾದ್ರೆ, ಈ ವಿಷಯದಲ್ಲಿ ನನ್ನದೊಂದು ಸಲಹೆ!" ಎಂದು ದನಿಗೂಡಿಸಿದ ಆಕೆ "ಮಹಾತ್ಮರ ವಿಷಯದಲ್ಲಿ ಮಾಹಿತಿ ನೀಡಿದವರಿಗೆ ೫೦೦೦ರೂ ಬಹುಮಾನ" ಅಂತ ಪ್ರಕಟಿಸಿರಿ, ಮಾಹಿತಿ ಕೊಡೋರು ಪುರಾವೆ ಸಹಿತ ಕೊಡ್ಬೇಕು ಅಂತ ತಿಳಿಸಿ; ಯಾರಿಗೆ ಗೊತ್ತು-ಆ ಸಂತನ ಸಂತತಿಯವರೇ ಮುಂದೆ ಬಂದ್ರೂ ಬರಬೋದು!" ಎಂದಳು.

"ಒಳ್ಳೆ ಸಲಹೆ ಚಿನ್ನ, ನಿಜಕ್ಕೂ ಒಳ್ಳೇ ಸಲಹೆ! ಅದನ್ನೂ ಪ್ರಕಟಿಸಿ ಫಲಿತಾಂಶ ಏನಾಗುತ್ತೆ ಅಂತ ನೋಡ್ತೀನಿ!" ಎಂದರು ಅಧ್ಯಕ್ಷರು. *(ಮುಂದುವರಿಯುವುದು...)*

* * *

ಅರ್ಧ ಕೆಲಸವನ್ನಷ್ಟೇ ಮಾಡಿದ್ದೇನೆ, ಉಳಿದದ್ದನ್ನು ಮಾಡುವರಾರು ?

(ಡಾ.ರಾಮಮನೋಹರ ಲೋಹಿಯಾ ವಿಚಾರಗಳು– ಡಿ.ಎಸ್.ನಾಗಭೂಷಣ)

ಶೋಷಣೆಯ ಸಾಧನಗಳು ಸಂಪತ್ತು ಮತ್ತು ಅಧಿಕಾರಗಳ ರೂಪದಲ್ಲಿ ಇರುತ್ತವೆಂದು ಭಾವಿಸಿದ್ದ ಲೋಹಿಯಾ, ಅವುಗಳನ್ನು ಪಳಗಿಸಿ ಅವುಗಳ ಶೋಷಣಾತ್ಮಕ ನೆಲೆಗಳನ್ನು ಇಲ್ಲವಾಗಿಸುವ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಸಾಧಿಸಬಹುದೆಂದು ನಂಬಿದ್ದರು. ಬಹುಶಃ ಈ ಹೊಳಹು ಅವರಿಗೆ ಸಿಕ್ಕಿದ್ದು ಗಾಂಧಿ ದರ್ಶನದಲ್ಲಿ. ರಾಜಕಾರಣವೆಂದರೆ ಒಳ್ಳೆಯದನ್ನು ಮಾಡುವುದು ಮತ್ತು ಕೆಟ್ಟದ್ದನ್ನು ತಡೆಯುವುದು ಎಂದು ನಂಬಿದ್ದ ಅವರು; ಒಳ್ಳೆಯದನ್ನು ಮಾಡಲು ವಿಕೇಂದ್ರೀಕರಣ ಮಾರ್ಗವನ್ನೂ, ಕೆಟ್ಟದ್ದನ್ನು ತಡೆಯಲು ಸತ್ಯಾಗ್ರಹವನ್ನು ತಮ್ಮ ಸಮಾಜವಾದಿ ರಾಜಕಾರಣಕ್ಕೆ ಆರಿಸಿಕೊಂಡರು. ಆಸ್ತಿ ಮತ್ತು ಅಧಿಕಾರಗಳನ್ನು ವಿಕೇಂದ್ರೀಕರಿಸುವ ಮೂಲಕ ಅವನ್ನು ಪಳಗಿಸುವುದೇ ಅವರ ಸಮಾಜವಾದಿ ರಾಜಕಾರಣದ ಮುಖ್ಯ ಉದ್ದೇಶವಾಗಿತ್ತು.

ಲೋಹಿಯಾ ಕೆಟ್ಟದ್ದನ್ನು ತಡೆಯಲು ಅಂದರೆ, ಅನ್ಯಾಯಗಳ ವಿರುದ್ಧ ಪ್ರತಿಭಟನೆ ನಡೆಸಲು ಆಯ್ದುಕೊಂಡದ್ದು ಗಾಂಧೀಜಿಯ ನಾಗರಿಕ ಅಸಹಕಾರ ಮಾರ್ಗವನ್ನು. ಜಗತ್ತಿನಲ್ಲಿ ಮನೆ ಮಾಡಿರುವ ಹಲವು ನೆಲೆಗಳ ಅನ್ಯಾಯ, ಅಸಮಾನತೆಗಳ ವಿರುದ್ಧ ಪ್ರತಿಭಟಿಸಿ, ಅವನ್ನು ನಿವಾರಿಸಲು ಪ್ರತಿ ಊರಿನಲ್ಲಿಯೂ ಒಂದು ನಾಗರಿಕ ಅಸಹಕಾರ ದಳವಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಇಲ್ಲದೇ ಹೋದರೆ, ಪರಿಸ್ಥಿತಿ ಕೈಮೀರಿ ಮನುಷ್ಯ ರಾಕ್ಷಸನಾಗುವ ಅಪಾಯವಿದೆ ಎಂದು ಅವರು ಭಾವಿಸಿದ್ದರು. ಈ ದೃಷ್ಟಿಯಿಂದಲೇ ಅವರು ಮಾರ್ಕ್ಸ್‌ವಾದಿಗಳ ವರ್ಗ ಹೋರಾಟದ ಕಲ್ಪನೆಯ ಸ್ಥೂಲತೆಯನ್ನು ಪ್ರಶ್ನಿಸಿದ್ದರು. ಮನುಷ್ಯ ಬದಲಾವಣೆಯ ಉಪಕರಣ ಮಾತ್ರವಲ್ಲ; ಗುರಿಯೂ ಆಗಿರುವುದರಿಂದ, ಹೋರಾಟದಲ್ಲಿ ಅವನ ಆತ್ಮ ಸುಳ್ಳು , ಕಪಟ, ಹಿಂಸೆಗಳಿಂದ ಕಲುಷಿತವಾಗದಂತೆ ನೋಡಿಕೊಳ್ಳಬೇಕೆಂದು ಅವರು ಭಾವಿಸಿದ್ದರು. ಹಾಗಾಗಿ ಗುರಿಯೇ ಮಾರ್ಗವಾಗಿಯೂ ಕೈ ಹಿಡಿದು ನಡೆಸುವ; ಅಂದರೆ, ಗುರಿಯತ್ತ ಇಡುವ ಪ್ರತಿ ಹೆಜ್ಜೆಯೂ ತಕ್ಷಣವೇ ಗುರಿಯ ಒಂದಿಷ್ಟಾದರೂ ಅನುಭವ ನೀಡುವಂತಹ ಗುರಿ–ಮಾರ್ಗಗಳ ಅಭಿನ್ನತೆಯನ್ನು ಅವರು ಸಮಾಜವಾದದ ಒಂದು ತತ್ವವಾಗಿ ನಿರೂಪಿಸಿದ್ದರು. ಇದು ಲೋಹಿಯಾ ಅವರ ಗುರಿ ಮತ್ತು ಮಾರ್ಗಗಳ ತಾತ್ಕ್ಷಣಿಕ ಸಿದ್ಧಾಂತ ಎಂದೇ ಹೆಸರಾಗಿದೆ.

ಹಾಗಾಗಿಯೇ, ನಾಳಿನ ಕನಸಿನ ಸುಖೀರಾಜ್ಯಕ್ಕಾಗಿ ಇಂದು ಏನು ಮಾಡಿದರೂ ಕ್ಷಮ್ಯ ಎಂಬ ನೀತಿ ನಿರಪೇಕ್ಷ ವರ್ಗ ಹೋರಾಟಕ್ಕೆ ಬದಲಾಗಿ, ಇಡೀ ವ್ಯವಸ್ಥೆಯನ್ನು ಮನುಷ್ಯ ಏಕಾಕಿಯಾಗಿ ಕೂಡ ತನ್ನ ಆತ್ಮಬಲದ ಮೂಲಕ ಎದುರಿಸಬಹುದೆಂಬ

ಗಾಂಧೀತತ್ವದ ಆಧಾರದ ನಾಗರಿಕ ಅಸಹಕಾರ ಮಾರ್ಗ ಲೋಹಿಯಾರನ್ನು ಆಕರ್ಷಿಸಿತ್ತು. ಆದರೆ ಸಮಾಜವಾದಿಯಾಗಿ ಅವರು ಮನುಷ್ಯನ ಈ ಆತ್ಮಬಲದಲ್ಲಿ ಸಿಟ್ಟನ್ನೂ ಸೇರಿಸಿಕೊಂಡಿದ್ದರು. ಅವರ ಪ್ರಕಾರ ಸಮಾಜವಾದಿಯೊಬ್ಬ ಗುರಿಯಾಗಿ ವಿಶ್ವಪ್ರೇಮದ ಪ್ರತೀಕ; ಮಾರ್ಗವಾಗಿ ಎಲ್ಲ ಶೋಷಣೆಯ ವಿರುದ್ಧ ಕ್ರಾಂತಿಕಾರಿ ಸಿಟ್ಟಿನ ಪ್ರತೀಕ. ಸಮಾಜವಾದಿ ಸತ್ಯಾಗ್ರಹಿಯ ಒಂದು ಕಣ್ಣಿನಲ್ಲಿ ಅನ್ಯಾಯಕ್ಕೊಳಗಾದವರ ಬಗ್ಗೆ ಕರುಣೆಯ ಕಣ್ಣೀರಿದ್ದರೆ, ಇನ್ನೊಂದು ಕಣ್ಣಿನಲ್ಲಿ ಅನ್ಯಾಯದ ವಿರುದ್ಧ ಕ್ರೋಧದ ಕಿಡಿ ಇರಬೇಕೆಂದು ಅವರು ಹೇಳುತ್ತಿದ್ದರು. ಹೀಗಾಗಿ ಸಮಾಜವಾದಿ ಹೋರಾಟಗಳು ಅಹಿಂಸಾತ್ಮಕವಾಗಿರುತ್ತಿದ್ದವಾದರೂ ಉಜ್ವಲವಾಗಿರುತ್ತಿದ್ದವು. ಈ ಹಿನ್ನೆಲೆಯಲ್ಲಿಯೇ ಅವರು, ನೆಹರೂ ಸರ್ಕಾರಿ ಗಾಂಧೀವಾದದ, ಮತ್ತು ವಿನೋಬಾ ಮಠೀಯ ಗಾಂಧೀವಾದದ ಪ್ರತೀಕಗಳಾದರೆ, ಸಮಾಜವಾದಿಗಳು ಬಂಡಾಯ ಗಾಂಧೀವಾದದ ಪ್ರತೀಕ ಎಂದು ಹೇಳುತ್ತಿದ್ದರು.

ಇನ್ನು ರಾಜಕಾರಣದಲ್ಲಿ ಒಳ್ಳೆಯದನ್ನು ಮಾಡಲು ಲೋಹಿಯಾ ಪ್ರತಿಪಾದಿಸಿದ ವಿಕೇಂದ್ರೀಕರಣದ ಪ್ರತೀಕವೇ ಚತುಸ್ತಂಭ ರಾಷ್ಟ್ರದ ಕಲ್ಪನೆ. ಗಾಂಧೀಜಿಯ ಗ್ರಾಮಸ್ವರಾಜ್ಯ ಕಲ್ಪನೆಯಿಂದ ಸ್ಫೂರ್ತಿ ಪಡೆದಂತೆ ತೋರುವ ಈ ತತ್ವ, ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು, ಅದೊಂದು ಅಸಾಧ್ಯ ಕಲ್ಪನೆ ಎಂಬ ಟೀಕೆಯಿಂದ ಪಾರು ಮಾಡಿ ಆಧುನಿಕ ಕಾಲಕ್ಕೆ ಪರಿಷ್ಕರಿಸಿದ ಮಾದರಿಯಂತಿದೆ. ರಾಜಕೀಯ ಅಧಿಕಾರವನ್ನು ಗ್ರಾಮ, ಮಂಡಲ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಹಂಚಿದ ವಿಕೇಂದ್ರೀಕೃತ ರಾಷ್ಟ್ರದ ಕಲ್ಪನೆ ಅದು. ಇದರಿಂದ ಎಲ್ಲ ಜಾತಿ-ಜನವರ್ಗಗಳಲ್ಲೂ ನಾಯಕತ್ವ ಬೆಳೆದು ಅಧಿಕಾರದಲ್ಲಿ ಪಾಲು ಪಡೆಯುವಂತಾಗಿ, ಅಧಿಕಾರವೆಂಬುದು ಶೋಷಣೆಯ ಸಾಧನವಾಗಿ ದುರ್ಬಲಗೊಳ್ಳುವುದು ಎಂಬುದು ಅವರ ಚಿಂತನೆಯಾಗಿತ್ತು. ಹಾಗೆಯೇ ವಿವಿಧ ಮಟ್ಟದ ಸ್ಥಳೀಯತೆಯ ಅಂಶಗಳು, ಆಶೋತ್ತರಗಳೂ-ಭಾಷೆ, ಸಂಪ್ರದಾಯ, ನೈಸರ್ಗಿಕ ಸಂಪನ್ಮೂಲ, ಉತ್ಪಾದನಾ ಕೌಶಲ್ಯ ಇತ್ಯಾದಿಗಳ ರಕ್ಷಣೆ-ತಣಿಯುವಂತಾಗಿ ಆ ಮೂಲಕ ರಾಷ್ಟ್ರದ ಬಹುಸಂಸ್ಕೃತಿಯ ಸ್ವರೂಪದ ಸಂರಕ್ಷಣೆಯೂ ಆಗುವುದು ಎಂಬುದೂ ಇದರ ಹಿಂದಿದ್ದ ಇನ್ನೊಂದು ಪ್ರೇರಣೆಯಾಗಿತ್ತು. ಇದಕ್ಕೆ ಪೂರಕವಾಗಿ ಪ್ರತಿ ರಾಜಕೀಯ ಪಕ್ಷವೂ ತನ್ನ ಪದಾಧಿಕಾರಗಳಲ್ಲಿ ಶೇ.೬೦ರಷ್ಟು ಸ್ಥಾನಗಳನ್ನಾದರೂ ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತ ಕೋಮಿನವರಿಗೆ ಮೀಸಲಿಡಬೇಕೆಂದು ಅವರು ಆಗ್ರಹಿಸಿದ್ದರು. ಜೊತೆಗೆತಮ್ಮ ಸಮಾಜವಾದಿ ಪಕ್ಷದಲ್ಲಿ ಅವರು ಈ ನೀತಿಯನ್ನು ಅಳವಡಿಸಿಕೊಂಡಿದ್ದರು.

ಈ ಚತುಸ್ತಂಭ ರಾಷ್ಟ್ರದ ಕಲ್ಪನೆಯ ವಿಸ್ತರಣೆಯಾಗಿ ಲೋಹಿಯಾ ವಿಶ್ವಸರ್ಕಾರದ ಪ್ರಸ್ತಾವನೆಯನ್ನು ಮುಂದಿಟ್ಟಿದ್ದರು. ತಮ್ಮ ಕನಸಿನ ವಿಶ್ವನಾಗರಿಕತೆಯ ಸಾಧ್ಯತೆಗಳು ವಿಶ್ವಸಂಸತ್ತಿನ ಮೂಲಕ ಸಾಕಾರವಾಗಬೇಕೆಂಬುದು ಅವರ ಆಶಯವಾಗಿತ್ತು. ಈ ಸಂಬಂಧ ೧೯೫೬ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ವಿಶ್ವಸರ್ಕಾರದ ಸಾಧ್ಯತೆ-ಬಾಧ್ಯತೆಗಳನ್ನು ಕುರಿತ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಲ್ಲಿ ಅವರು ಹೊಸ ವಿಶ್ವನಾಗರಿಕತೆಯೆಡೆಗಿನ ಕಾರ್ಯಕ್ರಮಸೂಚಿಯಾಗಿ ವಿಶೇಷ

ಪ್ರಾಶಸ್ತ್ಯನೀತಿಯ ಮೂಲಕ ಜಾತಿ-ಜನಾಂಗ-ಲಿಂಗಭೇದಗಳ ನಿರ್ಮೂಲನೆ, ರಾಷ್ಟ್ರಗಳ ಆಂತರಿಕ ಮತ್ತು ಬಾಹ್ಯ ಸಮಾನತೆ, ಸರ್ಕಾರಿ ಸಾಮೂಹಿಕತೆಯ ಅತಿಗಳ ವಿರುದ್ಧ ನಾಗರಿಕ ಅಸಹಕಾರ ಸತ್ಯಾಗ್ರಹದ ಬಳಕೆ ಮತ್ತು ಸೌಂದರ್ಯ ಮೀಮಾಂಸೆಯಲ್ಲಿ ಕ್ರಾಂತಿ ಎಂಬ 'ಸಪ್ತ ಕ್ರಾಂತಿ'ಯ ಕಲ್ಪನೆಯನ್ನು ಮುಂದಿಟ್ಟರು. ಅಷ್ಟೇ ಅಲ್ಲ, ವಿಶ್ವ ಸರ್ಕಾರದ ಆದರ್ಶವನ್ನು ಸಾಂಕೇತಿಕವಾಗಿ ಎತ್ತಿ ಹಿಡಿಯಲೋ ಎಂಬಂತೆ ೧೯೫೨ರಲ್ಲಿ ಬರ್ಮಾ (ಈಗಿನ ಮಯನ್ಮಾರ್)ದಲ್ಲಿ ನಡೆದ ಏಷ್ಯಾ ಸಮಾಜವಾದಿ ಸಿದ್ಧತಾ ಸಮ್ಮೇಳನದಲ್ಲಿ ಭಾಗವಹಿಸಲು ಕಲ್ಕತ್ತಾದಿಂದ ರಂಗೂನ್‌ಗೆ ಪಾಸ್‌ಪೋರ್ಟ್ ಇಲ್ಲದೇ ಪ್ರಯಾಣ ಮಾಡಿದರು! ಅಲ್ಲದೆ ಇಂತಹ ವಿಶ್ವಸರ್ಕಾರದ ಪ್ರಜೆಯ ಹಕ್ಕು ಮತ್ತು ಕರ್ತವ್ಯಗಳನ್ನು ಎತ್ತಿ ಹಿಡಿಯಲೆಂಬಂತೆ; ಅವರು ಅಮೆರಿಕಾದ ಸಮಾಜವಾದಿಗಳ ಆಹ್ವಾನದ ಮೇರೆಗೆ ೧೯೬೪ರಲ್ಲಿ ಆ ದೇಶಕ್ಕೆ ಭೇಟಿ ನೀಡಿದ್ದಾಗ, ಜಾಕ್ಸನ್ ಎಂಬ ನಗರದ ಹೋಟೆಲ್‌ವೊಂದರಲ್ಲಿ ವರ್ಣಭೇದ ಕಂಡು ಪ್ರತಿಭಟನೆ ನಡೆಸಿ ದಸ್ತಗಿರಿಗೂ ಒಳಗಾದರು. ಅದಕ್ಕಾಗಿ ಅಮೆರಿಕಾದ ಸರ್ಕಾರ ಕ್ಷಮೆ ಕೇಳುವಂತೆಯೂ ಮಾಡಿದರು!

ಹೀಗೆ ತನ್ನ ವೈಚಾರಿಕತೆ ಮತ್ತು ಹೋರಾಟಗಳೆರಡರ ಮೂಲಕವೂ ಸ್ವಾತಂತ್ರ್ಯ ಹೋರಾಟಕ್ಕೆ ತನ್ನದೇ ರೀತಿಯಲ್ಲಿ ಕೊಡುಗೆ ಸಲ್ಲಿಸಿ, ತನ್ನ ಬದುಕನ್ನೇ ರಾಷ್ಟ್ರದ ಉನ್ನತಿ, ಅನ್ಯಾಯಕ್ಕೊಳಗಾದವರ ಪರವಾದ ಹೋರಾಟಕ್ಕೆ ಮುಡಿಪಾಗಿಟ್ಟ ಲೋಹಿಯಾರನ್ನು ನೆಹರೂ ಸೇರಿದಂತೆ ಸರ್ಕಾರದಲ್ಲಿದ್ದ ಅವರ ಗೆಳೆಯರು ನಡೆಸಿಕೊಂಡ ರೀತಿ ಅನಾಗರಿಕವೂ ನಾಚಿಕೆಗೇಡಿನದೂ ಆಗಿತ್ತು. ಲೋಹಿಯಾ ಅವರ ಮಾತುಗಳಲ್ಲೇ ಹೇಳುವುದಾದರೆ, ಬ್ರಿಟಿಷ್ ಸರ್ಕಾರಕ್ಕಿಂತ ದೇಶೀ ಸರ್ಕಾರವೇ ಅಸಂಸ್ಕೃತವೂ, ಕ್ರೂರವೂ ಆಗಿತ್ತು. ಅವರು ತಮ್ಮ ಪ್ರತಿಭಟನೆಗಳ ಸಮಯದಲ್ಲಿ ಹಾಗೂ ಸೆರೆಮನೆವಾಸಗಳ ಸಂದರ್ಭಗಳಲ್ಲಿ ಎದುರಿಸಿದ ರಾಜಕೀಯ ಮತ್ತು ದೈಹಿಕ ದೌರ್ಜನ್ಯ ಅವರನ್ನು ಘಾಸಿಗೊಳಿಸಿತ್ತು ಮತ್ತು ಕಹಿ ಮನಸ್ಸಿನವರನ್ನಾಗಿ ಮಾಡಿತ್ತು. ಸ್ವಾತಂತ್ರ್ಯೋತ್ತರ ಭಾರತದ ಎಲ್ಲ ಗೊಂದಲಮಯ ರಾಜಕಾರಣಕ್ಕೆ ನೆಹರೂರನ್ನು ಪ್ರತೀಕವಾಗಿಸಿದ್ದ ಲೋಹಿಯಾ, ತಮ್ಮ ವ್ಯಾವಹಾರಿಕ ರಾಜಕಾರಣಕ್ಕೆ ಅವರನ್ನೇ ಕೇಂದ್ರವಾಗಿಸಿಕೊಂಡು ಕಟುವಾದ ದಾಳಿ ನಡೆಸಿದರು. ಇದರ ಫಲವಾಗಿ ಮಧ್ಯಮ ವರ್ಗಗಳಿಂದ ಮತ್ತು ಮಾಧ್ಯಮಗಳಿಂದ 'ಅರೆಹುಚ್ಚ', 'ತಲೆಹೋಕ', 'ಘಾತುಕ', 'ವಿನಾಶಕಾರಿ' ಇತ್ಯಾದಿ ಬಿರುದು ಬಾವಲಿಗಳನ್ನು ಪಡೆದಿದ್ದ ಅವರು, ತಮ್ಮ ಸಂಸದೀಯ ಕೌಶಲ್ಯವನ್ನು ಮೆರೆಯಲು ಸಾಧ್ಯವಾದದ್ದು. ಆ ಹೊತ್ತಿಗೆ ಅವರು ಕಾಂಗ್ರೆಸ್ಸೇತರವಾದಿ ರಾಜಕಾರಣದ ಮೂಲಕ ನೆಹರೂ ರಾಜಕಾರಣದ ಸೊಂಟ ಮುರಿದಿದ್ದರು. ಅಷ್ಟೇ ಅಲ್ಲ, ನೆಹರೂ ಕೂಡಾ ಚೀನಾ ಆಕ್ರಮಣದ ನಂತರ ತಮ್ಮ ರಾಜಕೀಯ ಮಹತ್ವಾಕಾಂಕ್ಷೆಯನ್ನೆಲ್ಲ ಕಳೆದುಕೊಂಡು ಸೋತವರಂತೆ ಹತಾಶರಾಗಿ ಅಸು ನೀಗಿದ್ದರು.

೧೯೬೪ರಲ್ಲಷ್ಟೇ ಉಪಚುನಾವಣೆಯೊಂದರ ಮೂಲಕ ಲೋಕಸಭೆಯನ್ನು ಪ್ರವೇಶಿಸಿದ ಲೋಹಿಯಾ, ಅದನ್ನೊಂದು ಜನತಾವೇದಿಕೆಯನ್ನಾಗಿ ಪರಿವರ್ತಿಸಿದರು. ಅಲ್ಲಿ 'ಅರ್ಧ ಕುದುರೆ-ಅರ್ಧ ಮನುಷ್ಯ'ರಂತಿದ್ದ ಮಾನವ ರಿಕ್ಷಾವಾಲಾಗಳ

ಬದುಕಿನಲ್ಲಿನ ಅಮಾನುಷತೆಯೂ, ಬೆಳೆಗಳಿಗೆ ಬೆಲೆ ಸಿಗದೆ ಬೀದಿಗೆ ಬಿದ್ದಿದ್ದ ಬಡ ರೈತರ ಆರ್ತನಾದವೂ, ಬೆಳಗಿನ ಶೌಚ ಕರ್ಮಗಳಿಗಾಗಿ ಅಸಹಾಯಕತೆಯಿಂದ ಅಲೆದಾಡುವ ಗ್ರಾಮಾಂತರ ಮಹಿಳೆಯರ ಅಂತರಂಗದ ಬೇಗುದಿಗಳೂ, ಚಳಿ ರಾತ್ರಿಗಳಲ್ಲಿ ಬೀದಿಗಳಲ್ಲಿ ಮಲಗಬೇಕಾದ ಅನಾಥರ ಗೋಳುಗಳೂ, ಸಂವೈಧಾನಿಕ ಪಂಡಿತ ಚರ್ಚೆಗಳಷ್ಟೇ ಮಹತ್ವ ಪಡೆದು ಪ್ರತಿನಿಧಿಸಿದವು. ತಮ್ಮ ಜನಬದ್ಧತೆ ಮತ್ತು ಬೌದ್ಧಿಕ ಪ್ರಖರತೆಗಳಿಂದ ಅವರು ಸಂಸದೀಯ ಚರ್ಚೆಯನ್ನು ಹೊಸ ಎತ್ತರಗಳಿಗೆ ಮುಟ್ಟಿಸಿದರು. ಪ್ರಧಾನಿ ಇಂದಿರಾಗಾಂಧಿ ವಿದೇಶಿ ಅತಿಥಿಗಳಿಂದ ಪಡೆದ ವಜ್ರದ ನೆಕ್ಲೇಸ್ ಮತ್ತು ಮಿಂಕ್ ಕೋಟ್ ಪ್ರಕರಣ, ಸ್ಟಾಲಿನ್‌ನ ಪುತ್ರಿ ಸ್ವೆಟ್ಲಾನಾಳಿಗೆ ರಾಜಕೀಯ ಆಶ್ರಯ ನೀಡಲಾಗದ ಭಾರತ ಸರ್ಕಾರದ ರಾಜಕೀಯ ಹೇಡಿತನದ ಪ್ರಕರಣ ಹಾಗೂ ವಿಶ್ವಸಂಸ್ಥೆ ಪ್ರಕಟಿಸಿದ್ದ '೫೦೦೦ ವರ್ಷಗಳ ಪಾಕಿಸ್ತಾನ' ಪುಸ್ತಕ ಮುಂತಾದ ಪ್ರಕರಣಗಳಲ್ಲಿ ಲೋಹಿಯಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವಲ್ಲಿ ಪ್ರದರ್ಶಿಸಿದ ರಾಜಕೀಯ ಪ್ರತಿಭೆಯನ್ನು ಗಮನಿಸಿ, ಅವರನ್ನು ತೆಗಳುತ್ತಿದ್ದ ಪತ್ರಿಕೆಗಳೇ ಅವರಿಗೆ 'ಶ್ರೀಮಾನ್ ವಿರೋಧ ಪಕ್ಷ' ಎಂದು ಹೆಸರಿಸಿದವು. ಇದೆಲ್ಲದರ ಫಲ ೧೯೬೭ರ ಚುನಾವಣೆಗಳಲ್ಲಿ ಕಂಡು ಬಂತು. ಆ ಚುನಾವಣೆಗಳಲ್ಲಿ ಕಾಂಗ್ರೆಸ್ ಮೊದಲ ಬಾರಿಗೆ ಐದು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತ್ತು. ಲೋಕಸಭೆಯಲ್ಲಿ ಅದರ ಬಹುಮತ ಕ್ಷೀಣಸ್ಥಿತಿ ತಲುಪಿತ್ತು.

ಆದರೆ ಇದೆಲ್ಲದರ ಫಲವನ್ನು ತಮ್ಮ ಸಮಾಜವಾದಿ ರಾಜಕಾರಣಕ್ಕೆ ಬಳಸಿಕೊಳ್ಳುವ ಅದೃಷ್ಟ ಲೋಹಿಯಾರಿಗೆ ಇರಲಿಲ್ಲ. ಪ್ರತಿಭಟನೆ ಮತ್ತು ಹೋರಾಟಗಳಿಂದ ತುಂಬಿದ್ದ ವಿಶ್ರಾಂತಿ ಇಲ್ಲದ ದೀರ್ಘ ರಾಜಕಿಯ ಬದುಕಿನಿಂದಾಗಿ ಅವರ ಜೀವ ದಣಿದಿತ್ತು. ೧೯೬೭ರ ಚುನಾವಣೆಗಳ ತದನಂತರದಲ್ಲೇ ಅವರ ಆರೋಗ್ಯ ಕೆಟ್ಟು ಜನಸಾಮಾನ್ಯರ ಆಸ್ಪತ್ರೆಯೇ ಬೇಕೆಂದು ಹಠ ಮಾಡಿ ಅವರು ಸರ್ಕಾರಿ ಆಸ್ಪತ್ರೆ ಸೇರಿದರು. ಪ್ರೋಸ್ಟೇಟ್ ಗ್ರಂಥಿ ಊದಿಕೊಂಡಿದೆ, ಅದಕ್ಕೆ ಕ್ಯಾನ್ಸರ್ ತಗುಲಿದೆ, ಅದಕ್ಕೆಲ್ಲ ಅತ್ಯುತ್ತಮ ಚಿಕಿತ್ಸೆ ನೀಡಲಾಗುತ್ತಿದೆ ಎಂಬ ವರದಿಗಳ ನಡುವೆಯೂ ಅಕ್ಟೋಬರ್ ೧೨ರಂದು ಅವರು ಕೊನೆಯುಸಿರೆಳೆದರು. ಕೊನೆಯುಸಿರೆಳೆಯುವ ಮುನ್ನ ಅರೆಪ್ರಜ್ಞಾವಸ್ಥೆಯಲ್ಲಿ ಅವರು ತಮಗೆ ತಾವೇ ಕೇಳಿಕೊಂಡ ಪ್ರಶ್ನೆ; 'ನಾನು ನನ್ನ ಅರ್ಧ ಕೆಲಸವನ್ನಷ್ಟೇ ಮಾಡಿದ್ದೇನೆ..... ಉಳಿದಿದ್ದನ್ನು ಮಾಡುವರಾರು? ಈ ದೇಶದ ಬಡವರ ಗೋಳನ್ನು ಕೇಳುವರಾರು?'

(ಸಾಭಾರ : ಲೋಹಿಯಾ ಕೈಪಿಡಿ–ಡಿ.ಎಸ್.ನಾಗಭೂಷಣ)

****

ಜನಪದ ಧ್ವನಿ

ವಿವಾಹ ಪೂರ್ವ ಸ್ತ್ರೀ–ಪುರುಷ ಸಂಬಂಧ ಅನೈತಿಕ

ವಿಷಯ ಸನ್ನಿಧಿಗಿಂತ ಮಸಣ ಸನ್ನಿಧಿ ಲೇಸು ।
ವಿಷಯದೂಟಕಿಂತು ಪೋಷಿತವೆ ಲೇಸಲ್ತೆ? ॥
ತೃಷೆ ಕನಲೆ, ಬೇವ ಬಿಸಿ ಬಾಣಲಿಗೆ ಬಿದ್ದ ಹುಳು ।
ಶಿಶು ಪಿಶಾಚಿಯ ಕೈಗೆ – ಮಂಕುತಿಮ್ಮ ॥

– ಡಿ.ವಿ.ಜಿ

ನಮ್ಮಲ್ಲಿ ಕೆಲವರು ಯಾವುದೇ ಅನುಚಿತ ವರ್ತನೆಗೆ ರಾಮಾಯಣ ಮಹಾಭಾರತದ ಪಾತ್ರಗಳನ್ನು ತಮ್ಮ ಮೂಗಿನ ನೇರಕ್ಕೆ ಬಳಸಿಕೊಂಡು ವಾದ(ವಿತಂಡ) ಮಾಡುವುದುಂಟು. ವಿವಾಹ ಪೂರ್ವ ಸ್ತ್ರೀ–ಪುರುಷ ಸಂಬಂಧಕ್ಕೂ ಮಹಾಭಾರತದ ಕುಂತಿಯು ಕರ್ಣನನ್ನು ಪಡೆದ ರೀತಿಯನ್ನು ಉದಾಹರಿಸುತ್ತಾರೆ.

ಕುಂತಿ ವಿವಾಹ ಪೂರ್ವದಲ್ಲಿಯೇ (ಸೂರ್ಯಮಂತ್ರದಿಂದ) ಕರ್ಣನನ್ನು ಪಡೆದುದಕ್ಕೆ ಬಾಲಸೂರ್ಯನಂತೆ ಕಂಗೊಳಿಸುತ್ತಿದ್ದ ಮಗುವನ್ನು ಗಂಗಾನದಿಯಲ್ಲಿ ತೇಲಿ ಬಿಡಬೇಕಾಯಿತು. ಯಾವ ತಪ್ಪೂ ಮಾಡದ ಕರ್ಣ ಕಾನೀನ, ದೂತಜ ಎಂದು ಅನ್ನಿಸಿಕೊಳ್ಳಬೇಕಾಯಿತು. ಪರಶುರಾಮರ ಬಳಿ ಸುಳ್ಳು ಹೇಳಿ ವಿದ್ಯೆ ಕಲಿತು ಕೊನೆಯಲ್ಲಿ ಶಾಪಕ್ಕೆ ಗುರಿಯಾಗಬೇಕಾಯಿತು. ಇದೇ ರೀತಿ ತನ್ನ ಬದುಕಿನ ಉದ್ದಕ್ಕೂ ಕಷ್ಟಗಳನ್ನು ಅನುಭವಿಸುತ್ತಾ ಮಹಾಭಾರತದ ಯುದ್ಧಕ್ಕೆ ಮೊದಲು ಪಟ್ಟ ಕಟ್ಟುವ ಸಂದರ್ಭದಲ್ಲಿ ಭೀಷ್ಮಾಚಾರ್ಯರಿಂದ 'ಜಾತಿನಿಂದನೆ'ಗೆ ಒಳಗಾಗಬೇಕಾಯಿತು.

ಇದೇ ರೀತಿ ಇಂದೂ ಸಹ ವಿವಾಹ ಪೂರ್ವ ಸಂಬಂಧಗಳಲ್ಲಿ ತಮ್ಮನ್ನು ತಾವೆ ತೊಡಗಿಸಿಕೊಂಡ ಯುವಕ–ಯುವತಿಯರು "Friction of skin is no sin" ಎಂದು ಕೊಂಡು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿ ತಾವೂ ಹಾಳಾಗುತ್ತಿರುವುದಲ್ಲದೆ ತಮ್ಮನ್ನು ಹೆತ್ತವರ ಆಸೆ ಆಕಾಂಕ್ಷೆಗಳನ್ನೂ ಭಗ್ನಗೊಳಿಸುತ್ತಿದ್ದಾರೆ. ಇದಕ್ಕೆ ಶಿವಮೊಗ್ಗದಲ್ಲಿ ಇತ್ತೀಚಿಗೆ ಮಂತ್ರಿಯೊಬ್ಬರಿಂದ ಅತ್ಯಾಚಾರಕ್ಕೊಳಗಾದೆ ಎಂದು ಹೇಳಿಕೊಳ್ಳುತ್ತಿರುವ ಚಂದ್ರಾವತಿಯವರ ಮಾತಾ–ಪಿತೃಗಳು ದೂರದರ್ಶನದಲ್ಲಿ ಆಡಿದ ಮಾತುಗಳೇ ಸಾಕ್ಷಿ.

– ಎಂ.ಜಿ.ಶಿವರಾಂ, ಬೆಂಗಳೂರು

* * *

ಈ ವಿಷಯ ಸಭ್ಯ ಸಮಾಜದಲ್ಲಿ ಎತ್ತುವಂಥದೇ ಅಲ್ಲ. ಅದರಲ್ಲೂ ಪ್ರಪಂಚದ ಶ್ರೇಷ್ಠ ಮತಧರ್ಮದ ಓರ್ವ ಮಹಿಳೆ ಈ ವಿಷಯದಲ್ಲಿ ಕೊಟ್ಟ ಹೇಳಿಕೆ ಕೇಳಿದಾಗಲೇ ಮನ ರೋಸಿ ಹೋಗಿತ್ತು. ಆನಂತರ ಉಚ್ಚ ನ್ಯಾಯಾಲಯದ ತೀರ್ಪನ್ನೋದಿ ತಲೆ ತಗ್ಗಿಸುವಂತಾಯಿತು.

– ಶಾರದಾ ಜಡೆ, ಸಾಂಗಲಿ

ಗಾಂಧೀಗಿರಿ

ಇತ್ತೀಚೆಗೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿಗಳ ಚುನಾವಣೆ ಮುಗಿದಿದೆ. ಈ ಚುನಾವಣೆಯಲ್ಲಿ ಗೆಲ್ಲಲು ಬಹಳಷ್ಟು ಸದಸ್ಯರು ಹಣ ಹಂಚಿದ್ದಾರೆ, ಮದ್ಯ ಕುಡಿಸಿದ್ದಾರೆ, ಮಾಂಸ ತಿನ್ನಿಸಿದ್ದಾರೆ. ಹೀಗೆ ತಮ್ಮ ಶಕ್ತಿಗೂ ಮೀರಿ ಖರ್ಚು ಮಾಡಿ ಸಾಲದ ಮಡುವಿನಲ್ಲಿ ಸಿಕ್ಕಿಕೊಂಡಿದ್ದಾರೆ. ಜಗತ್ತಿನ ಎಲ್ಲ ನಿಯಮಗಳಿಗೂ ಅಪವಾದ ಇರುವಂತೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿಯೂ ಕೂಡ ಓರ್ವ ಸದಸ್ಯ ಅಪವಾದಾತ್ಮಕವಾಗಿ ಆಯ್ಕೆಯಾದ ಸುದ್ದಿ ಬಂದಿದೆ.

ವಿಶೇಷ ರೀತಿಯಲ್ಲಿ ಗೆದ್ದು ಬಂದ ಸದಸ್ಯ ಗಂಗಾಧರ್. ಇವರು ಸ್ಪರ್ಧಿಸಿದ್ದು ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಪಂಚಾಯ್ತಿ ವ್ಯಾಪ್ತಿಯ ಹರಳಹಳ್ಳಿ ಗ್ರಾಮ. ಗಂಗಾಧರ್ ಸ್ಪರ್ಧಿಸಿದ್ದು ಮೀಸಲು ಕ್ಷೇತ್ರದಿಂದ. ಅವರು ಎಲ್ಲರಂತೆ ಹಣ ಖರ್ಚು ಮಾಡಲಿಲ್ಲ, ಮದ್ಯ, ಮಾಂಸ ಸೇವನೆ ಮಾಡಿಸಲಿಲ್ಲ. ಬದಲಿಗೆ ಅವರು ಗ್ರಾಮದಲ್ಲಿದ್ದ ಅಸ್ವಚ್ಛತೆಯನ್ನೇ ಒಂದು ಪ್ರಚಾರ ಅಸ್ತ್ರವನ್ನಾಗಿ ಮಾಡಿಕೊಂಡರು. ಅವರು ಮಾಡಿದ್ದು ಇಷ್ಟೇ...ನಾಮಪತ್ರ ಸಲ್ಲಿಸಿದ ದಿನದಿಂದ ಗ್ರಾಮದ ಬೀದಿಯ ಕಸಗುಡಿಸಿದರು.ರಸ್ತೆ ಬದಿಯ ಪೊದೆಗಳನ್ನು ತೆಗೆದು ಹಾಕಿದರು. ತಮ್ಮ ಸ್ವಂತ ಖರ್ಚಿನಿಂದ ಬೀದಿ ದೀಪಗಳು ಬೆಳಗುವಂತೆ ಮಾಡಿದರು. ವಿದ್ಯುತ್ ಕಂಬಗಳಿಗೆ ಸ್ವಂತ ಖರ್ಚಿನಲ್ಲಿ ದೀಪ ಅಳವಡಿಸಿದರು. ಅವರ ಕೆಲಸದಲ್ಲಿ ಅವರ ಮಿತ್ರರು ಜೊತೆಗೂಡಿದರು. ಗ್ರಾಮದ ಜನತೆ ಗಂಗಾಧರ್‌ರವರ ಗ್ರಾಮ ಪ್ರೀತಿಯನ್ನು ಕೊಂಡಾಡಿತು. ಗ್ರಾಮ ಸೇವೆಯನ್ನು ಮೆಚ್ಚಿತು. ಅದಕ್ಕಾಗಿ ಮತದಾರರು ನಿರ್ವಂಚನೆಯಿಂದ ಗಂಗಾಧರ್‌ರವರಿಗೆ ಮತ ಹಾಕಿದರು. ಗಂಗಾಧರ್ ಗೆದ್ದು ಬಂದರು. ಗಾಂಧೀಜಿಯವರ ಈ ನಾಡಿನಲ್ಲಿ ಸೇವೆಗೆ ತುಂಬ ಬೆಲೆ ಇದೆ ಎಂದು ತೋರಿಸಿದರು.

ಪುಸ್ತಕ ಪರಿಚಯ

ಪುಸ್ತಕದ ಹೆಸರು : **ಮುಗಿಯದ ರೀಲು**
ಸಂಪಾದಕರು : ಶಿವರಾಂ ಪೈಲೂರು
ಪ್ರಕಾಶಕರು : ಗುಡಿ ಬೈಲು ಬಳಗ, ೧೯೯, ೧ನೇ ಮುಖ್ಯರಸ್ತೆ,
೪ನೇ ಅಡ್ಡ ರಸ್ತೆ, ನಾರಾಯಣಪುರ ಧಾರವಾಡ-೫೮೦೦೦೮
ಬೆಲೆ : : ಪುಟಗಳು : ೮೭+೧=೮೮

ಈ ಪುಸ್ತಕ ಗುಂಡಿ ಬೈಲು ಶ್ರೀನಿವಾಸ್‌ರವರ ಬಗ್ಗೆ ಇದೆ. ಶ್ರೀನಿವಾಸ್‌ರವರು ನಿವೃತ್ತ ಸರ್ಕಾರಿ ನೌಕರ. ಇವರ ಇಲಾಖೆ ಕ್ಷೇತ್ರ ಪ್ರಚಾರ ನಿರ್ದೇಶನಾಲಯ ಇವರ ಕೆಲಸ ಸರ್ಕಾರದ ಕಾರ್ಯ ಸಾಧನೆಯ ಮತ್ತು ಯೋಜನೆಗಳಿಗೆ ಸಂಬಂಧಿಸಿದ

೩೨ ನೇ ಪುಟ ನೋಡಿ...

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕರುಣಾಗೃಹ ವಿದ್ಯಾರ್ಥಿನಿಯಾಗಿದ್ದ ಸುಮ ಈಗ ಸಂಸಾರಿಯಾಗಿದ್ದಾಳೆ. ಅವಳು ತನ್ನ ಅಣ್ಣ ಅತ್ತಿಗೆ ತಾಯಿ ಮತ್ತು ಮಗಳ ಜೊತೆ ಟ್ರಸ್ಟಿಗೆ ಭೇಟಿ ಕೊಟ್ಟಳು. ಮತ್ತು ತಾನು ವಿದ್ಯಾರ್ಥಿನಿಯಾಗಿದ್ದಾಗಿನ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಂಡಳು.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನ ಭಾರತಿಯಲ್ಲಿಯ ಗಾಂಧೀ ಭವನದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಭೇಟಿಕೊಟ್ಟರು. ತಂಡದ ನಾಯಕಿಯಾಗಿ ಪದ್ಮ ಬಂದಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸುಮಾರು ಇಪ್ಪತ್ತು ಜನ ಕಾರ್ಯಕರ್ತರು ಹೊಸಜೀವನ ದಾರಿ ಕೇಂದ್ರದಲ್ಲಿ ಎರಡು ದಿನಗಳ ಶಿಬಿರ ನಡೆಸಿದರು.ಈ ಶಿಬಿರದಲ್ಲಿ ಶ್ರೀಜಯದೇವ್, ಡಾ.ಸಂಜೀವ್ ಕುಲಕರ್ಣಿ, ಮುಂತಾದವರಲ್ಲದೆ ಪ್ರೇಮ್‌ಜಿ ಫೌಂಡೇಷನ್ನಿನ ಶಿಕ್ಷಣ ಕಾರ್ಯಕರ್ತರು ಸಹ ಭಾಗವಹಿಸಿದ್ದರು. ಶಿಕ್ಷಣತಜ್ಞ ಶ್ರೀ ಗಣನಾಥ್‌ರವರು ಈ ಶಿಬಿರದ ಮಾರ್ಗದರ್ಶಕರಾಗಿದ್ದರು.

ಕರುಣಾಗೃಹದ ಇನ್ನೊಬ್ಬ ಹಳೆಯ ವಿದ್ಯಾರ್ಥಿ ಕೃಷ್ಣಮೂರ್ತಿ ಟ್ರಸ್ಟಿಗೆ ಭೇಟಿಕೊಟ್ಟನು. ಇತನು ಈಗ ರೈಲ್ವೆ ಇಲಾಖೆಯಲ್ಲಿ ಗುಮಾಸ್ತನಾಗಿ ಕೆಲಸಮಾಡುತ್ತಿದ್ದಾನೆ.

ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಯುತ್ತಿರುವ 'ನೆನೆ ಬನ' ಎಂಬ ಸಸ್ಯ ಸಂರಕ್ಷಣಾ ಕಾರ್ಯಕ್ರಮದ ಬಗ್ಗೆ ಮೈಸೂರು ಆಕಾಶವಾಣಿಯಲ್ಲಿ ಪರಿಚಯಾತ್ಮಕ ವಿಷಯ ಪ್ರಚಾರವಾಯಿತು.

ಟ್ರಸ್ಟಿನ ಅಭಿಮಾನಿ ಸತ್ಯಪ್ರಕಾಶ್ ವಾರಾಣಸಿಯವರು ಟ್ರಸ್ಟಿಗೆ ಭೇಟಿಕೊಟ್ಟು ಸಹಾಯ ಮಾಡಿದರು.

ಪ್ರತಿ ವರ್ಷದಂತೆ ಈ ಸಲವು 'ದೊಡ್ಡ ಮರದಾ ನೆರಳಿನಲಿ' ಎಂಬ ಹೆಸರಿನಲ್ಲಿ ಮಕ್ಕಳಿಗೆ ೧೫ ದಿನಗಳ ಶಿಬಿರದಲ್ಲಿ ಮೇಲುಕೋಟೆಯ ಮಕ್ಕಳಲ್ಲದೆ ಪಕ್ಕದ ಗ್ರಾಮಗಳಾದ ಪಾರ್ವಟೆ ಹೊಸಳ್ಳಿ, ರಾಂಪುರ, ಕಾಡೇನಹಳ್ಳಿ ಹಾಗೂ ಬೆಂಗಳೂರು ಮತ್ತು ಮೈಸೂರಿನ ಮಕ್ಕಳು ಸಹ ಭಾಗವಹಿಸಿದ್ದರು. ಮಕ್ಕಳ ಸಂಖ್ಯೆ ಒಟ್ಟು ಅರವತ್ತು ಇತ್ತು. ಈ ಶಿಬಿರದ ಉದ್ಘಾಟನೆಯನ್ನು ಗಿರಿಜಾ ಕೌಲಗಿಯವರು ಅಭಿನಯ ಪೂರ್ವಕವಾಗಿ ಶಿಶುಗೀತೆಯೊಂದನ್ನು ಹೇಳುವುದರ ಮೂಲಕ ಉದ್ಘಾಟಿಸಿದರು. ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಸುಘೋಷ್ ಕೌಲಗಿ, ಮುರಳಿ ಶೃಂಗೇರಿ, ಕ್ಯಾತನಹಳ್ಳಿ ಶ್ರೀನಿವಾಸ್ ಕಾರ್ಯನಿರ್ವಹಿಸಿದರು. ಮೇ ೨೫ರಂದು ಶಿಬಿರದ ಮುಕ್ತಾಯವಾಯಿತು. ಮುಕ್ತಾಯದ ಸಮಾರಂಭದಲ್ಲಿ ಮಕ್ಕಳು ಎರಡು ನಾಟಕ ಮತ್ತು ಸಮೂಹ ನೃತ್ಯವನ್ನು

ಪ್ರದರ್ಶಿಸಿದರು. ದೊಡ್ಡ ಸಂಖ್ಯೆಯಲ್ಲಿ ಗ್ರಾಮಸ್ಥರು ನಾಟಕ ವೀಕ್ಷಿಸಲು ಬಂದಿದ್ದರು.

ಕನ್ನಡದ ಜನಪ್ರಿಯ ವಾರ ಪತ್ರಿಕೆ 'ಸುಧಾ'ದ ನಿವೃತ್ತ ಸಂಪಾದಕರಾದ ಶ್ರೀ ಹೆಚ್.ಎನ್.ಆನಂದ್ ಮತ್ತು ಅವರ ಕುಟುಂಬದವರು ಭೇಟಿಕೊಟ್ಟರು. ೧೯೬೩ರಲ್ಲಿ ಶ್ರೀ ಆನಂದ್‌ರವರು ಅಂತಾರಾಷ್ಟ್ರೀಯ ಅಂಗವಿಕಲರ ವರ್ಷದ ಸಂದರ್ಭದಲ್ಲಿ ಸುಧಾ ವಾರಪತ್ರಿಕೆಯಲ್ಲಿ ಕರುಣಾಗೃಹದ ಬಗ್ಗೆ ಮುಖ ಪುಟ ಲೇಖನ ಬರೆದು ಟ್ರಸ್ಟಿನ ಪರಿಚಯವು ಮೊದಲ ಬಾರಿಗೆ ಸಾರ್ವಜನಿಕರಿಗೆ ಆಗುವಂತೆ ಮಾಡಿದ್ದರು.

ರಂಗಕರ್ಮಿ ಮತ್ತು ಬೆಂಗಳೂರಿನ ಬಸವನಗುಡಿ ಕ್ಷೇತ್ರದಲ್ಲಿ 'ಗುಡಿ' ಎಂಬ ಹೆಸರಿನ ಪ್ರಾದೇಶಿಕ ವಸ್ತುಗಳ ಮಳಿಗೆಯೊಂದನ್ನು ನಡೆಸುತ್ತಿರುವ ಇಕ್ಬಾಲ್ ಅಹಮದ್ ಮತ್ತು ಕುಟುಂಬದವರು ಭೇಟಿಕೊಟ್ಟರು.

೨೦೧೦ ಮೇ ಮಾಹೆಯ ದಾನಿಗಳು

ಶ್ರೀ ಆರ್.ವಿ.ಮುಕುಂದ, ಡಾ.ದತ್ತಾತ್ರಿ–ಗಾಂಧಿ ಅಧ್ಯಯನ ಕೇಂದ್ರ,
ಶ್ರೀ ಆರ್.ಆರ್.ಆನವಟ್ಟಿ, ಎಂ.ಆರ್.ಭಾರ್ಗವ್, ಸತ್ಯಪ್ರಕಾಶ್ ವಾರಣಾಸಿ,
ಆರ್.ನಾರಾಯಣ್, ಶ್ರೀ ಹೆಚ್.ಎನ್.ಆನಂದ್, ಶ್ರೀ ಸುಬ್ಬರಾವ್,
ಶ್ರೀಮತಿ ಸುಷ್ಮಾನಿವಾಲ್ಕರ್ ಬೆಂಗಳೂರು,
ಶ್ರೀ ಕೆ.ಪ್ರಭಾಕರ್, ಶ್ರೀ ಕೆ.ರಂಗನಾಥ್, ಶ್ರೀ ಬಾಲಾಜಿ ಮಂಡ್ಯ,
ಶ್ರೀಮತಿ ಶೀಲಾಕುಮಾರಿ ಮೈಸೂರು ಇವರಿಗೆ ಮತ್ತು
ಸಂಸ್ಥೆಯ ಎಲ್ಲಾ ಮಾಹೆಯ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಪುಸ್ತಕ ಪರಿಚಯ

೨೦ ನೇ ಪುಟದಿಂದ...

ಸಾಕ್ಷ್ಯಚಿತ್ರಗಳನ್ನು ತಮ್ಮ ಇಲಾಖೆಯ ಮುಖ್ಯಸ್ಥರೊಂದಿಗೆ ದೂರದ ಹಳ್ಳಿಗಳಿಗೆ ಹೋಗಿ ತೋರಿಸುವುದು. ದಿನಾಲೂ ಸಾಕ್ಷ್ಯಚಿತ್ರದ ರೀಲನ್ನು ಸುತ್ತುವುದು ಮತ್ತು ಅದನ್ನು ಬಿಚ್ಚುವುದು ಇವರ ಕಾಯಕ. ಮೇಲ್ನೋಟಕ್ಕೆ ಇದು ಸುಲಭವಾದ ಕೆಲಸ ಎನಿಸುತ್ತದೆ. ಆದರೆ ಗುಂಡಿಬೈಲು ಶ್ರೀನಿವಾಸ್ ಈ ಕೆಲಸವನ್ನು ಎಷ್ಟೊಂದು ಶ್ರದ್ಧೆ ಮತ್ತು ಅರ್ಥಪೂರ್ಣವಾಗಿ ಮಾಡಿದರೆಂಬುದಕ್ಕೆ ಅವರ ಬಗ್ಗೆ ಅನೇಕ ಜೊತೆಗಾರರು ಬರೆದ ನೆನಪಿನ ಸಂಗ್ರಹವೇ ಈ ಮುಗಿಯದ ರೀಲು. ಇವರೆಲ್ಲರು ಶ್ರೀನಿವಾಸ್‌ರವರ ಬಗ್ಗೆ ಹಲವಾರು ದೃಷ್ಟಿ ಕೋನಗಳಿಂದ ನೋಡಿ ಅನುಭವಿಸಿದ್ದನ್ನು ರಸವತ್ತಾಗಿ ಬರೆದಿದ್ದಾರೆ. ೧೦೮ ಅನುಭವಗಳು ಈ ಪುಸ್ತಕದಲ್ಲಿ ಚಿತ್ರಿತವಾಗಿದೆ. ನಿವೃತ್ತನಾದ ಓರ್ವ ಸರ್ಕಾರಿ ನೌಕರರ ಬಗ್ಗೆ ಇಂಥ ಪುಸ್ತಕಗಳು ಬರುವುದು ಅಪರೂಪ. ಆದ್ದರಿಂದಲೇ ಮುಗಿಯದ ರೀಲು ಎಲ್ಲರೂ ಓದಬೇಕಾದ ಪುಸ್ತಕ. ಅಚ್ಚುಕಟ್ಟುತನ ಮತ್ತು ಕ್ರಿಯಾಶೀಲತೆಗೆ ಹೆಸರಾಗಿರುವ ಶಿವರಾಂ ಪೈಲೂರರ ಕೈಚಳಕ ಮತ್ತು ನವೀನತೆ ಈ ಪುಸ್ತಕದಲ್ಲಿ ಕಂಡು ಬರುತ್ತದೆ. ೨೯ ಜನ ಅಭಿಮಾನಿಗಳು ಬರೆದ ನೈಜ ಮಾತುಗಳ ಲೇಖನವನ್ನು ಪೈಲೂರರು ಸಂಪಾದಿಸಿದ್ದಾರೆ. ಈ ಪುಸ್ತಕದ ಶೀರ್ಷಿಕೆ ಅನ್ವರ್ಥಕವಾಗಿರಲೆಂದು ಇದನ್ನು ಮುಖಪುಟದ ಮೇಲೆ ಹಾಕದೆ ರಕ್ಷಾಪುಟದ ಕೊನೆಯಲ್ಲಿ ಹಾಕಲಾಗಿದೆ.

ಜನಪದ ನಿಲಯದ ಅಂತರಂಗದಲ್ಲಿ .. ೨೯

– ಸುರೇಂದ್ರ ಕೌಲಗಿ



ಅನೇಕ ಸಲ ನಾವು ಪ್ರಾರಂಭಿಸಿದ ಕೆಲಸ ಮುಂದುವರೆಯದೆ ಇರಬಹುದು. ಅದಕ್ಕೆ ಇನ್ನು ಭವಿಷ್ಯವಿಲ್ಲ, ಅದನ್ನು ಕೈ ಬಿಟ್ಟಂತೆಯೇ ಎಂಬ ಅನುಭವ ಆಗುವುದುಂಟು. ಆದರೆ ನಿಂತುಹೋದ ಅದೇ ಕೆಲಸ ಮುಂದಿನ ತಲೆಮಾರಿನವರ ವಿಚಾರ ಮತ್ತು ಪ್ರಯತ್ನದಿಂದ ಮುಂದುವರೆಯುತ್ತದೆ. ಇದು ಒಂದು ಜೀವನದ ತತ್ವವೇನೋ ಎಂಬಂತೆ ಅದರ ಅನುಭವ ಆಗಾಗ್ಗೆ ಆಗುವುದುಂಟು. ಈ ಸಂಬಂಧವಾಗಿ ಟ್ರಸ್ಟಿನಲ್ಲಿಯ ಇತ್ತೀಚಿಗಿನ ಕೆಲ ಉದಾಹರಣೆಗಳು ಸಹಜವಾಗಿಯೇ ಜ್ಞಾಪಕಕ್ಕೆ ಬರುತ್ತವೆ. ಐವತ್ತು ವರ್ಷಗಳ ಹಿಂದೆ ಟ್ರಸ್ಟ್ ಪ್ರಾರಂಭವಾದಾಗ ಹಾಕಿಕೊಂಡಿದ್ದ ಕೆಲ ಕಾರ್ಯಕ್ರಮಗಳು ನಿಂತುಹೋಗಿದ್ದವು. ಇನ್ನು ಆ ಕಾರ್ಯಕ್ರಮಗಳ ಪುನರ್ ಪ್ರಾರಂಭ ಕಷ್ಟಸಾಧ್ಯವೆಂದೇ ಅನಿಸುತ್ತಿತ್ತು. ಈಗ ಆ ಕಾರ್ಯಕ್ರಮಗಳೇ ಹೊಸ ಚೈತನ್ಯದಿಂದ, ಹೊಸ ಉತ್ಸಾಹದಿಂದ, ಹೊಸ ಆಯಾಮದೊಂದಿಗೆ ಪ್ರಾರಂಭವಾಗಿರುವುದನ್ನು ನೋಡಿದಾಗ ಸಂತೋಷವೆನಿಸುತ್ತದೆ ಮತ್ತು ಆಗ ಪಟ್ಟ ಶ್ರಮ ನಷ್ಟವಾಗಿಹೋಗಲಿಲ್ಲವೆಂದು ಅನಿಸುತ್ತದೆ. ಈ ಒಂದು ಪ್ರಗತಿಗೆ ಮುಂದಿನ ತಲೆಮಾರಿನವರ ಪ್ರಯತ್ನ ಮತ್ತು ಅವರಲ್ಲಿ ಸಹಜವಾಗಿ ಬೆಳೆದು ಬಂದಿದ್ದ ಸ್ವಭಾವ ಇದಕ್ಕೆ ಕಾರಣವಾಗಿರಬಹುದು. ಇದಕ್ಕೆ ಉದಾಹರಣೆಯಾಗಿ ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗ ಕೊಡಬೇಕೆಂಬ ಟ್ರಸ್ಟಿ ವಿಚಾರವನ್ನೇ ನೋಡೋಣ. ಮಹಿಳೆಯರ ಶಿಕ್ಷಣಕ್ಕಾಗಿ ಎರಡು ವರ್ಷ ಅವಧಿಯ ಐದು ಸಂಕ್ಷಿಪ್ತ ಶಿಕ್ಷಣ ಶಾಲೆಗಳನ್ನು ೧೯೬೨ ರಿಂದ ನಡೆಸಲಾಯಿತು. ಅಂದರೆ ಬಡತನ ಮತ್ತು ಸಾಮಾಜಿಕ ಸಮಸ್ಯೆಗಳಿಂದಾಗಿ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದಂಥ ವಯಸ್ಕ ಮಹಿಳೆಯರನ್ನು ಆಯ್ಕೆ ಮಾಡಿ ಅವರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗಾಗಿ ಅನೌಪಚಾರಿಕ ಪದ್ಧತಿಯಿಂದ ಎರಡು ವರ್ಷದ ಅವಧಿಯಲ್ಲಿ ಸಿದ್ಧಮಾಡಿ ಅವರನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿ ವಿದ್ಯಾರ್ಥಿಯರನ್ನಾಗಿ ಪರೀಕ್ಷೆಗೆ ಕೂರಿಸುವ ಯೋಜನೆಯೇ ಸಂಕ್ಷಿಪ್ತ ಶಿಕ್ಷಣ ಶಾಲೆ. ಈ ಪ್ರಕಾರದ ಐದು ಶಾಲೆಗಳಿಂದ ಸುಮಾರು ನೂರು ಮಹಿಳೆಯರು ಪ್ರಯೋಜನ ಪಡೆದರು. ಈ ಶಾಲೆಯಲ್ಲಿ ಓದಿ ತೇರ್ಗಡೆಯಾದ ಮಹಿಳೆಯರಿಗೆ ಉದ್ಯೋಗಾವಕಾಶ ದೊರೆಯುವ ವೃತ್ತಿ ತರಬೇತಿಯನ್ನು ಕೊಡಬೇಕೆಂದು ಯೋಚಿಸಲಾಯಿತು. ಆ ವಿಚಾರದ ಅನ್ವಯವಾಗಿ ಮುದ್ರಣಾಲಯ ಮತ್ತು ಹೊಲಿಗೆ ತರಬೇತಿ ವೃತ್ತಿಗಳನ್ನು ಪ್ರಾರಂಭಿಸಲಾಯಿತು. ಮುದ್ರಣಾಲಯದಲ್ಲಿ ತರಬೇತಿ ಪಡೆದ ಮಹಿಳೆಯರು ಬೇರೆ ಬೇರೆ ಊರುಗಳಲ್ಲಿ ಉದ್ಯೋಗ ಪಡೆದರು. ಆದರೆ ಹೊಲಿಗೆ ತರಬೇತಿ ಕೇಂದ್ರವು ಪೂರ್ಣಪ್ರಮಾಣದಲ್ಲಿ ಕೆಲಸಮಾಡದೆ ನಿಂತುಹೋಯಿತು. ಸುಮಾರು ಐವತ್ತು ವರ್ಷಗಳ ಹಿಂದೆ ಪ್ರಾರಂಭವಾಗಿ ನಿಂತುಹೋಗಿದ್ದ ಹೊಲಿಗೆ ವೃತ್ತಿಕೇಂದ್ರ ಪುನರ್ ಆರಂಭಗೊಂಡಿದೆ. ಅಂದರೆ ಯಾವ ಒಂದು ಕಾರ್ಯಕ್ರಮ ಆಗ ಸರಿ ಎಂದೆನಿಸಿ ಪ್ರಾರಂಭಿಸಲ್ಪಟ್ಟಿತೋ ಅದು ಕಾರಣಾಂತರಗಳಿಂದ ನಿಂತುಹೋಗಿ ಇಷ್ಟು ದೀರ್ಘಾವಧಿಯ ನಂತರ ಪುನರ್ ಪ್ರಾರಂಭವಾದುದನ್ನು ನೋಡಿದಾಗ ಸಂತೋಷವೆನಿಸದೇ ಇದ್ದೀತೆ? ಅಲ್ಲದೇ ಆಗ ಆ ವೃತ್ತಿತರಬೇತಿಗಾಗಿ ತಂದಿದ್ದ ಹೊಲಿಗೆ ಯಂತ್ರಗಳು ನಿರುಪಯುಕ್ತವಾಗಿ ಬಿದ್ದಿದ್ದಂಥವು. ಈಗ

ಅವು ಒಂದಲ್ಲ ಒಂದು ರೀತಿಯಲ್ಲಿ ಉಪಯೋಗಕ್ಕೆ ಬಂದು ಹೊಸ ಹೊಲಿಗೆ ಯಂತ್ರಗಳು ಬರುವುದಕ್ಕೆ ಕಾರಣವಾದದ್ದು ಕೂಡ ಸಂತೋಷದ ಸಂಗತಿ. ಟ್ರಸ್ಟಿನ ಲೆಕ್ಕದಲ್ಲಿ ಖರ್ಚುಹಾಕಿ ತಂದಿದ್ದ ಹೊಲಿಗೆ ಯಂತ್ರಗಳು ಹೀಗೆ ಹೊಸ ಯಂತ್ರಗಳ ಆಗಮನಕ್ಕೆ ಕಾರಣವಾದದ್ದನ್ನು ಅವಲೋಕಿಸಿದಾಗ ಜೀವನದ ವೈಚಿತ್ರ್ಯ ಅನುಭವಕ್ಕೆ ಬರುತ್ತದೆ. ಅಲ್ಲದೇ ಹೊಸ ತಲೆಮಾರಿನ ಮಹಿಳೆಯರು ಉದ್ಯೋಗದಲ್ಲಿ ತೊಡಗಿರುವ ಸಂಗತಿ ಕೂಡ ಉತ್ಸಾಹದಾಯಕವೆನಿಸುತ್ತದೆ. ಐವತ್ತು ವರ್ಷಗಳ ಹಿಂದೆ ಹೊಲಿಗೆ ತರಬೇತಿ ಕೇಂದ್ರವನ್ನು ಜನಪದ ನಿಲಯದಲ್ಲಿ ಪ್ರಾರಂಭಿಸಿದಾಗ ಸಂತೋಷ ಒಂದು ಅಥವಾ ಎರಡು ವರ್ಷದ ಮಗು. ಮುಂದೆ ಆ ಮಗುವೇ ಟ್ರಸ್ಟಿನ ಈ ಕಾರ್ಯಕ್ರಮವನ್ನು ಮುಂದುವರೆಸಲು ಸಾಧ್ಯವಾಗುತ್ತದೆ ಎಂದು ಹೇಗೆ ಊಹಿಸಲು ಸಾಧ್ಯ? ಆದರೆ ಈಗ ಆ ಊಹೆ ಸಾಕಾರಗೊಂಡಿದೆ. ಈಗ ಹೊಲಿಗೆ ಕೇಂದ್ರದಲ್ಲಿ ಆರು ಜನ ಮಹಿಳೆಯರು ಪ್ರತಿದಿನ ೬ ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಖಾದಿ ಬಟ್ಟೆಯಲ್ಲಿ ಕುರ್ತಾ, ಬನಿಯನ್, ಟೀ ಶರ್ಟ್, ಕೌದಿ, ಚೂಡಿದಾರ್, ಪೈಜಾಮ ಇತ್ಯಾದಿ ವಿವಿಧ ಬಗೆಯ ಸಿದ್ಧಉಡುಪುಗಳನ್ನು ತಯಾರಿಸುತ್ತಾರೆ. ತಿಂಗಳೊಂದಕ್ಕೆ ಪ್ರತಿಯೊಬ್ಬರೂ ಒಂಭತ್ತುನೂರು ರೂಪಾಯಿಯಿಂದ ಸಾವಿರದ ಮುನ್ನೂರು ರೂಪಾಯಿಗಳವರೆಗೆ ಸಂಪಾದಿಸುತ್ತಾರೆ. ಇವರೆಲ್ಲರೂ ಮೇಲುಕೋಟೆಯವರೇ ಆಗಿರುವುದರಿಂದ ಇವರ ಸಂಪಾದನೆಯಲ್ಲಿ ಬಹಳಷ್ಟು ಅವರಿಗೇ ಉಳಿತಾಯವಾಗುತ್ತದೆ. ಏಕೆಂದರೆ ಮನೆಬಾಡಿಗೆ, ಪ್ರಯಾಣಖರ್ಚು ಇತ್ಯಾದಿಗಳು ಇರುವುದಿಲ್ಲ.

ಟ್ರಸ್ಟಿನ ಈ ಹೊಲಿಗೆ ಉದ್ಯಮಕ್ಕೆ ಬೇರೆ ಬೇರೆ ಖಾದಿಸಂಸ್ಥೆಗಳು ತಮ್ಮ ಕೆಲಸವನ್ನು ಕೊಡುವುದರ ಮೂಲಕ ಸಹಾಯಮಾಡುತ್ತಿವೆ. ಇಲ್ಲಿ ತಯಾರಾದ ಬಟ್ಟೆಗಳನ್ನು ಮಾರಲು ಟ್ರಸ್ಟಿನದೇ ಖಾದಿ ಭಂಡಾರದ ವ್ಯವಸ್ಥೆಯೂ ಇದೆ. ಇತ್ತೀಚೆಗೆ ಟ್ರಸ್ಟಿನಲ್ಲಿಯ ಮಹಿಳಾ ಉದ್ಯೋಗಿಗಳು ಸೇರಿ ಸ್ವಸಹಾಯ ಸಂಘವನ್ನು ಸ್ಥಾಪಿಸಿಕೊಂಡು ಪ್ರಯೋಜನ ಪಡೆಯುತ್ತಿದ್ದಾರೆ. ತಮ್ಮ ಈ ಸಂಘಕ್ಕೆ ಖಾದಿ ನೇಕಾರರ ಮಹಿಳಾ ಸ್ವ ಸಹಾಯ ಸಂಘ ಎಂದು ಹೆಸರನ್ನಿಟ್ಟಿದ್ದಾರೆ. ಈ ಸಂಘಕ್ಕೆ ಮಾರ್ಗದರ್ಶಕರಾಗಿ ಗೀತಾ ಕೌಲಗಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಗೀತಾ ಕೌಲಗಿ ಸಹ ಟ್ರಸ್ಟಿಗೆ ಸೇರಿದ ಹೊಸ ತಲೆಮಾರಿನವರು. ಈ ಕೇಂದ್ರ ವಿಶೇಷವಾಗಿ ಬೆಳೆಯುವುದಕ್ಕಾಗಿ ಏನೆಲ್ಲ ಪ್ರಯತ್ನವನ್ನು ಮಾಡಬೇಕೋ ಅದನ್ನು ಸಂತೋಷ್ ಮಾಡುತ್ತಿದ್ದಾರೆ. ಒಳ್ಳೆಯ ಗುಣಮಟ್ಟದ ಖಾದಿ ಎಲ್ಲಿ ದೊರೆಯುವುದೆಂಬುದನ್ನು ತಿಳಿದು ಅಲ್ಲಿಂದ ತರಿಸಿ ಬಟ್ಟೆಗಳನ್ನು ಹೊಲಿಸುವುದರಿಂದ ಬಟ್ಟೆಗೆ ಒಳ್ಳೆಯ ಬೇಡಿಕೆ ಬರುತ್ತದೆ. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಟ್ರಸ್ಟಿನಲ್ಲಿಯೇ ವಿಶೇಷವಾದ ಗುಣಮಟ್ಟದ ಆಕರ್ಷಕ ಖಾದಿ ಬಟ್ಟೆಯನ್ನು ತಯಾರಿಸಿ ಅದನ್ನು ಸಿದ್ಧ ಉಡುಪುಗಳನ್ನಾಗಿ ಪರಿವರ್ತಿಸುವ ಪ್ರಯತ್ನವು ನಡೆಯುತ್ತಿದೆ. ಸಾಧ್ಯವಾದಷ್ಟು ರಿಬೇಟ್‌ನ ಸಂಕೋಲೆಯಿಂದ ಬಿಡುಗಡೆಹೊಂದಿ ಖಾದಿ ಉದ್ಯಮವನ್ನು ಜನರ ನೇರ ವಿಶ್ವಾಸದ ಬಲದಿಂದ ಬೆಳೆಸಬೇಕೆಂಬುದು ಸಂತೋಷ್‌ರವರ ವಿಚಾರವಾಗಿದೆ. ಹೀಗೆ ಒಂದು ಕಾಲಕ್ಕೆ ನಿಂತುಹೋಗಿದ್ದ ಮತ್ತು ಭವಿಷ್ಯವಿಲ್ಲವೇನೋ ಎನ್ನಿಸಿದ್ದ ವೃತ್ತಿಯಾಧಾರಿತ ಕಾರ್ಯಕ್ರಮವು ನಡೆದುಕೊಂಡು ಬರುತ್ತಿರುವುದಕ್ಕೆ ಹೊಸ ತಲೆಮಾರಿನ ಸ್ಪರ್ಶವೇ ಕಾರಣ. ಆದ್ದರಿಂದಲೇ ಎಷ್ಟೇ ನಿರಾಶೆಯ ವಾತಾವರಣವಿದ್ದರೂ ಮುಂದಿನ ತಲೆಮಾರಿನವರ ಬಗ್ಗೆ ಆಸೆಯನ್ನು ಕಳೆದುಕೊಂಡಿಲ್ಲ ಎಂಬ ಮಾತನ್ನು ಅನೇಕ ಅನುಭವಸ್ಥರು ಹೇಳುತ್ತಾರೆ ಎಂದು ಅನಿಸುತ್ತದೆ.

ಈ ಲೇಖನದಲ್ಲಿ ಸಂತೋಷ್ ಕೌಲಗಿಯವರ ಹೆಸರನ್ನು ಇಂದಿನ ವಾಸ್ತವಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪ್ರಸ್ತಾಪಿಲಾಗಿದೆ.

(ಮುಂದುವರೆಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಕಳೆದ ಏಪ್ರಿಲ್ ೯ ರಿಂದ ೧೩ರವರೆಗೆ ಸರ್ವೋದಯ ಆಂದೋಲನದ ಕೇಂದ್ರ ಸಂಸ್ಥೆ ಸರ್ವಸೇವಾ ಸಂಘ ಬೆಳೆಯುತ್ತಿರುವ ನಕ್ಸಲೀಯರ ಸಮಸ್ಯೆಗೆ ಅಹಿಂಸಾತ್ಮಕ ಪರಿಹಾವಿದೆಯೇ ಎಂದು ಆಲೋಚಿಸಲು ಸೇವಾಗ್ರಾಮದಲ್ಲಿ ಒಂದು ಸಭೆಯನ್ನು ಏರ್ಪಡಿಸಿತು. ನಲವತ್ತು ಜನ ಚಿಂತಕರು ಸೇರಿದ್ದರು. ೧೮೮೪ನೇ ಇಸವಿಯಲ್ಲಿ ಇಂಗ್ಲಿಷ್ ಸರ್ಕಾರ ಜಾರಿಗೊಳಿಸಿದ್ದ ಭೂಸ್ವಾಧೀನ ಕಾನೂನು ಇನ್ನೂ ಜಾರಿಯಲ್ಲಿರುವ ಬಗ್ಗೆ ಚಿಂತನೆ ನಡೆಯಿತು. ಪ್ರಕೃತಿ ದತ್ತವಾದ ಭೂಮಿಯಂಥ ವಿಷಯದ ಬಗ್ಗೆ ಪ್ರಜಾಪ್ರಭುತ್ವ ಭಾರತ ಏಕೆ ಗಂಭೀರವಾಗಿ ಪರಿಗಣಿಸಿಲ್ಲ ಎಂಬ ಪ್ರಶ್ನೆ ಕುರಿತು ಚರ್ಚಿಸಲಾಯಿತು. ಸ್ವತಂತ್ರ ಭಾರತದ ಅಗತ್ಯಗಳನ್ನು ಮತ್ತು ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ ಗಾಂಧಿ, ವಿನೋಬಾ ಮತ್ತು ಜೆ.ಪಿ.ಯವರಂಥ ನಾಯಕರು ಪ್ರೋತ್ಸಾಹಿಸಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿಂದಿನ ರೂಪುರೇಷೆ ಹೇಗಿದೆ ಎಂಬ ಬಗ್ಗೆ ಆಲೋಚನೆ ನಡೆದು ಇಂದಿನ ಪರಿಸ್ಥಿತಿಯಲ್ಲಿ ಅಗತ್ಯವಾದರೆ ಅಸಹಕಾರ ಚಳುವಳಿಯನ್ನು ಏಕೆ ನಡೆಸಬಾರದು? ಜಯಪ್ರಕಾಶ್ ನಾರಾಯಣ್ ಪ್ರತಿಪಾದಿಸಿದ್ದ ಸಂಪೂರ್ಣ ಕ್ರಾಂತಿ ಆಂದೋಲನ ಇಂದಿಗೂ ಪ್ರಸ್ತುತವಾಗಿದೆ. ಆದ್ದರಿಂದ ಇಂದಿನ ತಲೆಮಾರಿನವರ ಮಾನಸಿಕ ಸ್ಥಿತಿಗಳನ್ನು ಮತ್ತು ಉನ್ನತ ತಾಂತ್ರಿಕ ಜ್ಞಾನದ ಗಮನದಲ್ಲಿರಿಸಿಕೊಂಡು ಸಂಪೂರ್ಣ ಕ್ರಾಂತಿಯನ್ನು ಪ್ರಾರಂಭಿಸಲು ಆಲೋಚಿಸಬಹುದು. ಗ್ರಾಮ ಸಭೆಗಳು ತುಂಬ ಅಗತ್ಯವಾಗಿವೆ. ಅವು ಅಧಿಕಾರದ ಸಹಭಾಗಿತ್ವವನ್ನು ಒದಗಿಸಲು ತುಂಬ ಸಹಕಾರಿಯಾಗಿದೆ. ಆದರೆ ಗ್ರಾಮಸಭೆಗಳು ಸಂವಿಧಾನ ಬದ್ಧವಾಗಿ ರಚನೆಯಾಗಿರುವ ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಘರ್ಷಣೆಗೆ ಇಳಿಯುವ ಸಾಧ್ಯತೆಯಿದೆ. ದಿನೇದಿನೇ ಹೆಚ್ಚುತ್ತಿರುವ ಆತಂಕ ಮತ್ತು ಹಿಂಸೆಗೆ ಉತ್ತರ ಪಡೆಯುವುದಕ್ಕಾಗಿ ಯಾವ ಪೂರ್ವಭಾವಿ ಷರತ್ತು ಇಲ್ಲದೆ ಮತ್ತು ಪರಸ್ಪರ ಗೌರವ ಮತ್ತು ಸಮಾನತೆ ಆಧಾರದ ಮೇಲೆ ಚರ್ಚೆ ನಡೆಯುವುದು ಅಗತ್ಯವಾಗಿದೆ. ನೇಪಾಳದಿಂದ ಕನ್ಯಾಕುಮಾರಿಯವರೆಗೆ ಇರುವ ಕೆಂಪು ಪಟ್ಟಿ ಹಾಗೂ ಗುಜರಾತ್‌ನಿಂದ ಕರ್ನಾಟಕದವರೆಗೆ ಇರುವ ಬಿಳಿ ಪಟ್ಟಿ ಇವು ಸಮಾನಾಂತರವಾಗಿ ಮುನ್ನಡೆಯುತ್ತಿದೆ. ಅಂತಿಮವಾಗಿ ಇವೆರಡರ ಮಧ್ಯ ಘರ್ಷಣೆಯಾಗುವ ಸಂಭವವಿದೆ. ದೇಶದ ಶೇ ೮೦ರಷ್ಟು ಜನರ ಆಶೋತ್ತರಗಳನ್ನು ಪೂರೈಸಲು ವಿಫಲವಾಗಿರುವ ಪ್ರಜಾತಾಂತ್ರಿಕ ಪ್ರಜಾಪ್ರಭುತ್ವವು ಸ್ಪಷ್ಟವಾಗಿ ಗೋಚರಿಸುತ್ತದೆ. ಬ್ರಿಟಿಷ್ ಪಾರ್ಲಿಮೆಂಟನ್ನು ಒಂದು ವೇಶ್ಯೆ ಎಂದು ಕರೆಯುವ ಧೈರ್ಯ ಮಾಡಿದ್ದರು ಗಾಂಧೀ. ನಾವು ಭಾರತದ ಪಾರ್ಲಿಮೆಂಟಿನ ಚರ್ಯೆಯನ್ನು ಅಭ್ಯಸಿಸಬೇಕಿದೆ.

ಜನರ ಪ್ರಾಥಮಿಕ ವಿಷಯಗಳಲ್ಲಿ ಭೂಮಿ ಒಂದಾಗಿದೆ. ಸರ್ವೋದಯ ಸಮೂಹ ಮತ್ತು ಎಡ ಪಂಥೀಯ ಸಂಘಟನೆಗಳು ಯೋಜನಾಬದ್ಧವಾಗಿ ಪ್ರಯತ್ನಿಸಿದಲ್ಲಿ ನಕ್ಸಲೀಯರ ಸಮಸ್ಯೆ ಪರಿಹಾರಕ್ಕೆ ಸಹಮತದ ವಿಚಾರವನ್ನು ಪಡೆಯಬಹುದು.

ವರದಿ : ಇ.ಪಿ ಮೆನನ್

ಖಾದಿ ವಿಚಾರ

ಸಾಗರ ತಾಲ್ಲೂಕ್ ಹೆಗ್ಗೋಡಿನಂಥ ಚಿಕ್ಕ ಗ್ರಾಮದಲ್ಲಿ ನೇಯ್ಗೆ ಉದ್ಯೋಗದ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಕ್ರಾಂತಿಯನ್ನು ಮಾಡಿರುವ ಶ್ರೀ ಪ್ರಸನ್ನರವರ ಚರಕ ಸಂಸ್ಥೆಯ ವಿಷಯ ಬಹಳಷ್ಟು ಜನರಿಗೆ ತಿಳಿದಿದೆ. ಗಾಂಧೀಜಿಯವರ ಗ್ರಾಮೀಣ ಜನರಿಗೆ ವಿಕೇಂದ್ರಿಕೃತ ಉದ್ಯೋಗವೆಂಬ ಕಲ್ಪನೆಯನ್ನು ಸಾಕಾರಗೊಳಿಸಿರುವ ಹೆಗ್ಗಳಿಕೆ ಪ್ರಸನ್ನ ಮತ್ತು ಚರಕದ್ದು. ಈಗ ಪ್ರಸನ್ನರವರು ಈ ನಿಟ್ಟಿನಲ್ಲಿ ಇನ್ನೊಂದು ಹೆಜ್ಜೆ ಇಟ್ಟಿದ್ದಾರೆ. ೨೦೦೯-೨೦೧೦ನೇ ಸಾಲಿನಿಂದ ದೇಸಿ ರಾಷ್ಟ್ರೀಯ ಪ್ರಶಸ್ತಿಯ ಹೆಸರನ್ನು ದಾಸಿಮಯ್ಯ ರಾಷ್ಟ್ರೀಯ ಪ್ರಶಸ್ತಿ ಎಂದು ಮರು ನಾಮಕರಣ ಮಾಡಿದ್ದಾರೆ.ಕಾಯಕ ಯೋಗಿ ಮತ್ತು ವಚನಕಾರಕರೆದು ಪ್ರಸಿದ್ಧಿ ಪಡೆದಿರುವ ದಾಸಿಮಯ್ಯನವರ ಹೆಸರನ್ನು ಈ ಪ್ರಶಸ್ತಿಗೆ ಇಡಲಾಗಿದೆ. ಇದು ಸೂಕ್ತ ಕ್ರಮವೇ ಆಗಿದೆ.ಖಾದಿ ಕ್ಷೇತ್ರದಲ್ಲಿ ೧೯೩೮ ರಿಂದ ಹಾಸನ ಜಿಲ್ಲೆಯ ಹೊಳೇನರಸಿಪುರ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘಕ್ಕೆ ದಾಸಿಮಯ್ಯ ಪ್ರಶಸ್ತಿ ದೊರೆತಿದೆ. ಈ ಸಂಸ್ಥೆಯು ಚಾಮರಾಜನಗರ ಜಿಲ್ಲೆಯ ಬದನವಾಳು ಗ್ರಾಮದಲ್ಲಿ ಖಾದಿ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಈ ಗ್ರಾಮಕ್ಕೆ ೧೯೩೨ರಲ್ಲಿ ಮಹಾತ್ಮಗಾಂಧೀಜಿ ಭೇಟಿ ಕೊಟ್ಟಿದ್ದರು. ಮೂರು ದಿನ ಅಲ್ಲೇ ವಾಸ್ತವ್ಯ ಮಾಡಿದ್ದರು. ಆದರೆ ಈ ಕೇಂದ್ರವು ಮುಚ್ಚಿಹೋಗುವ ಸ್ಥಿತಿಯಲ್ಲಿದ್ದಾಗ ಹೊಳೇನರಸಿಪುರ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘವು ಅದನ್ನು ತನ್ನ ಮಡಿಲಿಗೆ ಹಾಕಿಕೊಂಡು ಆ ಕೇಂದ್ರವನ್ನು ನಡೆಸಿಕೊಂಡು ಬರುತ್ತಿದೆ. ಕಳೆದ ವರ್ಷ ಈ ಸಂಸ್ಥೆಯು ೯ ಕೋಟಿ ರೂಪಾಯಿಯಷ್ಟು ವ್ಯವಹಾರ ಮಾಡಿದೆ. ಒಂದು ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿದೆ. ಈ ಸಂಸ್ಥೆಯ ವಿಶೇಷವೇನೆಂದರೆ ಇದು ಈಗ ತುಂಬ ಕ್ಷೀಣಿಸುತ್ತಿರುವ ಸಹಕಾರ ಕ್ಷೇತ್ರದಲ್ಲಿ ಇದ್ದುಕೊಂಡು ಕೆಲಸ ಮಾಡುತ್ತಿದೆ. ಅಲ್ಲದೆ ತನ್ನ ನೌಕರರಿಗೆ ಸರ್ಕಾರದ ವೇತನ ಶ್ರೇಣಿ ಕೊಡುತ್ತಿದೆ. ಇಂಥ ವ್ಯವಸ್ಥೆಯ ಖಾದಿ ಸಂಸ್ಥೆ ಕರ್ನಾಟಕದಲ್ಲಿ ಅಪರೂಪವೆಂದೇ ಹೇಳಬೇಕು.ಈ ಸಂಸ್ಥೆಯ ಖಾದಿ ಕ್ಷೇತ್ರದ ಸೇವೆಯನ್ನು ಪರಿಗಣಿಸಿ ದೇಸಿ ಸಂಸ್ಥೆಯು ಹೊಳೇನರಸಿಪುರದ ಸಂಸ್ಥೆಗೆ ದಾಸಿಮಯ್ಯ ಪ್ರಶಸ್ತಿ ಕೊಟ್ಟಿರುವುದು ಸಂತೋಷದ ಸಂಗತಿ.ಈ ಪ್ರಶಸ್ತಿ ೪೦ಸಾವಿರ ರೂಪಾಯಿಗಳ ನಗದು ಬಹುಮಾನ ಹಾಗೂ ಅಷ್ಟೇ ಮೊತ್ತದ ಉತ್ಪನ್ನಗಳ ಖರೀದಿ ಮತ್ತು ಗಾಂಧೀಯವರ ಕಂಚಿನ ಪ್ರತಿಮೆಯನ್ನು ಒಳಗೊಂಡಿರುತ್ತದೆ. ಈಗ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿರುವ ಮಹದೇವಪ್ಪನವರಿಗೆ ಅಭಿನಂದನೆಗಳು.

ದಾಸಿಮಯ್ಯ ಪ್ರಶಸ್ತಿ ಪಡೆದ ಆನಂದ ಧಾರವಾಡರೂ ಅಭಿನಂದನೆಗೆ ಪಾತ್ರರು. ಮಗ್ಗಗಳ ಅಭಿವೃದ್ಧಿಗೆ, ನೈಸರ್ಗಿಕ ಬಣ್ಣಗಾರಿಕೆ, ವಸ್ತ್ರಗಳ ತಯಾರಿಕೆಯಲ್ಲಿ ಅಸಂಪ್ರದಾಯಿಕ ನಾರುಗಳ ಬಳಕೆ, ಹೀಗೆ ನೇಯ್ಗೆ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗ ಮತ್ತು ಪ್ರಗತಿಪರ ವಿಚಾರಕ್ಕೆ ಆನಂದ್ ಹೆಸರುವಾಸಿ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ತೈಲೂರು ವೆಂಕಟಕೃಷ್ಣ – ಮಂಡ್ಯ,

ಶ್ರೀ ಆರ್.ಸದಾನಂದ, ಶ್ರೀ ಜಿ.ಎಸ್.ಜಯದೇವ – ಚಾಮರಾಜನಗರ

ಶ್ರೀ ಹೆಚ್.ವಿ.ಮಂಜುನಾಥ್, ಶ್ರೀಮತಿ ಗೀತಾ ಪಾರ್ಥಸಾರಥಿ

ಶ್ರೀ ಎಂ.ಎಸ್.ಸತೀಶ್ , ಶ್ರೀ ವೈ.ಎಸ್.ಪ್ರಭಾಕರ್ – ಬೆಂಗಳೂರು

ಶ್ರೀ ಎಲ್.ನರಸಿಂಹಯ್ಯ – ತುಮಕೂರು

ಶ್ರೀ ಗುರುರಾಜು ಹಬ್ಬು – ಜಮಖಂಡಿ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಪ್ರಭಾಕರ್, ಶ್ರೀ ಹೆಚ್. ೩೫೭.ಡಿ.ಚೌಡಯ್ಯ, ಶ್ರೀ ಎಂ.ಎಸ್.ಆತ್ಮಾನಂದ,

ಶ್ರೀ ವಿ.ಇ.ಲೋಕೇಶ್ – ಮಂಡ್ಯ

ಶ್ರೀ ಪಿ.ಎಂ.ಹೆಗಡೆ, ಶ್ರೀ ಎನ್.ಪ್ರೇಮಕುಮಾರ್,

ಶ್ರೀ ಎಂ.ವಿ.ನರಸಿಂಹ – ಬೆಂಗಳೂರು,

ಶ್ರೀ ಹೋ.ನಂ.ಜಯದೇವೇಗೌಡ, ಶ್ರೀ ಹೆಚ್.ಎಂ.ಶಿವಣ್ಣ – ಹಾಸನ

ಶ್ರೀಮತಿ ಶಾರದಾ ಜಡೆ – ಸಾಂಗ್ಲಿ

ಶ್ರೀ ಬಿ.ಜಿ.ಮಂಜುನಾಥ್‌ರಾವ್ – ಹೊಳೆನರಸೀಪುರ

ಶ್ರೀ ಎಂ.ಆರ್.ರವಿಶಂಕರ್ – ರಾಮನಗರ

ಶ್ರೀ ಆರ್.ಹರೀಶ್ – ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA

Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.